ಸ್ವತಂತ್ರ ಮತ್ತು ಅನುವಾದಿತ ಮಹಿಳಾ ಆತ್ಮಕಥೆಗಳ ತೌಲನಿಕ ಅಧ್ಯಯನ

ಪಿಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ
ಸಂಶೋಧನಾ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧನಾ ವಿದ್ಯಾರ್ಥಿ
ನಾಗೇಶ ನಾಯ್ಕ

ಮಾರ್ಗದರ್ಶಕರು
ಪ್ರೊ.ಸೋಮಣ್ಣ
ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–೫೭೪೧೯೯

ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–೫೭೪೧೯೯

೨೦೨೩

ಸ್ವತಂತ್ರ ಮತ್ತು ಅನುವಾದಿತ ಮಹಿಳಾ ಆತ್ಮಕಥೆಗಳ ತೌಲನಿಕ ಅಧ್ಯಯನ

ಅಧ್ಯಾಯ–೧ ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೨. ಅಧ್ಯಯನದ ಸ್ವರೂಪ

೧.೩. ಪ್ರಸ್ತುತ ಅಧ್ಯಯನದ ಮಹತ್ವ

೧.೪. ಅಧ್ಯಯನ ವಿಧಾನ ಕ್ರಮ

೧.೫. ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ –೨ ಕನ್ನಡದಲ್ಲಿ ಮಹಿಳಾ ಆತ್ಮಕಥೆಗಳ ಹುಟ್ಟು ಮತ್ತು ಬೆಳವಣಿಗೆ

೨.೧. ಆತ್ಮಕಥೆ– ಜೀವನಚರಿತ್ರೆ ಸಂಬಂಧಾಂತರಗಳು

೨.೨. ಆತ್ಮಚರಿತ್ರ ಬರೆಹ– ಪಾಶ್ಚಾತ್ಯರ ಮತ್ತು ಭಾರತೀಯರ ನಿಲುವುಗಳು.

೨.೩. ಕನ್ನಡದಲ್ಲಿ ಮಹಿಳಾ ಆತ್ಮಕಥೆಗಳ ಆರಂಭಕಾಲ

೨.೪. ಮಹಿಳಾ ಆತ್ಮಕಥೆಗಳನ್ನು ರಚಿಸಿದ ಪ್ರಮುಖರು

೨.೫. ಆತ್ಮಕಥೆಯ ರಚನೆಯ ಕುರಿತು ಮಹಿಳೆಯರ ನಿಲುವುಗಳು

೨.೬. ಆತ್ಮಕಥೆಯ ರಚನೆಯ ಪ್ರೇರಣೆಗಳು

ಅಧ್ಯಾಯ– ೩: ಅನುವಾದಿತ ಮಹಿಳಾ ಆತ್ಮಕಥೆಗಳ ಹುಟ್ಟು ಮತ್ತು ಬೆಳವಣಿಗೆ

೩.೧. ಕನ್ನಡಕ್ಕೆ ಅನುವಾದಗೊಂಡ ಮಹಿಳಾ ಆತ್ಮಕಥೆಗಳ ಆರಂಭಕಾಲ

೩.೨. ಬಂಗಾಳಿ ಭಾಷೆಯ ಮಹಿಳಾ ಆತ್ಮಕಥೆಗಳು

೩.೩ ಪಂಜಾಬಿ ಭಾಷೆಯ ಮಹಿಳಾ ಆತ್ಮಕಥೆಗಳು

೩.೪. ತಮಿಳು ಭಾಷೆಯ ಮಹಿಳಾ ಆತ್ಮಕಥೆಗಳು

೩.೫. ಮರಾಠಿ ಭಾಷೆಯ ಮಹಿಳಾ ಆತ್ಮಕಥೆಗಳು

೩.೬. ಇಂಗ್ಲೀಷ್ ಭಾಷೆಯ ಮಹಿಳಾ ಆತ್ಮಕಥೆಗಳು

೩.೭. ಮಹಿಳಾ ಆತ್ಮಕಥೆಗಳ ಅನುವಾದಕರು

ಅಧ್ಯಾಯ– ೪: ಲೇಖಕಿಯರ ಆತ್ಮಕಥೆಗಳ ವೈಶಿಷ್ಟ್ಯ

೪.೧. ಅನುಪಮಾ ನಿರಂಜನ

೪.೨. ಚಿ.ನ. ಮಂಗಳ

೪.೩. ಸಾರಾ ಅಬೂಬಕ್ಕರ್ ಮತ್ತು ಪ್ರತಿಭಾ ನಂದಕುಮಾರ

೪.೪. ಕಮಲಾ ದಾಸ್

೪.೫. ಅಮೃತ ಪ್ರೀತಂ

೪.೬. ಅಜಿತ್ ಕೌರ್

ಅಧ್ಯಾಯ– ೫: ಕಲಾವಿದೆಯರ ಮತ್ತು ಹೋರಾಟಗಾರ್ತಿಯರ ಆತ್ಮಕಥೆಗಳ ವೈಶಿಷ್ಟ್ಯ

೫.೧. ಗಂಗೂಬಾಯಿ ಹಾನಗಲ್(ಸಂಗೀತ)

೫.೨. ಮಳವಳ್ಳಿ ಸುಂದರಮ್ಮ(ರಂಗಭೂಮಿ)

೫.೩. ಬಿ. ಜಯಮ್ಮ (ಸಿನಿಮಾ)

೫.೪. ಕೆ.ನಾಗರತ್ನಮ್ಮ(ರಂಗಭೂಮಿ)

೫.೫. ಉಮಾಶ್ರೀ(ಸಿನಿಮಾ)

೫.೬. ಮಾಧವಿ ದೇಸಾಯಿ (ಸಿನಿಮಾ)

೫.೭. ಸುನೀತಾ ದೇಶಪಾಂಡೆ (ರಂಗಭೂಮಿ)

೫.೮. ಗೋದಾವರಿ ಪುರಳೇಕರ್ (ಸಾಮಾಜಿಕ ಕಾರ್ಯಕರ್ತೆ)

ಅಧ್ಯಾಯ– ೬: ಸಮಾಜದ ಅಂಚಿನಲ್ಲಿ ಉಳಿದ ಮಹಿಳೆಯರ ಆತ್ಮಕಥೆಗಳ ವೈಶಿಷ್ಟ್ಯ

೬.೧. ಜಾಜಿ ತಿಮ್ಮಯ್ಯ (ಜೇನು ಕುರುಬ)

೬.೨ ದು.ಸರಸ್ವತಿ (ದಲಿತ)

೬.೩. ವೀಣಾಧರಿ (ಎಚ್.ಐ.ವಿ ಬಾಧಿತೆ)

೬.೪. ನಳಿನಿ ಜಮೀಲಾ(ಲೈಂಗಿಕ ಕಾರ್ಯಕರ್ತೆ)

೬.೫ ಬೇಬಿ ಹಾಲ್ದಾರ್ (ಶ್ರಮಿಕ ವರ್ಗ)

೬.೬. ಬೇಬಿತಾಯಿ ಕಾಂಬಳೆ (ದಲಿತ)

ಅಧ್ಯಾಯ– ೭: ಮಹಿಳಾ ಆತ್ಮಕಥೆಗಳ ತೌಲನಿಕ ಅಧ್ಯಯನ

ಕನ್ನಡ ಮಹಿಳಾ ಆತ್ಮಕಥೆಗಳು ಮತ್ತು ಅನುವಾದಿತ ಮಹಿಳಾ ಆತ್ಮಕಥೆಗಳ ವಸ್ತು ವಿನ್ಯಾಸ

೭.೧. ಆತ್ಮಕಥಾಗಾರ್ತಿಯರ ವೈಯಕ್ತಿಕ ಬದುಕಿನ ವಿವರಗಳು

೭.೧.೧. ಬಾಲ್ಯ

೭.೧.೨. ಹರೆಯ

೭.೧.೩. ದಾಂಪತ್ಯ

೭.೨ ಆತ್ಮಕಥಾಗಾರ್ತಿಯರ ಸಾಂಸ್ಕೃತಿಕ ಬದುಕಿನ ವಿವರಗಳು

೭.೨.೧. ಸಮಾಜ

೭.೨.೨. ಸಂಸ್ಕೃತಿ

೭.೨.೩. ಭಾಷೆ

೭.೩. ಆತ್ಮಕಥಾಗಾರ್ತಿಯರು ಎದುರಿಸಿದ ಸಮಸ್ಯೆಗಳು ಮತ್ತು ಸವಾಲುಗಳು

೭.೩.೧. ಕೌಟುಂಬಿಕ ಸಮಸ್ಯೆಗಳು

೭.೩.೨. ಸಾಮಾಜಿಕ ಸಮಸ್ಯೆಗಳು

೭.೩.೩. ಧಾರ್ಮಿಕ ಸಮಸ್ಯೆಗಳು

೭.೩.೪. ವೃತ್ತಿಯಲ್ಲಿನ ಸಮಸ್ಯೆಗಳು

೭.೩.೫. ಸಾಹಿತ್ಯಿಕ ಸಮಸ್ಯೆಗಳು

ಅಧ್ಯಾಯ– ೮: ಸಮಾರೋಪ

೮.೧. ಅಧ್ಯಯನದ ಫಲಿತಗಳು

೮.೨. ಅಧ್ಯಯನ ಸಾಧ್ಯತೆಗಳು

ಅನುಬಂಧ– ೧

೧.೧ ಮೂಲಪಠ್ಯಗಳ ಪಟ್ಟಿ

೧.೨. ಅನುಷಂಗಿಕ ಪಠ್ಯಗಳ ಪಟ್ಟಿ

ಅನುಬಂಧ– ೨

೨.೧. ಪರಾಮರ್ಶನಾ ಕೃತಿಗಳು

೨.೨. ಪತ್ರಿಕಾ ಲೇಖನಗಳು

ಸ್ವತಂತ್ರ ಮತ್ತು ಅನುವಾದಿತ ಮಹಿಳಾ ಆತ್ಮಕಥೆಗಳ ತೌಲನಿಕ ಅಧ್ಯಯನ

ಅಧ್ಯಾಯ– ೧ ಪ್ರಸ್ತಾವನೆ:

ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಆತ್ಮಕಥೆಯು ಒಂದು. 'ಆತ್ಮಕಥೆಗಳಿಗೆ ಮೂಲ ಯೂರೋಪಿನ ಆತ್ಮನಿವೇದನೆ ಅಥವಾ ಆತ್ಮಪರಿಶೋಧನೆ. ಪಾಶ್ಚಾತ್ಯದಲ್ಲಿ ತಾವು ಮಾಡಿದ ಪಾಪವನ್ನು ಒಪ್ಪಿ ಕೊಂಡರೆ ದೇವರು ಕ್ಷಮಿಸುವನು ಎಂಬ ನಂಬಿಕೆ ಬಲವಾಗಿತ್ತು. ಅಲ್ಲದೆ, ವ್ಯಕ್ತಿಗಳು ಇದರಿಂದ ಪರಿಶುದ್ಧರಾಗುವರು ಎಂಬ ನಂಬಿಕೆಯಿಂದಾಗಿ ಜನರು ಕ್ಷಮಾಪಣಾ ಪತ್ರವನ್ನು ಚರ್ಚನಲ್ಲಿ ಪೋಪ್‌ಗೆ ನೀಡುತ್ತಿದ್ದರು. ಕ್ಷಮಾಪಣಾ ಪತ್ರವೇ ಮುಂದಿನ ಆತ್ಮಕಥೆಗಳ ಸ್ವರೂಪ ಪಡೆಯಿತು. 'ಪಾಶ್ಚಿಮಾತ್ಯರಲ್ಲಿ ಈ ರೀತಿಯ ಬರವಣಿಗೆಯನ್ನು Confession ಎಂತಲೇ ಕರೆಯುತ್ತಿದ್ದರು. Confession ಅಂದರೆ ಪಾಪ ನಿವೇದನೆ. ಒಪ್ಪಿಕೊಂಡಿದ್ದು. ವಿಷಯ, ಸಂಗತಿ ಮೊದಲಾದ ಅರ್ಥವಿದೆ.

ಇದಕ್ಕೆ ಪುರಾವೆಯಾಗಿ **'ಸೈಂಟ್ ಅಗಸ್ಟಿನ್'**ನ Saint Auguestine's Confession ನೋಡಬಹುದು. ಕ್ರಿ.ಪೂ. ೧೨೧– ೮೦ರಲ್ಲಿ ಜೀವಿಸಿದ್ದ **'ಮಾರ್ಕಸ್ ಅರೀಲಿಯಸ್'** ಎಂಬ ರಾಜನ **'ಮೆಡಿಟೇಷನ್ಸ್'** ಕೃತಿಯೇ ಆತ್ಮಕಥೆಯ ಗುಂಪಿಗೆ ಸೇರಿದ ಬರವಣಿಗೆಳಲ್ಲಿ ಅತ್ಯಂತ ಪ್ರಾಚೀನವಾದುದು. ಕ್ರಿ.ಶ ಎಂಟನೆಯ ಶತಮಾನದಲ್ಲಿ ಇಂಗ್ಲೆಂಡಿನ **'ವೆನರಬಲ್ ಬೀಡ್'**ನ ಕೃತಿಯೊಂದರಲ್ಲಿ ಆತ್ಮಕಥೆಯ ಅಂಶಯಿರುವುದನ್ನು ನೋಡುತ್ತೇವೆ' (ಅಮ್ಮುಲು ಕುಟ್ಟಿ, ೨೦೦೭, ಪು.೭)

Autobiography ಎಂಬ ಪದ ಮೊದಲಬಾರಿಗೆ ೧೭೯೬ರಲ್ಲಿ ಜರ್ಮನಿಯಲ್ಲಿ ಬಳಕೆಗೆ ಬಂದಿತು. ಇಂಗ್ಲೀಷ್‌ನ Autobiography ಎನ್ನುವದು Greek ಮೂಲಪದ Auto-bio-graphy ಅರ್ಥ Self-life-writing ಅಂದರೆ ತಮ್ಮ ಬದುಕಿನ ಕತೆಗಳನ್ನು ತಾವೇ ಬರೆಯುವುದು ಆಗಿದೆ.

೨೦ನೇ ಶತಮಾನದ ಇಂಗ್ಲೀಷ್ ಸಾಹಿತ್ಯ ಪ್ರಭಾವದಿಂದಾಗಿ ಕನ್ನಡ ಸಾಹಿತ್ಯದಲ್ಲಿಯೂ ಹೊಸ ಹೊಸ ಸಾಹಿತ್ಯ ಪ್ರಕಾರಗಳಾದ ಸಣ್ಣ ಕತೆ. ಕವನ, ಕಾದಂಬರಿ, ನಾಟಕ ಲಲಿತ ಪ್ರಬಂಧ, ಜೀವನಚರಿತ್ರೆಗಳಂತೆ ಆತ್ಮಕಥಾ ಪ್ರಕಾರವೂ ಕನ್ನಡ ಸಾಹಿತ್ಯವನ್ನು ಸೇರಿತು. ಬ್ರಿಟಿಷರು ಇಂಗ್ಲೀಷ್ ಶಿಕ್ಷಣವನ್ನು ಭಾರತದಲ್ಲಿ ಜಾರಿಗೊಳಿಸಿದ ಕಾರಣದಿಂದ ಭಾರತೀಯರಲ್ಲಿ ವ್ಯಕ್ತಿತ್ವ, ವ್ಯಕ್ತಿನಿಷ್ಟತೆ, ಮತ್ತು ವ್ಯಕ್ತಿಸ್ವಾತಂತ್ರ್ಯ ಮೊದಲಾದ ಪ್ರಜ್ಞೆಯು ಮೂಡಿದವು. ತನ್ನನ್ನು ತೋರ್ಪಡಿಸಿಕೊಳ್ಳುವ ಹಂಬಲ, ಆಕಾಂಕ್ಷೆಯು ಆತ್ಮಕಥೆಯ ರಚನೆಗೆ ಕಾರಣವಾಯಿತು.

೧.೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಬಾಲ್ಯ, ಶಿಕ್ಷಣ, ವಿವಾಹ ಮೊದಲಾದ ಜೀವನದ ಹಂತಗಳಲ್ಲಿ ಮಹಿಳೆಯ ಅಭಿಪ್ರಾಯಗಳಿಗೆ ಅಷ್ಟಾಗಿ ಬೆಲೆ ಇಲ್ಲ. ಪುರುಷ ಶ್ರೇಷ್ಠತೆಯ ವ್ಯಸನದಿಂದಾಗಿ ಮಹಿಳೆಯನ್ನು ಮತ್ತು ಆಕೆಯ ಚಿಂತನೆಯನ್ನು ನಿಕೃಷ್ಟವೆಂದು ಭಾವಿಸಲಾಗಿದೆ. ಹೀಗೆ ಆಕೆಯನ್ನು ದ್ವಿತೀಯ ವರ್ಗದಲ್ಲಿ ಇರಿಸಲಾಗಿದೆ. ಸಾಹಿತ್ಯಕ್ಷೇತ್ರ ಕೂಡ ಇದರಿಂದ ಹೊರತಾಗಿಲ್ಲ. ಅಲ್ಲದೇ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಪರಂಪರೆಯಿಂದ ಮಹಿಳೆ ಅನುಭವಿಸುತ್ತಿರುವ ದೌರ್ಜನ್ಯ, ಅವಹೇಳನ, ಶೋಷಣೆ ಇತ್ಯಾದಿಗಳ ಬಗ್ಗೆ ನಿಜವಾದ ಕಾಳಜಿ ವ್ಯಕ್ತಪಡಿಸುವಂತಹ ಕೃತಿಗಳು ತೀರ ಕಡಿಮೆ. ನಮ್ಮ ಬಹಳಷ್ಟು ಲೇಖಕಿಯರು ಪರಂಪರಾಪ್ರಿಯರು. ಪರಂಪರಾಗತ

ಮೌಲ್ಯಗಳಾದ ಪಾತಿವ್ರತ್ಯ, ತ್ಯಾಗ, ನಿಷ್ಠೆ, ಸಹನೆ ಇವುಗಳನ್ನು ವೈಭವೀಕರಿಸುವ ಕೃತಿಗಳನ್ನು ರಚಿಸಿದರು. ಪರಂಪರೆಯಯಲ್ಲಿ ಹುದುಗಿರುವ ಮೌಢ್ಯ, ಅಂಧಶ್ರದ್ಧೆ ಹಾಗು ಪುರುಷನ ಪ್ರಾಬಲ್ಯವನ್ನು ವಿರೋಧಿಸಿದ್ದನ್ನು ನಾವು ಮರಾಠಿ ಮಹಿಳಾ ಸಾಹಿತ್ಯದಲ್ಲಿ ನೋಡುವ ಹಾಗೆ ಕನ್ನಡದ ಮಹಿಳಾ ಸಾಹಿತ್ಯದಲ್ಲಿ ಕಾಣುವುದಿಲ್ಲ

ಕನ್ನಡದಲ್ಲಿ ಕೆಲವು ಲೇಖಕಿಯರು ಪರಂಪರೆಯನ್ನು ಧಿಕ್ಕರಿಸುವ ಪ್ರಯತ್ನ ಮಾಡಿದರಾದರೂ ಅದರ ಪರಿಣಾಮ ಹೇಳಿಕೊಳ್ಳುವಷ್ಟು ಆಶಾದಾಯಕವಾಗಿಲ್ಲ. ಕವಿತೆಗಳಲ್ಲಿ ಅಲ್ಪಸ್ವಲ್ಪ ಪರಿಣಾಮಕಾರಿಯಾಗಿರುವುದು ಸಂತೋಷದ ಸಂಗತಿ. ಇನ್ನು ಕನ್ನಡದಲ್ಲಿ ಬಹುಸಂಖ್ಯಾತ ಲೇಖಕಿಯರಲ್ಲಿ ಬರವಣಿಗೆಯನ್ನೇ ವೃತ್ತಿಯನ್ನಾಗಿಸಿಕೊಂಡವರ ಸಂಖ್ಯೆಯು ಕಡಿಮೆಯೇ ಎನ್ನಬಹುದು. ಪ್ರವೃತ್ತಿಯಾಗಿಯಷ್ಟೆ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡವರು. ಸಾಹಿತ್ಯಕ್ಕಿಂತ ವೃತ್ತಿ ಅವರ ಬಾಳಿನಲ್ಲಿ ಹೆಚ್ಚಿನ ಮಹತ್ವ ಪಡೆದಿರುತ್ತವೆ. ಪ್ರಚಾರಕ್ಕಾಗಿ ಇಲ್ಲವೇ ಸಾಹಿತ್ಯಕ್ಕಾಗಿ ರಚಿಸಿದವರಲ್ಲ. ತಮ್ಮ ವೃತ್ತಿ ಬದುಕಿನ ಅನುಭವಗಳನ್ನು ಯಾವುದೇ ಕೃತಕತೆ, ಕಲ್ಪನೆಗಳಿಗೆ ಎಡೆಗೊಡದೆ ನಿಜ ಜೀವನಕ್ಕೆ ಹತ್ತಿರವಾಗಿ, ನೇರವಾಗಿ ಬರೆದವರು. ಹೀಗಾಗಿ ಅವರ ಸಾಹಿತ್ಯ ಹೆಚ್ಚು ಪ್ರಾಮಾಣಿಕವೆನಿಸುತ್ತದೆ. ಹಾಗಾಗಿ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ಮಹಿಳೆಯರು ರಚಿಸಿದ ಆತ್ಮಕಥೆಗಳಲ್ಲಿ ವ್ಯಕ್ತವಾಗಿರುವ ಜೀವನದ ಬಗೆಗಿನ ವಾಸ್ತವದ ದೃಷ್ಟಿಯನ್ನು ಅರಿವುದು ಸಂಶೋಧನಾ ಉದ್ದೇಶವಾಗಿದೆ.

ಇತ್ತೀಚಿನ ದಿನಗಳಲ್ಲಿ ಗಮನಾರ್ಹವಾಗಿ ಮಹಿಳೆ ಆತ್ಮಕಥೆಗಳು ರಚನೆಯಾಗುತ್ತಿವೆ. ಕನ್ನಡದಲ್ಲಿ ಈ ಶತಮಾನದ ೭ನೆಯ ದಶಕದವರೆಗೆ ಕಾಣಿಸಿಕೊಳ್ಳದಿದ್ದ ಮಹಿಳಾ ಆತ್ಮಕಥಾ ರಚನೆಗಳು ಅನಂತರದ ದಿನಗಳಲ್ಲಿ ಗಣನೀಯವಲ್ಲದಿದ್ದರೂ ಸಾಕಷ್ಟು ಆತ್ಮಕಥೆಗಳು ಬಂದಿರುವುದು ಆಶಾದಾಯಕ ವಿಚಾರ. ಈ ಆತ್ಮಕಥೆಗಳ ರಚನೆಗಳು ಮಹಿಳೆಯರ ಬೌದ್ಧಿಕತೆಗೆ ಸಾಕ್ಷಿಯಾಗಿದೆ. ಕನ್ನಡದ ಸಾಹಿತ್ಯದಲ್ಲಿ ಸೃಜನಶೀಲ ಲೇಖಕಿಯರು ಅನೇಕರಿದ್ದಾರೆ. ಆದರೆ ಆತ್ಮಕಥಾಗಾರ್ತಿಯರ ಸಂಖ್ಯೆ ತೀರ ಕಡಿಮೆ. ಇಂಥ ಸಂದರ್ಭದಲ್ಲಿ ಏಳುವ ಪ್ರಶ್ನೆಗಳೆಂದರೆ ಆತ್ಮಕಥೆಗಳಿಗೆ ಮನ್ನಣೆ ಸಿಗುತ್ತಿಲ್ಲವೇ? ಆತ್ಮಕಥಾ ನಿರೂಪಣೆಯ ಬಗೆಗೆ ಸಂದೇಹವೇ? ಅದರ ಮೌಲ್ಯದ ಬಗೆಗಿನ ಅವಜ್ಞತೆಯೇ? ಕನ್ನಡದಲ್ಲಿ ಮಾತ್ರ ಮಹಿಳೆಯರು ಆತ್ಮಕಥನಗಳ ರಚನೆಯಲ್ಲಿ ಹಿಂದುಳಿದಿದ್ದಾರೆಯೇ? ಅಥವಾ ಇತರ ಭಾರತೀಯ ಭಾಷೆಗಳಲ್ಲಿ ಇದೇ ಪರಿಸ್ಥಿತಿ ಇದೆಯೇ? ಆತ್ಮಕಥನ ರಚನಾ ಕ್ಷೇತ್ರದಲ್ಲಿ ಮಹಿಳೆಯರ ಭವಿಷ್ಯವೇನು? ಇವೇ ಮೊದಲಾದ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಇಂತಹ ಪ್ರಶ್ನೆಗಳಿಗೆ ಆತ್ಮಕಥೆಗಳ ಅಧ್ಯಯನದ ಮೂಲಕವೇ ಪ್ರಯತ್ನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಆತ್ಮಕತೆಯಲ್ಲಿ ಮಹಿಳೆಯರ ಮನಸ್ಸಿನ ಅನನ್ಯತೆಯ ನೆಲೆಗಳಾದ ಮಾನಸಿಕ ಶಕ್ತಿ, ಛಲದ ಮನೋಭಾವ, ದೈಹಿಕ ಸಾಮರ್ಥ್ಯ ಮತ್ತು ಸ್ವಯಂಪೂರ್ಣತೆ ಮುಂತಾದವುಗಳನ್ನು ಗುರುತಿಸಲಾಗಿದೆ.

ಪುರುಷ ಮನೆಯ ಹೊರಗೆ ದುಡಿದರೆ ಮಹಿಳೆಯು ಮನೆಯ ಹೊರಗೂ ಒಳಗೂ ಎರಡು ಕಡೆ ದುಡಿಯುತ್ತಾಳೆ. ಅನಾವಶ್ಯಕ ಕಾಲಹರಣ ಮಾಡಲಾರಳು. ಧಾರ್ಮಿಕ ಕಾರಣಗಳಿಗಾಗಿ ಉಪವಾಸ, ವ್ರತ, ನಿಯಮ ಇತ್ಯಾದಿಗಳನ್ನು ಆಚರಿಸುತ್ತಾಳೆ. ಪುರುಷರು ಅಷ್ಟಾಗಿ ಆಚರಿಸುವುದಿಲ್ಲ. ಈ ಆಚರಣೆಗೆ ಮಾನಸಿಕ ಬಲ ಮತ್ತು ದೈಹಿಕ ಸಾಮರ್ಥ್ಯ ಬೇಕು. ಅಂತಹ ದೈಹಿಕ ಸಾಮರ್ಥ್ಯ ಪುರುಷನಲ್ಲಿ ಇರುವುದಿಲ್ಲ. ಇಂತಹ ದೈಹಿಕ ಸಾಮರ್ಥ್ಯ ಕೂಡ ಮಹಿಳೆಯರ ಅನನ್ಯತೆಯ ನೆಲೆಯಾಗಿದೆ.

ಅಂತಿಮವಾಗಿ ಮಹಿಳೆಯರ ಸ್ವಯಂ ಸಂಪೂರ್ಣತೆಯ ನೆಲೆ. ಇದು ಇತ್ತೀಚಿಗಷ್ಟೇ ಹೊರಜಗತ್ತಿಗೆ ಪ್ರಕಟಗೊಂಡಿದ್ದು. ಇಷ್ಟರವರೆಗೆ ಹತ್ತಿಕ್ಕಲ್ಪಟ್ಟ ಭಾವ ಅವರ ಅರಿವಿನ ಪ್ರಜ್ಞೆಯನ್ನು ವ್ಯಕ್ತಪಡಿಸುತ್ತದೆ. ತನ್ನ ವಿರುದ್ಧ ಅಪ್ರತಿಹತವಾಗಿ ನಡೆಯುತ್ತಿರುವ ಅನ್ಯಾಯ, ದಬ್ಬಾಳಿಕೆ ವಿರುದ್ಧ ಅವಿರತ ಹೊರಾಟ ನಡೆಸಿ ಕಾನೂನು ರೀತ್ಯಾ ನ್ಯಾಯ ದೊರಕಿಸಿಕೊಂಡಿದ್ದಾರೆ. ಸ್ವಂತದ ಕುರಿತು ತಡವಾಗಿಯಾದರೂ ಸಾಕಷ್ಟು ಅರಿವು ಮೂಡಿದ್ದು, ತನ್ನನ್ನು ಸ್ವತಂತ್ರಳು, ಮುಕ್ತಳು, ಶಕ್ತಳು ಎಂಬ ಪ್ರಜ್ಞೆ ಮೂಡಿದೆ. ಇದು ಮಹಿಳೆಯ ಅನನ್ಯತೆಯ ಮಹತ್ವಪೂರ್ಣವಾದ ನೆಲೆಯಾಗಿದೆ. ಮಹಿಳಾ ಆತ್ಮಕಥೆಗಳಲ್ಲಿ ಕೂಡ ಮಹಿಳಾ ಸ್ವತಂತ್ರ ಪರವಾದ ದನಿಗಳು ಇದೆ. ಇವುಗಳನ್ನು ಅಧ್ಯಯನ ಮಾಡುವುದು ಉದ್ದೇಶಗಳಲ್ಲಿ ಒಂದು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಿಳೆಯರು ಇವರೆಗೆ ಸಾಧಿಸಿದ್ದೇನು? ಅವರ ಸಾಧನೆ ಯಾವ ಬಗೆಯದು? ಎಂದು ತಿಳಿಯುವುದು ಕೂಡ ಉದ್ದೇಶವಾಗಿದೆ. ಪುರುಷ ರಚಿತ ಸಾಹಿತ್ಯಗಳೇ ವಿಜೃಂಭಿಸುತ್ತಿರುವ ಸಂದರ್ಭದಲ್ಲಿ ಮಹಿಳೆಯ ಸಾಹಿತ್ಯವನ್ನು ಕಂಡು ಕಾಣದಂತೆ ದಿವ್ಯ ನಿರ್ಲಕ್ಷ್ಯ ವಹಿಸಲಾಗುತ್ತಿದೆ. ಆದರೆ ನಿಜವಾಗಿ ನೋಡಿದರೆ ಉತ್ತಮವಾದ, ವಾಸ್ತವವಾದಿ ಕೃತಿಗಳನ್ನು ರಚಿಸಿದ ಮಹಿಳೆಯರು ಅನೇಕರಿದ್ದಾರೆ. ಅಂತಹ ಕಡೆಗಣಿಸಲ್ಪಟ್ಟ ಮಹಿಳಾ ಸಾಹಿತ್ಯಗಳಲ್ಲೊಂದಾದ ಆತ್ಮಕತೆಯ ಮಹತ್ವವನ್ನು ಮೇಲ್ಮೈಗೆ ತರುವುದು ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ :

ಕನ್ನಡದಲ್ಲಿ ಈವರೆಗೆ ಸಾಕಷ್ಟು ಮಹಿಳಾ ಆತ್ಮಕತೆಗಳು ಬಂದಿವೆ. ಅವುಗಳು ವಿಭಿನ್ನವಾದ ಕ್ಷೇತ್ರಗಳಲ್ಲಿ ನಿರತವಾಗಿರುವ ಆತ್ಮಕತೆಗಳು. ಲೇಖಕಿಯರು, ರಾಜಕೀಯದಲ್ಲಿ ತೊಡಗಿಸಿಕೊಂಡವರು ಹೋರಾಟಗಾರ್ತಿಯರು ಮತ್ತು ಸಮಾಜದ ಶೋಷಿತ ವರ್ಗದವರು ಆತ್ಮಕಥೆಗಳನ್ನು ಬರೆದಿದ್ದಾರೆ. ಇದೇ ರೀತಿ ಬೇರೆ ಬೇರೆ ಭಾಷಾ ಮೂಲದಿಂದ ಕನ್ನಡಕ್ಕೆ ಅನುವಾದಗೊಂಡಿರುವ ಮಹಿಳಾ ಅತ್ಮಕತೆಗಳು ಇವೆ. ಇವರಲ್ಲಿಯೂ ಲೇಖಕಿಯರು, ರಾಜಕೀಯ, ಹೋರಾಟದಲ್ಲಿ ತೊಡಗಿಕೊಂಡವರು, ಕಲಾವಿದೆಯರು ಹಾಗೂ ಸಮಾಜದ ಅಂಚಿನಲ್ಲಿರುವ ಮಹಿಳೆಯರು ಆತ್ಮಕಥನಗಳನ್ನು ಬರೆದಿದ್ದಾರೆ.

ಅಧ್ಯಯನದ ದೃಷ್ಟಿಯಿಂದ ನಿರ್ದಿಷ್ಟ ವ್ಯಾಪ್ತಿಯನ್ನು ಹಾಕಿಕೊಳ್ಳಲಾಗಿದೆ. ೧೯೭೫ ರಿಂದ ೨೦೧೩ರವರೆಗೆ ಕನ್ನಡದಲ್ಲಿ ಬಂದ ಮಹಿಳಾ ಆತ್ಮಕತೆಗಳಲ್ಲಿ ಪ್ರಾತಿನಿಧಿಕವಾಗಿ ಲೇಖಕಿಯರಲ್ಲಿ ಅನುಪಮಾ ನಿರಂಜನರ **'ನೆನಪು ಸಿಹಿ-ಕಹಿ'**, **'ಬರಹಗಾರ್ತಿಯ ಬದುಕು'**, ಚಿ.ನ. ಮಂಗಳರವರ **'ಸ್ನೇಹಸಿಂಧು'** ಮತ್ತು ಸಾರಾ ಅಬೂಬಕ್ಕರ್‌ರವರ **'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' 'ಹೊತ್ತುಕಂತುವ ಮುನ್ನ'** ಕಲಾವಿದೆಯರಲ್ಲಿ ಗಂಗೂಬಾಯಿ ಹಾನಗಲ್‌ರವರ **'ನನ್ನ ಬದುಕಿನ ಹಾಡು'**, ಮಳವಳ್ಳಿ ಸುಂದರಮ್ಮರವರ **'ಅಭಿನಯ ವಿಶಾರದೆ'** ಕೆ.ನಾಗರತ್ನಮ್ಮರವರ **'ಮರಿಯಮ್ಮನಹಳ್ಳಿ ರಂಗಸಿರಿ'** ಬಿ.ಜಯಮ್ಮನವರ **'ಅಭಿನೇತ್ರಿ'** ಉಮಾಶ್ರೀಯವರ **'ಬೆಂಕಿ ಬೆಡಗು'**-ಮೊದಲಾದವರ ಆತ್ಮಕತೆಗಳನ್ನು ಅಧ್ಯಯನ ಮಾಡಲಾಗುತ್ತದೆ. ಅಲ್ಲದೇ ಸಮಾಜದ ಅಂಚಿನಲ್ಲಿ ಉಳಿದಿರುವ ಜೇನು ಕುರುಬ ಸಮುದಾಯಕ್ಕೆ ಸೇರಿದ ಮಹಿಳೆಯರಾದ ಜಾಜಿ ತಿಮ್ಮಯ್ಯನವರ **'ಹೆಜ್ಜೇನು'**, ದಲಿತ ಸಮುದಾಯಕ್ಕೆ ಸೇರಿದ ಸಾಮಾಜಿಕ ಹೋರಾಟಗಾರ್ತಿಯಾಗಿರುವ ದು.ಸರಸ್ವತಿಯವರ **'ಈಗೇನ್ ಮಾಡೀರಿ?'**,

ಎಚ್.ಐ.ವಿ ಭಾದಿತೆಯಾಗಿ ಎಚ್.ಐ.ವಿ ಪೀಡಿತರ ಪರವಾಗಿ ಸಾಮಾಜಿಕ ಸೇವೆಸಲ್ಲಿಸುತ್ತಿದ್ದ ವೀಣಾಧರಿಯವರ **'ಎಚ್.ಐ.ವಿ ಮತ್ತು ನಾನು'** – ಈ ಮೊದಲಾದವರ ಕನ್ನಡ ಆತ್ಮಕತೆಯನ್ನು ವಿಶೇಷವಾಗಿ ಅಧ್ಯಯನ ಮಾಡಲಾಗುತ್ತದೆ.

ಕನ್ನಡಕ್ಕೆ ಬೇರೆ ಭಾಷೆಯ ಮೂಲದಿಂದ ಆತ್ಮಕತೆಗಳು ಅನುವಾದಗೊಂಡಿವೆ. ೧೯೪೯ ರಿಂದ ಮೊದಲುಗೊಂಡು ೨೦೧೧ ರವರೆಗೆ ಸುಮಾರು ೨೫ಕ್ಕೂ ಅಧಿಕ ಹಿಂದಿ, ಮಲೆಯಾಳಂ, ತಮಿಳು, ಮರಾಠಿ, ಪಂಜಾಬಿ, ಬಂಗಾಳಿ ಮತ್ತು ಇಂಗ್ಲೀಷ್‌ನ ಮೂಲದಿಂದ ಆತ್ಮಕತೆ ಕನ್ನಡಕ್ಕೆ ಅನುವಾದಗೊಂಡಿವೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ೧೯೬೦ ರಿಂದ ೨೦೧೧ರವರೆಗೆ ಕನ್ನಡಕ್ಕೆ ಅನುವಾದಗೊಂಡ ಆತ್ಮಕಥೆಗಳಲ್ಲಿ ಪ್ರಾತಿನಿಧಿಕವಾಗಿ ಲೇಖಕಿಯಲ್ಲಿ ಕಮಲಾ ದಾಸ್, ಅಮೃತ್ ಪ್ರೀತಂ ಮತ್ತು ಅಜಿತ್ ಕೌರ್. ಕಮಲಾ ದಾಸ್ ಮಲೆಯಾಳಂ ಅಲ್ಲದೇ ಭಾರತೀಯ ಸಾಹಿತ್ಯದಲ್ಲಿ ಅಷ್ಟೇ ಅಲ್ಲದೇ ಜಾಗತಿಕ ಮಟ್ಟದ ಕವಯತ್ರಿಯಾಗಿ ಜನಪ್ರಿಯರು. ದೇಶವಿದೇಶದ ಹಲವಾರು ಭಾಷೆಗಳಿಗೆ ಇವರ ಕೃತಿಗಳು ಅನುವಾದವಾಗಿದೆ. **'ನನ್ನ ಕತೆ' 'ನೀರ್ ಮಾದಳ ಹೂಬಿಟ್ಟ ಕಾಲ'** ಮತ್ತು **'ಬಾಲ್ಯದ ನೆನಪುಗಳು'** ಎನ್ನುವ ಮೂರು ಆತ್ಮಕತೆಯನ್ನು ಬರೆದಿದ್ದಾರೆ. ಹಾಗಾಗಿ ವಿಶೇಷವಾಗಿ ಈ ಮೂರು ಆತ್ಮಕಥೆಗಳನ್ನು ಅಧ್ಯಯನ ಮಾಡಲಾಗುವುದು.

ಅಮೃತ ಪ್ರೀತಂ ಇವರು ಪಂಜಾಬಿ ಭಾಷೆ ಮಾತ್ರವಲ್ಲದೇ ವಿಶ್ವದರ್ಜೆಯ ಶ್ರೇಷ್ಠ ಕವಯತ್ರಿ ಮತ್ತು ಜ್ಞಾನಪೀಠ ಪುರಸ್ಕೃತೆ. ಇವರು ಹಲವು ಲೇಖಕಲೇಖಕಿಯರ ಮೇಲೆ ಪ್ರಭಾವ ಬೀರಿದವರು. ಇವರ **'ರಶೀದಿ ಟಿಕೇಟು'** ಎನ್ನುವ ಆತ್ಮಕತೆ ಕನ್ನಡಕ್ಕೆ ಅನುವಾದಗೊಂಡಿದೆ. ಪಂಜಾಬಿ ಭಾಷೆಯ ಮತ್ತೊಬ್ಬ ಕವಯತ್ರಿ ಅಜಿತ್ ಕೌರ್‌ರವರ **'ಅಲೆಮಾರಿ'** ಆತ್ಮಕತೆಯು ಕನ್ನಡಕ್ಕೆ ಅನುವಾದಗೊಂಡಿದ್ದು ಅಧ್ಯಯನದ ದೃಷ್ಟಿಯಿಂದ ಈ ಆತ್ಮಕತೆಯನ್ನು ಬಳಸಿಕೊಳ್ಳಲಾಗಿದೆ.

ಕಲಾವಿದೆಯರರಲ್ಲಿ ಮುಖ್ಯವಾಗಿ ಮರಾಠಿಯ ಲೇಖಕಿ ಮಾಧವಿ ದೇಸಾಯಿಯವರ **'ಕುಣಿಯೇ ಘುಮಾ'** ಆತ್ಮಕತೆಯನ್ನು ನೋಡಬಹುದು. ಇವರ ಆತ್ಮಕತೆಯು ಅಧ್ಯಯನಕ್ಕೆ ಮುಖ್ಯವಾಗುತ್ತದೆ.ಮಹಾರಾಷ್ಟ್ರದ ಕಲಾವಿದೆ ಸುನೀತಾ ದೇಶಪಾಂಡೆ. ಇವರ ಆತ್ಮಕಥನ **'ಬಾಳು ಸೊಗಸಾದರೂ'** ಕನ್ನಡಕ್ಕೆ ಅನುವಾದವಾಗಿದೆ. ಗೋದಾವರಿ ಪುರಳೇಕರ್ ಇವರು ಮಹಾರಾಷ್ಟ್ರದ ಮೊದಲು ಕಾನೂನು ಪದವೀಧರೆ. ಹೋರಾಟದಲ್ಲಿ ತೊಡಗಿಸಿಕೊಂಡ ಇವರು ಎಡಪಂಥೀಯ ಸಿದ್ಧಾಂತ, ತತ್ವವನ್ನು ನೆಚ್ಚಿಕೊಂಡವರು. ಇವರ ಆತ್ಮಕಥನ **'ಮಾನವ ಎಚ್ಚೆತ್ತಾಗ'** ಎಂಬ ಹೆಸರಲ್ಲಿ ಕನ್ನಡಕ್ಕೆ ಅನುವಾದವಾಗಿದೆ. ಹಾಗಾಗಿ ಇವರ ಆತ್ಮಕಥೆಯನ್ನು ವಿಶೇಷವಾಗಿ ಅಧ್ಯಯನ ಮಾಡಲಾಗುವುದು. ಸಮಾಜದ ಅಂಚಿನಲ್ಲಿ ಉಳಿದಿರುವ ಮಹಿಳೆಯರ ಆತ್ಮಕತೆ ಕನ್ನಡಕ್ಕೆ ಅನುವಾದವಾಗಿದೆ. ಅವರಲ್ಲಿ ನಳಿನಿ ಜಮೀಲಾರವರು ಮಲೆಯಾಳಂನಲ್ಲಿ **'ಜ್ಞಾನ ತೊಳಲಾಳಿ'** ಎಂಬ ಆತ್ಮಕತೆಯನ್ನು ಬರೆದಿದ್ದಾರೆ. ಕನ್ನಡಕ್ಕೆ **'ಸೆಕ್ಸ್ ವರ್ಕರ್ ಒಬ್ಬಳ ಆತ್ಮಕಥನ'** ಎನ್ನುವ ಹೆಸರಲ್ಲಿ ಅನುವಾದವಾಗಿದೆ. ಲೈಂಕಿಕ ಕಾರ್ಯಕರ್ತೆಯಾಗಿ ಸಮಾಜ ವಕ್ರದೃಷ್ಠಿಗೆ ಕಾರಣರಾದವರು. ಹೊರಗಿನವರ ಅವಮಾನ, ತಿರಸ್ಕಾರವನ್ನು ಮೀರಿ ಬದುಕನ್ನು ಸಾಗಿಸಿದವರು. ಇವರ ಆತ್ಮಕತೆ ಕೂಡಾ ಮಹತ್ವದಾಗಿದೆ.

ಬೇಬಿತಾಯಿ ಕಾಂಬಳೆಯವರು ಮರಾಠಿ ದಲಿತ ಸ್ತ್ರಿ. ಮೇಲ್ವರ್ಗದವರಿಂದ ಗುಲಾಮಗಿರಿಯ ಸಂಕೋಲೆಯಲ್ಲಿ ಸಿಲುಕಿದ ಸಮೂದಾಯದ ವ್ಯಕ್ತಿಯಾಗಿರುವ ಇವರ **'ಬದುಕು ನಮ್ಮದು'** ಎಂಬ ಆತ್ಮಕತೆಯು ಕನ್ನಡಕ್ಕೆ ಬಂದಿದೆ. ಬೇಬಿ ಹಾಲ್ದಾರ್‌ರವರು ಬಂಗಾಲಿಯ ಶ್ರಮಿಕ ವರ್ಗದ ಸ್ತ್ರೀ. ಇವರ ಆತ್ಮಕತೆ **'ನೋವು ತುಂಬಿದ ಬದುಕು'** ಕನ್ನಡಕ್ಕೆ ಅನುವಾದಗೊಂಡಿದ್ದು, ಅದರಲ್ಲಿ

ಶ್ರಮಿಕ ವರ್ಗದದ ಸಮಾಜದ ನೈಜ ಚಿತ್ರಣವಿದೆ. ಹಾಗಾಗಿ ಇವರ ಆತ್ಮಕತೆಯನ್ನು ವಿಶೇಷವಾಗಿ ಅಧ್ಯಯನಮಾಡಲಾಗುತ್ತದೆ. ಇನ್ನು ಉಳಿದ ಆತ್ಮಕಥೆಗಳನ್ನು ಅನುಷಂಗಿಕವಾಗಿ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

೧.೨ ಅಧ್ಯಯನದ ಸ್ವರೂಪ:

'ಸ್ವತಂತ್ರ ಮತ್ತು ಅನುವಾದಿತ ಮಹಿಳಾ ಆತ್ಮಕಥೆಗಳ ತೌಲನಿಕ ಅಧ್ಯಯನ' –ಎಂಬ ಈ ಸಂಶೋಧನ ಪ್ರಬಂಧದಲ್ಲಿ ಪ್ರಸ್ತಾವನೆದಿಂದ ಆರಂಭಗೊಂಡು ಸಮಾರೋಪದವರೆಗೆ ಒಟ್ಟು ಎಂಟು ಅಧ್ಯಾಯಗಳಿವೆ.

ಅಧ್ಯಾಯ –೧ – 'ಪ್ರಸ್ತಾವನೆ'ಯಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ಅಧ್ಯಯನ ವಿಧಾನ ಕ್ರಮ, ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಮತ್ತು ಪ್ರಸ್ತುತ ಅಧ್ಯಯನದ ಮಹತ್ವಗಳ ಬಗೆಗೆ ಸಮಗ್ರವಾಗಿ ಚರ್ಚಿಸಲಾಗಿದೆ.

ಅಧ್ಯಾಯ–೨– ಕನ್ನಡದಲ್ಲಿ ಮಹಿಳಾ ಆತ್ಮಕಥೆಗಳ ಹುಟ್ಟು ಮತ್ತು ಬೆಳವಣಿಗೆ– ಇದರಲ್ಲಿ ಅನೇಕ ಉಪ ಅಧ್ಯಾಯಗಳಿವೆ. ಒಂದನೆಯ ಉಪ ಅಧ್ಯಾಯ– ಆತ್ಮಕಥೆ ಮತ್ತು ಜೀವನಚರಿತ್ರೆಗಳ ಸಂಬಂಧಾಂತರಗಳು–ಇದರಲ್ಲಿ ಆತ್ಮಚರಿತ್ರೆ ಮತ್ತು ಜೀವನ ಚರಿತ್ರೆಗೆ ಇರುವ ಸಂಬಂಧಗಳ ಕುರಿತು ಮತ್ತು ಇವೆರಡರ ನಡುವೆ ಇರುವ ಭಿನ್ನತೆಯನ್ನು ಚರ್ಚಿಸಲಾಗಿದೆ. ಎರಡನೆಯ ಉಪ ಅಧ್ಯಾಯ–ಆತ್ಮಚರಿತ್ರ ಬರೆಹ– ಪಾಶ್ಚಾತ್ಯರ ಮತ್ತು ಭಾರತೀಯರ ನಿಲುವುಗಳು– ಇದರಲ್ಲಿ ಆತ್ಮಚರಿತ್ರೆಯ ಕುರಿತಾದ ಪಾಶ್ಚಾತ್ಯ ಮತ್ತು ಭಾರತೀಯ ದೃಷ್ಟಿಕೋನಗಳನ್ನು ಚರ್ಚಿಸಲಾಗಿದೆ. ಮೂರನೆಯ ಉಪಅಧ್ಯಾಯ– ಕನ್ನಡದಲ್ಲಿ ಮಹಿಳಾ ಆತ್ಮಕಥೆಗಳ ಆರಂಭಕಾಲ– ಇದರಲ್ಲಿ ಕನ್ನಡದಲ್ಲಿ ಮೊದಲ ಮಹಿಳಾ ಆತ್ಮಕಥೆಯ ರಚನೆಯಾದ ಐತಿಹಾಸಿಕ ಚರ್ಚೆಯನ್ನು ಮಾಡಲಾಗಿದೆ. ನಾಲ್ಕನೆಯ ಉಪಅಧ್ಯಾಯ – ಮಹಿಳಾ ಆತ್ಮಕಥೆಗಳನ್ನು ರಚಿಸಿದ ಪ್ರಮುಖರು– ಇದರಲ್ಲಿ ಆರಂಭದಿಂದ ಇಂದಿನವರೆಗೆ ಆತ್ಮಕಥೆಯನ್ನು ರಚನೆಮಾಡಿದ ಪ್ರಮುಖ ಆತ್ಮಕಥಾಗಾರ್ತಿಯರ ಕುರಿತು ಚರ್ಚಿಸಲಾಗಿದೆ. ಐದನೆಯ ಉಪಅಧ್ಯಾಯದಲ್ಲಿ ಆತ್ಮಕಥೆಯ ರಚನೆಯ ಕುರಿತು ಮಹಿಳೆಯರು ಬೇರೆ ಬೇರೆ ಸಂದರ್ಭದಲ್ಲಿ ಉಲ್ಲೇಖಿಸಿದ ಮಾತನ್ನು ಸಂಗ್ರಹಿಸುವ ಮೂಲಕ ಆತ್ಮಕಥೆಯ ರಚನೆಯಲ್ಲಿ ಮಹಿಳೆಯರಿಗೆ ಎದುರಾದ ಮತ್ತು ಎದುರಾಗಬಹುದಾದ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಅಂಶಗಳನ್ನು ಗುರುತಿಸಲಾಗಿದೆ. ಆರನೆಯ ಉಪಅಧ್ಯಾಯದಲ್ಲಿ ಆತ್ಮಕಥೆಯ ರಚನೆಯ ಪ್ರೇರಣೆಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ: ೩ ಅನುವಾದಿತ ಮಹಿಳಾ ಆತ್ಮಕಥೆಗಳ ಹುಟ್ಟು ಮತ್ತು ಬೆಳವಣಿಗೆ– ಇದರಲ್ಲಿ ಒಂದನೆಯ ಉಪ ಅಧ್ಯಾಯದಲ್ಲಿ ಕನ್ನಡಕ್ಕೆ ಅನುವಾದಗೊಂಡ ಮಹಿಳಾ ಆತ್ಮಕಥೆಗಳ ಆರಂಭಕಾಲ. ಇದರಲ್ಲಿ ಕನ್ನಡಕ್ಕೆ ಅನ್ಯಭಾಷೆಯಿಂದ ಅನುವಾದಗೊಂಡ ಮಹಿಳಾ ಆತ್ಮಕಥೆಗಳ ಇತಿಹಾಸದ ಶೋಧ ಮಾಡಲಾಗಿದೆ. ಎರಡನೆಯ ಉಪಅಧ್ಯಾಯದಲ್ಲಿ ಬಂಗಾಳಿ ಮತ್ತು ಹಿಂದಿ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಮಹಿಳಾ ಆತ್ಮಕಥೆಗಳ ಕುರಿತು, ಮೂರನೆಯ ಉಪಅಧ್ಯಾಯದಲ್ಲಿ ಪಂಜಾಬಿ ಭಾಷೆಯಿಂದ ಅನುವಾದಗೊಂಡ ಮಹಿಳಾ ಆತ್ಮಕಥೆಗಳ ಕುರಿತು, ನಾಲ್ಕನೆಯ ಉಪ ಅಧ್ಯಾಯದಲ್ಲಿ ತಮಿಳು ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಮಹಿಳಾ ಆತ್ಮಕಥೆಗಳ ಕುರಿತು, ಐದನೆಯ ಉಪ ಅಧ್ಯಾಯದಲ್ಲಿ ಮರಾಠಿ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಮಹಿಳಾ ಆತ್ಮಕಥೆಗಳ ಕುರಿತು, ಆರನೆಯ ಉಪಅಧ್ಯಾಯದಲ್ಲಿ ಇಂಗ್ಲೀಷ್ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಮಹಿಳಾ ಆತ್ಮಕಥೆಗಳ ಕುರಿತು ಚರ್ಚಿಸಲಾಗಿದೆ. ಏಳನೆಯ ಉಪಅಧ್ಯಾಯದಲ್ಲಿ ಮಹಿಳಾ ಆತ್ಮಕಥೆಗಳ

ಅನುವಾದಕರ ಕುರಿತು ಚರ್ಚಿಸಲಾಗಿದೆ. ಅನ್ಯಭಾಷೆಯ ನಮಗೆ ಅಪರಿಚಿತವಾದ ಹಲವಾರು ವ್ಯಕ್ತಿಗಳ ಜೀವನಾನುಭವ ಅವರ ಯಶೋಗಾಥೆಯನ್ನು ನಮಗೆ ಅನುವಾದಕರು ಮಾಡಿಕೊಡುವ ಮೂಲಕ ಕನ್ನಡಿಗರಿಗೆ ಹೊಸತೊಂದು ವಸ್ತು ವಿಚಾರವನ್ನು ತಿಳಿಸಿದ್ದಾರೆ.

ಅಧ್ಯಾಯ-೪ ಲೇಖಕಿಯರ ಆತ್ಮಕಥೆಗಳ ವೈಶಿಷ್ಟ್ಯ- ಇದರಲ್ಲಿ ಉಪ ಅಧ್ಯಾಯ ೧ ರಲ್ಲಿ ಕನ್ನಡದ ಹಿರಿಯ ಲೇಖಕಿಯಾದ ಅನುಪಮ ನಿರಂಜನ ಉಪ ಅಧ್ಯಾಯ ೨ ರಲ್ಲಿ ಚಿ. ನ. ಮಂಗಳ, ೩ನೆಯ ಉಪ ಅಧ್ಯಾಯದಲ್ಲಿ ಸಾರಾ ಅಬೂಬಕ್ಕರ್ ಮತ್ತು ಪ್ರತಿಭಾ ನಂದಕುಮಾರ, ೪ನೆಯ ಉಪ ಅಧ್ಯಾಯದಲ್ಲಿ ಮಲಯಾಳಂ ಭಾಷೆಯ ಜನಪ್ರಿಯ ಲೇಖಕಿ ಕಮಲಾ ದಾಸ್, ೫ ನೆಯ ಉಪಅಧ್ಯಾಯದಲ್ಲಿ ಪಂಜಾಬಿ ಭಾಷೆಯ ಹೆಸರಾಂತ ಕವಯತ್ರಿ ಅಮೃತ ಪ್ರೀತಂ ಮತ್ತು ೬ನೆಯ ಉಪ ಅಧ್ಯಾಯದಲ್ಲಿ ಅಜಿತ್ ಕೌರ್- ಇವರೆಲ್ಲರ ಖಾಸಗಿ/ವೈಯುಕ್ತಿಕ ಬದುಕಿನ ವಿವರಗಳ ಭಾಗದಲ್ಲಿ ಬಾಲ್ಯ, ಹರೆಯ, ದಾಂಪತ್ಯ ಮೊದಲಾದ ಸಂದರ್ಭದಲ್ಲಿ ಅವರ ಬದುಕಿನ ವಿಕಾಸ ಹಂತವನ್ನು ಚರ್ಚಿಸಲಾಗಿದೆ. ಜೀವನದ ಬಹುಮುಖ್ಯ ಹಂತಗಳಲ್ಲಿ ಅವರು ಎದುರಿಸಿದ ಸಮಸ್ಯೆ, ಸವಾಲು, ತಳಮಳ, ಪರಿಹಾರ ಮೊದಲಾದವುಗಳ ಕುರಿತಾಗಿ ಚರ್ಚಿಸಲಾಗಿದೆ. ಹಾಗೇ ಅವರ ಸಾರ್ವಜನಿಕ ಬದುಕಿಗೆ ಸಂಬಂಧಿಸಿದ ಭಾಗದಲ್ಲಿ ಕವಯತ್ರಿ/ಬರಹಗಾರ್ತಿಯಾಗಿ ಸಾರ್ವಜನಿಕವಾಗಿ ಅವರು ಪಡೆದ ಜನಪ್ರಿಯತೆ, ಸಭೆ ಸಮಾರಂಭಗಳಲ್ಲಿ ಅವರ ತೊಡಗಿಕೊಂಡ ಬಗೆ, ಸಿಕ್ಕ ಮಾನ ಸಮ್ಮಾನ, ಅವರಿಗೆ ದೊರೆತ ಒಡನಾಡಿಗಳ ಬೆಂಬಲ ಮೊದಲಾದ ವಿಚಾರಗಳ ಕುರಿತು ಚರ್ಚೆ ಇದೆ. ಹಾಗೇ ಸಾರ್ವಜನಿಕ ಬದುಕಿನಲ್ಲಿ ಎದುರಾದ ಸಮಸ್ಯೆ ಸವಾಲುಗಳ ಚರ್ಚೆ ಇದೆ.

ಅಧ್ಯಾಯ– ೫ ಕಲಾವಿದೆಯರ ಮತ್ತು ಹೋರಾಟಗಾರ್ತಿಯರ ಆತ್ಮಕಥೆಗಳ ವೈಶಿಷ್ಟ್ಯ- ಇದರ ಉಪ ಅಧ್ಯಾಯ ೧ ರಲ್ಲಿ ಗಂಗೂಬಾಯಿ ಹಾನಗಲ್, ಉಪ ಅಧ್ಯಾಯ ೨ ರಲ್ಲಿ ಮಳವಳ್ಳಿ, ಸುಂದರಮ್ಮ ಮತ್ತು ಕೆ. ನಾಗರತ್ನಮ್ಮ ಉಪ ಅಧ್ಯಾಯ ೩ ರಲ್ಲಿ ಬಿ.ಜಯಮ್ಮ ಮತ್ತು ಉಮಾಶ್ರೀ ಉಪ ಅಧ್ಯಾಯ ೪ ರಲ್ಲಿ ಮಾಧವಿ ದೇಸಾಯಿ, ಉಪ ಅಧ್ಯಾಯ ೫ ರಲ್ಲಿ ಸುನೀತಾ ದೇಶಪಾಂಡೆ, ಉಪ ಅಧ್ಯಾಯ ೬ರಲ್ಲಿ ಗೋದಾವರಿ ಪುರಳೇಕರ್ ಮೊದಲಾದವರ ಖಾಸಗಿ/ವೈಯುಕ್ತಿಕ ಬದುಕಿನ ವಿವರಗಳ ಭಾಗದಲ್ಲಿ ಬಾಲ್ಯ, ಹರೆಯ, ದಾಂಪತ್ಯ ಮೊದಲಾದ ಸಂದರ್ಭದಲ್ಲಿ ಅವರ ಬದುಕಿನ ವಿಕಾಸ ಹಂತವನ್ನು ಚರ್ಚಿಸಲಾಗಿದೆ. ಇದರ ಆ ಹಂತಗಳಲ್ಲಿ ಅವರು ಎದುರಿಸಿದ ಸಮಸ್ಯೆ, ಸವಾಲು, ತಳಮಳ, ಪರಿಹಾರ ಮೊದಲಾದವುಗಳ ಕುರಿತಾಗಿ ಚರ್ಚಿಸಲಾಗಿದೆ. ಹಾಗೇ ಅವರ ಸಾರ್ವಜನಿಕ ಬದುಕು ಭಾಗದಲ್ಲಿ ಕಲಾವಿದೆಯರಾಗಿ/ಸಾಮಾಜಿಕ ಹೋರಾಟಗಾರ್ತಿಯರಾಗಿ ಸಾರ್ವಜನಿಕವಾಗಿ ಅವರು ಪಡೆದ ಜನಪ್ರಿಯತೆ, ಸಭೆ ಸಮಾರಂಭಗಳಲ್ಲಿ ಅವರ ತೊಡಗಿಕೊಂಡ ಬಗೆ, ಸಿಕ್ಕ ಮಾನ ಸಮ್ಮಾನ, ಅವರಿಗೆ ದೊರೆತ ಒಡನಾಡಿಗಳ ಬೆಂಬಲ ಮೊದಲಾದ ವಿಚಾರಗಳ ಕುರಿತು ಚರ್ಚೆ ಇದೆ. ಹಾಗೇ ಸಾರ್ವಜನಿಕ ಬದುಕಿನಲ್ಲಿ ಎದುರಾದ ಸಮಸ್ಯೆ ಸವಾಲುಗಳ ಚರ್ಚೆ ಇದೆ.

ಅಧ್ಯಾಯ–೬ ಸಮಾಜದ ಅಂಚಿನಲ್ಲಿ ಉಳಿದ ಮಹಿಳೆಯರ ಆತ್ಮಕಥೆಗಳ ವೈಶಿಷ್ಟ್ಯ- ಇದರ ಉಪ ಅಧ್ಯಾಯ ೧ರಲ್ಲಿ ಜಾಜಿ ತಿಮ್ಮಯ್ಯ, ಉಪ ಅಧ್ಯಾಯ ೨ ರಲ್ಲಿ ದು.ಸರಸ್ವತಿ, ಉಪ ಅಧ್ಯಾಯ ೩ ರಲ್ಲಿ ವೀಣಾಧರಿ, ಉಪ ಅಧ್ಯಾಯ ೪ ರಲ್ಲಿ ನಳಿನಿ ಜಮೀಲಾ, ಉಪ ಅಧ್ಯಾಯ ೫ರಲ್ಲಿ ಬೇಬಿತಾಯಿ ಕಾಂಬಳೆ, ಉಪ ಅಧ್ಯಾಯ ೬ರಲ್ಲಿ ಬೇಬಿ ಹಾಲ್ದಾರ್ ಇವರೇ ಮೊದಲಾದವರ ಖಾಸಗಿ/ವೈಯುಕ್ತಿಕ ಬದುಕಿನ ವಿವರಗಳ ಭಾಗದಲ್ಲಿ ಬಾಲ್ಯ, ಹರೆಯ, ದಾಂಪತ್ಯ ಮೊದಲಾದ

ಸಂದರ್ಭದಲ್ಲಿ ಅವರ ಬದುಕಿನ ವಿಕಾಸ ಹಂತವನ್ನು ಚರ್ಚಿಸಲಾಗಿದೆ. ಇದರ ಆ ಹಂತಗಳಲ್ಲಿ ಅವರು ಎದುರಿಸಿದ ಸಮಸ್ಯೆ, ಸವಾಲು, ತಳಮಳ, ಪರಿಹಾರ ಮೊದಲಾದವುಗಳ ಕುರಿತಾಗಿ ಚರ್ಚಿಸಲಾಗಿದೆ. ಹಾಗೇ ಅವರ ಸಾರ್ವಜನಿಕ ಬದುಕು ಭಾಗದಲ್ಲಿ ಕಲಾವಿದೆಯರಾಗಿ/ಸಾಮಾಜಿಕ ಹೋರಾಟಗಾರ್ತಿಯರಾಗಿ ಸಾರ್ವಜನಿಕವಾಗಿ ಅವರು ಪಡೆದ ಜನಪ್ರಿಯತೆ, ಸಭೆ ಸಮಾರಂಭಗಳಲ್ಲಿ ಅವರ ತೊಡಗಿಕೊಂಡ ಬಗೆ, ಸಿಕ್ಕ ಮಾನ ಸಮ್ಮಾನ, ಅವರಿಗೆ ದೊರೆತ ಒಡನಾಡಿಗಳ ಬೆಂಬಲ ಮೊದಲಾದ ವಿಚಾರಗಳ ಕುರಿತು ಚರ್ಚೆ ಇದೆ. ಹಾಗೇ ಸಾರ್ವಜನಿಕ ಬದುಕಿನಲ್ಲಿ ಎದುರಾದ ಸಮಸ್ಯೆ ಸವಾಲುಗಳ ಚರ್ಚೆ ಇದೆ.

ಅಧ್ಯಾಯ– ೭ ಮಹಿಳಾ ಆತ್ಮಕಥೆಗಳ ತೌಲನಿಕ ಅಧ್ಯಯನ– ಈ ಅಧ್ಯಾಯದಲ್ಲಿ ಕನ್ನಡ ಮಹಿಳಾ ಆತ್ಮಕಥೆಗಳನ್ನು ಮತ್ತು ಕನ್ನಡಕ್ಕೆ ಅನ್ಯಭಾಷೆಯಿಂದ ಅನುವಾದಗೊಂಡ ಮಹಿಳಾ ಆತ್ಮಕಥೆಗಳನ್ನು ತೌಲನಿಕವಾಗಿ ನೋಡಲಾಗಿದೆ. ಉಪ ಅಧ್ಯಾಯ ೭.೧. ಅತ್ಮಕಥಾಗಾರ್ತಿಯರ ವೈಯಕ್ತಿಕ ಬದುಕಿನ ವಿವರಗಳು. ಅದರ ಒಳಗಿನ ಉಪ ಅಧ್ಯಾಯ ೭.೧.೧. ಬಾಲ್ಯ, ೭.೧.೨. ರಲ್ಲಿ ಹರೆಯ ಮತ್ತು ೭.೧.೨. ದಾಂಪತ್ಯ– ಇವುಗಳಲ್ಲಿ ಕನ್ನಡ ಮತ್ತು ಅನ್ಯಭಾಷೆಯ ಆತ್ಮಕಥೆಗಳಲ್ಲಿ ಹೇಗೆ ವ್ಯಕ್ತಗೊಂಡಿದೆ ಎಂಬುದನ್ನು ಚರ್ಚಿಸಲಾಗಿದೆ. ಉಪ ಅಧ್ಯಾಯ ೭.೨. ಆತ್ಮಕಥಾಗಾರ್ತಿಯರ ಸಾಂಸ್ಕೃತಿಕ ಬದುಕಿನ ವಿವರಗಳು. ಇದರ ಒಳಗಿನ ಉಪ ಅಧ್ಯಾಯ ೭.೨.೧. ಸಮಾಜ, ೭.೨.೨. ಸಂಸ್ಕೃತಿ ಮತ್ತು ೭.೨.೩. ಭಾಷೆ – ಇವುಗಳು ಆತ್ಮಕಥೆಗಾರ್ತಿಯರ ಮೇಲೆ ಬೀರಿದ ಪ್ರಭಾವ ಮತ್ತು ಪರಿಣಾಮವನ್ನು ಚರ್ಚಿಸಲಾಗಿದೆ. ಉಪ ಅಧ್ಯಾಯ ೭.೩. ಆತ್ಮಕಥಾಗಾರ್ತಿಯರು ಎದುರಿಸಿದ ಸಮಸ್ಯೆಗಳು ಮತ್ತು ಸವಾಲುಗಳು. ಇದರ ಒಳಗಿನ ಉಪ ಅಧ್ಯಾಯದ ಒಳಗೆ ಉಪ ಅಧ್ಯಾಯ ೭.೩.೧. ಕೌಟುಂಬಿಕ ಸಮಸ್ಯೆಗಳು, ೭.೩.೨.ಸಾಮಾಜಿಕ ಸಮಸ್ಯೆಗಳು, ೭.೩.೩.ಧಾರ್ಮಿಕ ಸಮಸ್ಯೆಗಳು, ೭.೩.೪. ವೃತ್ತಿಯಲ್ಲಿನ ಸಮಸ್ಯೆಗಳು ಮತ್ತು ೭.೩.೫. ಸಾಹಿತ್ಯಿಕ ಸಮಸ್ಯೆಗಳು– ಮೊದಲಾದವುಗಳು ಆತ್ಮಕಥಾಗಾರ್ತಿಯರನ್ನು ಕಾಡಿದ ಪರಿಯನ್ನು ತೌಲನಿಕವಾಗಿ ಚರ್ಚಿಸಲಾಗಿದೆ.

ಅಧ್ಯಾಯ – ೮ ಸಮಾರೋಪ

೮.೧. ಅಧ್ಯಯನದ ಫಲಿತಗಳು

೮.೨. ಅಧ್ಯಯನದ ಸಾಧ್ಯತೆಗಳು

ಇದರಲ್ಲಿ ಅಧ್ಯಯನದ ಒಟ್ಟು ಫಲಿತಗಳನ್ನು ಮತ್ತು ಅಧ್ಯಯನ ಸಾಧ್ಯತೆಯನ್ನು ನೀಡಲಾಗಿದೆ.

೧.೩. ಪ್ರಸ್ತುತ ಅಧ್ಯಯನದ ಮಹತ್ವ :

ಆತ್ಮಚರಿತ್ರೆ ಒಂದು ಸಶಕ್ತ ಸಾಹಿತ್ಯ ಪ್ರಕಾರವಾಗಿ ಗುರುತಿಸಿಕೊಂಡಿದ್ದೇ ಹೊಸಗನ್ನಡ ಸಂದರ್ಭದಲ್ಲಿ ಎನ್ನುವುದು ವಿಶೇಷವಾದ ಸಂಗತಿ. ಕಲೆ, ಸಾಹಿತ್ಯ, ಸಂಗೀತ, ರಾಜಕೀಯ, ಸಾಮಾಜಿಕ, ಹೋರಾಟ–ಇನ್ನೂ ಮುಂತಾದ ಸಾರ್ವಜನಿಕ ರಂಗಗಳಲ್ಲಿ ಕೀರ್ತಿಗಳಿಸಿದ ಮಹಾತ್ಮರ ಬಗ್ಗೆ ಅವರ ವೈಯಕ್ತಿಕ ಜೀವನದ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಜನರಿಗೆ ಇದ್ದೇ ಇರುತ್ತದೆ. ಇದರ ಜೊತೆಗೆ ಆಯಾ ಪ್ರದೇಶದ, ಆಯಾ ಕಾಲದ ಜನರ ಜೀವನ ಸಂಸ್ಕೃತಿ, ಸಾಮಾಜಿಕ ರಚನೆಯನ್ನು

ಅಂದಿನ ಪರಿಸರ ವಿಶಿಷ್ಟವಾದ ಸಂಪ್ರದಾಯ, ಆಚರಣೆಗಳು ತೆರೆದುಕೊಂಡು ಅಭ್ಯಾಸಿಗರ ತಿಳುವಳಿಕೆಯ ಪರಿಧಿಯನ್ನು ವಿಸ್ತರಿಸುತ್ತದೆ.

ಮಹಿಳಾ ಆತ್ಮಕತೆಗಳು ಆತ್ಮಕಥಾಗಾರ್ತಿಯರ ಬದುಕಿನ ವಿವರವಲ್ಲದೇ ಅವರ ಸುತ್ತಲಿನ ವರ್ತಮಾನದ ಸಮಾಜದ ಸಾಂಸ್ಕೃತಿಕ ವಿಶ್ಲೇಷಣೆಯನ್ನು ಒಳಗೊಂಡಿರುತ್ತದೆ. ಯಾರಿಗೂ ಕೂಡಾ ತನ್ನ ಜೀವನದಲ್ಲಿ ಎದುರಿಸಿದ ಪ್ರತಿಕೂಲ ಪರಿಸ್ಥಿತಿ ಸಂತೋಷವನ್ನು ನೀಡಲಾರದು. ಆದರೆ ಆ ಪ್ರತಿಕೂಲ ಪರಿಸ್ಥಿತಿಗಳೇ ಕೆಲವೊಮ್ಮೆ ಜೀವನದ ಪಾಠಗಳನ್ನು ಕಲಿಸುತ್ತವೆ. ಅಂತಹ ಪಾಠಗಳನ್ನು ಯಾರಿಂದಲೋ ತಿಳಿದು ಇಲ್ಲವೇ ಕಲಿತು ಬದುಕಲು ಸಾಧ್ಯವಿಲ್ಲ. ತಾವೇ ಅನುಭವಿಸಿ ಪಾಠವನ್ನು ಕಲಿಯಬೇಕಾಗುತ್ತದೆ. ಮಹಿಳಾ ಆತ್ಮಕತೆಗಳು ಅಂತಹ ಯಶೋಗಾಥೆಗಳಾಗಿವೆ.

ತಮ್ಮ ಮುಂದಿದ್ದ ಅಡೆ ತಡೆಗಳನ್ನು ದಾಟಿ ಜೀವನದ ಗುರಿಯ ಕಡೆ ಸಾಗಬೇಕಾದರೆ ಹಲವು ಬಗೆಯ ಅನಾನುಕೂಲಕರವಾದ ಪರಿಸ್ಥಿತಿಗಳಿಗೆ ಮುಖಾಮುಖಿಯಾಗಿದ್ದಾರೆ. ಜೀವನದ ಹೋರಾಟದಲ್ಲಿ ಸಾಕಷ್ಟು ಪಡೆದಿದ್ದಾರೆ ಹಾಗೆಯೇ ಕಳೆದುಕೊಂಡದ್ದಿದೆ. ಆದರೆ ಅವರ ಜೀವನ ಹೋರಾಟದಲ್ಲಿ ಸೋಲಿಗೆ ಕುಗ್ಗದೇ, ಸಂತಸಕ್ಕೆ ಹಿಗ್ಗದೆ ಬಂದ ಸಮಸ್ಯೆಯನ್ನು ಎದುರಿಸಿರುವ ಪರಿ ಗಮನಾರ್ಹ. ಹೀಗೆ ಸಮಸ್ಯೆಗಳನ್ನು ಸಂಕಷ್ಟಗಳನ್ನು ನಿರಂತರವಾಗಿ ಎದುರಿಸುವ ಮೂಲಕ ಗಟ್ಟಿತನ ಪ್ರಾಪ್ತವಾದುದಕ್ಕೆ ಆತ್ಮಕಥೆಗಳಲ್ಲೇ ಹಲವು ನಿದರ್ಶನಗಳು ಲಭ್ಯವಾಗುತ್ತದೆ. ಆ ಗಟ್ಟಿತನವೇ ಜೀವನೋತ್ಸಾಹ, ಜೀವನ ಪ್ರೀತಿಯನ್ನು ಉಂಟುಮಾಡಿವೆ. ಇಂತಹ ಆತ್ಮಕತೆಗಳ ಅಧ್ಯಯನದಿಂದ ಕಲಿತು ಕೊಳ್ಳುವುದು ಬಹಳಷ್ಟಿದೆ. ಜೀವನದ ಸಂಕಷ್ಟಗಳ ವಿರುದ್ಧ ಹೋರಾಡಿ ಗೆದ್ದ ಆತ್ಮಕಥಾಗಾರ್ತಿಯರ ಜೀವನ, ಕಾರ್ಯ, ಸಾಧನೆ, ಇಂದಿನ ಯುವ ಜನಾಂಗಕ್ಕೆ ಆದರ್ಶ ಮತ್ತು ದಾರಿದೀಪ. ಅವು ಬದುಕುವ ಜೀವನ ಪಾಠವನ್ನು ಹೇಳಿ ಕೊಡುತ್ತವ ಜೊತೆಜೊತೆಗೆ ಆತ್ಮಬಲದ ನೀತಿ ಪಾಠವನ್ನು ಕಲಿಸುತ್ತದೆ.

೧.೪ ಅಧ್ಯಯನದ ವಿಧಾನ ಕ್ರಮ :

ಪ್ರಸ್ತುತ ಅಧ್ಯಯನದಲ್ಲಿ ತೌಲನಿಕ, ವಿಶ್ಲೇಷಣಾತ್ಮಕ ಮತ್ತು ಚಾರಿತ್ರಿಕ ವಿಧಾನಗಳನ್ನು ಅನುಸರಿಸಿ ಅಧ್ಯಯನ ಮಾಡಲಾಗಿದೆ. ಆಧುನಿಕ ಸಾಹಿತ್ಯ ವಿಮರ್ಶಾ ಶಿಸ್ತುಗಳಾದ ತೌಲನಿಕ ಮತ್ತು ವಿಶ್ಲೇಷಣಾತ್ಮಕ ವಿಧಾನಗಳು ಪ್ರಮುಖವಾಗಿದ್ದು, ಎರಡು ಕೃತಿ ಇಲ್ಲವೇ ವಸ್ತುಗಳನ್ನು ಹೋಲಿಸಿ ಅವುಗಳ ಮೌಲ್ಯಮಾಪನ ಮಾಡಲಾಗುತ್ತದೆ. ಇದರಿಂದಾಗಿ ಅಧ್ಯಯನಕ್ಕೆ ಹೆಚ್ಚು ನಿಖರತೆ ಮತ್ತು ಖಚಿತತೆ ಪ್ರಾಪ್ತವಾಗುತ್ತದೆ. ಇಂಥ ಅಧ್ಯಯನದಿಂದ ಕೃತಿಗಳ ಸತ್ವವನ್ನು ಹೆಚ್ಚು ಗ್ರಹಿಸುವಂತಾಗುತ್ತದೆ. ಎಲ್ಲಾ ಸಾಹಿತ್ಯ ಕೃತಿಗಳು ಒಂದರ್ಥದಲ್ಲಿ ವಿಶಿಷ್ಟವಾಗವುಗಳೇ ಅದರೂ ಯಾವುದು ಯಾವುದಕ್ಕಿಂತ ಹೆಚ್ಚು ಎಂಬ ಸತ್ಯ ಗೋಚರವಾಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಬಂದ ಮಹಿಳಾ ಆತ್ಮಕತೆಗಳನ್ನು ಕನ್ನಡಕ್ಕೆ ಭಾಷಾಂತರಾಗೊಂಡ ಅನ್ಯಭಾಷಾ ಮಹಿಳಾ ಆತ್ಮಕತೆಗಳ ಜೊತೆಗಿರಿಸಿ ತುಲನಾತ್ಮಕವಾಗಿ ಅಭ್ಯಸಿಸಲಾಗಿದೆ. ಇವೆರಡು ಬಗೆಯ ಆತ್ಮಕಥೆಯಲ್ಲಿ ಬರುವ ವಿಷಯಗಳ ನೈಜ ಚಿತ್ರಣವನ್ನು ಏಕಕಾಲಕ್ಕೆ ಪರಸ್ಪರ ಸಾದೃಶ್ಯ ಮತ್ತು ವೈದೃಶ್ಯಗಳ ಮೂಲಕ ಅಧ್ಯಯನ ಮಾಡುವ ಸಲುವಾಗಿ ತೌಲನಿಕ ವಿಧಾನ ಕ್ರಮವನ್ನು ಮುಖ್ಯ ಅಧ್ಯಯನ ವಿಧಾನವಾಗಿ ಅನ್ವಯಿಸಿಕೊಳ್ಳಲಾಗಿದೆ. ಇದರಿಂದ ಒಂದು ಇನ್ನೊಂದರಿಂದ ಭಿನ್ನವಿಲ್ಲವೆಂದೂ, ಎರಡೂ ಸಮಾನ ಅಂಶಗಳನ್ನು ಹೊಂದಿವೆ ಮತ್ತು ಒಂದು ಇನ್ನೊಂದರಿಂದ ಹೇಗೆ ಭಿನ್ನವಾಗಿದೆ, ಅನನ್ಯವಾಗಿದೆ ಎಂಬುದನ್ನು ತಿಳಿಯಬಹುದು.

ಆತ್ಮಕಥೆ ಕೇವಲ ವ್ಯಕ್ತಿಯ ಜೀವನದ ಕಥೆಗಷ್ಟೇ ಸೀಮಿತವಾಗಿರದೇ ಆಯಾ ಕಾಲದ ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಹಾಗಾಗಿ ಆತ್ಮಚರಿತ್ರಕಾರರ ನೈಜ ಕಾಲಘಟ್ಟವನ್ನು ಮತ್ತದರ ನೆಲೆಯನ್ನು ಪುನರ್‌ರಚಿಸುವ ಕಾರ್ಯ ಮಾಡುವ ಸಲುವಾಗಿ ಚಾರಿತ್ರಿಕ ವಿಧಾನವನ್ನು ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ.

ಆತ್ಮಕಥೆಯನ್ನು ಕೇವಲ ಕಥೆಯಾಗಿ ನೋಡದೇ ಸ್ವ ಅನುಭವದ ಮಾತುಗಳನ್ನು ಗ್ರಹಿಸಿ ತಮ್ಮ ಜೀವಿತಾವಧಿಯಲ್ಲಿ ಮೆಟ್ಟಿನಿಂತ ಶೋಷಣೆಯ ನೆಲೆಗಳನ್ನು, ಪುರುಷ ಪ್ರಧಾನ ಸಮಾಜದಿಂದ ಎದುರಿಸಿದ ಸಮಸ್ಯೆಗಳು ಮತ್ತು ಸವಾಲುಗಳನ್ನು ಸಂದರ್ಭಾನುಸಾರಿ ಆತ್ಮಕಥಾಗಾರ್ತಿಯರ ಮಾತಿನ ಉಲ್ಲೇಖಗಳ ಮೂಲಕವೇ ಅಧ್ಯಯನದಲ್ಲಿ ಸಾಬೀತುಪಡಿಸುದರಿಂದ ಒಟ್ಟಾರೆ ಆತ್ಮಕಥೆಗಳನ್ನು ವಿಶ್ಲೇಷಣಾತ್ಮಕ ವಿಧಾನದ ಮೂಲಕ ಅಧ್ಯಯನ ಮಾಡಲಾಗಿದೆ.

೧.೫.ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ:

ಮಹಿಳಾ ಆತ್ಮಕಥೆಗಳ ಅಧ್ಯಯನಕ್ಕೆ ಸಂಬಂಧಿಸಿದ ಹಾಗೇ ಕನ್ನಡದಲ್ಲಿ ಸಾಕಷ್ಟು ಸಂಶೋಧನೆಗಳು ನಡೆದಿಲ್ಲ. **ಡಾ.ಸಬಿಹಾ ಭೂಮಿಗೌಡ** ಅವರ ಸಂಪಾದಕತ್ವದಲ್ಲಿ ಪ್ರಕಟವಾದ **'ಮಹಿಳಾ ಆತ್ಮಕತೆಗಳು: ಅನುಸಂಧಾನ'** ಕೃತಿಯಲ್ಲಿ ತುಳಸೀ ವೇಣುಗೋಪಾಲ ಅವರ **'ಮರಾಠಿ ಸಾಹಿತ್ಯದಲ್ಲಿ ಮಹಿಳೆಯರ ಆತ್ಮಕಥನ'**, ಪಾರ್ವತಿ ಜಿ.ಐತಾಳ್‌ರವರ **'ಮಲೆಯಾಳದಲ್ಲಿ ಮಹಿಳಾ ಆತ್ಮ ಕಥನ ಒಂದು ನೋಟ'**, ಡಾ.ಕಿಶೋರಿ ನಾಯಕ್ ಅವರ **'ಇಂಗ್ಲೀಷನಲ್ಲಿ ಮಹಿಳಾ ಆತ್ಮಕಥನಗಳು'**, ಡಾ.ಚಂದ್ರಮತಿ ಸೋಂದಾ ಅವರ **'ಕನ್ನಡದಲ್ಲಿ ಮಹಿಳಾ ಆತ್ಮಕಥನಗಳು ಒಂದು ಅವಲೋಕನ'**, ಡಾ. ತಮಿಳ್ ಸೆಲ್ವಿ ಅವರ **'ತಮಿಳಿನಲ್ಲಿ ಮಹಿಳಾ ಆತ್ಮಕತೆಗಳು'**, ಡಾ.ಭಾರತೀ ವ್ಹಿ.ಹಿರೇಮಠರವರ **'ಪಂಜಾಬಿ ಆತ್ಮಕತೆಗಳು'** ಎಂಬ ಲೇಖನಗಳು ಅಧ್ಯಯನಕ್ಕೆ ದೊರೆಯುತ್ತವೆ.

ಡಾ.ಚಂದ್ರಮತಿ ಸೋಂದಾ ಅವರ **'ಕನ್ನಡದಲ್ಲಿ ಮಹಿಳಾ ಆತ್ಮಕತೆ: ಒಂದು ಅವಲೋಕನ'** ಎನ್ನುವ ಲೇಖನವು ಮಹಿಳಾ ಆತ್ಮಕತೆಗಳು: ಅನುಸಂಧಾನ ಕೃತಿಯಲ್ಲಿದೆ. ಕನ್ನಡದಲ್ಲಿ ರಚನೆಯಾಗಿರುವ ಕೆಲವು ಮಹಿಳಾ ಆತ್ಮಕತೆಯನ್ನು ಸ್ಥೂಲವಾಗಿ ಚರ್ಚಿಸುತ್ತಾರೆ.

'ನೆನಪು: ಸಿಹಿ-ಕಹಿ'ಮತ್ತು**'ಬರಹಗಾರ್ತಿಯ ಬದುಕು'**-ಇವು ಅನುಪಮಾ ನಿರಂಜನ ಅವರ ಆತ್ಮಕತೆಗಳು. ವರ್ಜನಿಯಾ ವುಲ್ಫ್ ಹೇಳುವ 'ಮನೆಯೊಳಗಿನ ದೇವತೆ' ಯನ್ನು ನಿರ್ನಾಮ ಮಾಡಿದ ಹೊರತು ಅವಳಿಗೆ ಮುಕ್ತಿಯಿಲ್ಲ ಎನ್ನುವುದನ್ನು ಒಪ್ಪುವ ಅನುಪಮಾ 'ಒಳ್ಳೆಯ ವೈದ್ಯೆಯಾಗಬೇಕೆಂಬ ಪ್ರಬಲ ಆಸೆಯೊಂದಿಗೆ ಒಳ್ಳೆಯ ಹೆಂಡತಿ, ಗೃಹಿಣಿ ಮತ್ತು ತಾಯಿ ಆಗಬೇಕೆನ್ನುವುದು' ಎನ್ನುತ್ತಾರೆ. ಮಹಿಳೆಯ ಮೊದಲ ಆಯ್ಕೆ ಮನೆ. ವೃತ್ತಿ, ಹವ್ಯಾಸಗಳೆಲ್ಲ ಅನಂತರದವು. ಮನೆಗೆಲಸ, ವೈದ್ಯಕೀಯ ಕೆಲಸಗಳಿಂದ ದೇಹಕ್ಕೆ ಆಯಾಸವಾಗಿ ಇತರ ಓದಿಗೆ ಸಮಯವಾಗಲಿ, ಶಕ್ತಿಯಾಗಲಿ ಸಾಲದೆ ಬರವಣಿಗೆ ಶಿಥಿಲವಾಗುತ್ತದೆ ಎನ್ನುವ ಸತ್ಯ ಅವರಿಗೆ ಗೋಚರಿಸುತ್ತದೆ. ಮಕ್ಕಳು ತಾಯಿಯ ಅವಲಂಬಿತರು. ಮಾದರಿ ತಾಯ್ತನ ತಪ್ಪಿದರೆ ಅಪರಾಧಿಭಾವ ಕಾಡುತ್ತದೆ ಎನ್ನುವ ಅನುಪಮಾ ಅವರ ಅಭಿಪ್ರಾಯ ಅನೇಕ ಮಹಿಳೆಯರದೂ ಹೌದು.

ಡಾ. ಸಬಿಹಾ ಭೂಮಿಗೌಡರವರು **'ಅನುಸಂಧಾನ'** ಕೃತಿಯಲ್ಲಿ ಕನ್ನಡದಲ್ಲಿ ಬಂದ ಮಹಿಳಾ ಆತ್ಮಕತೆಗಳು ಮತ್ತು ಬೇರೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡಿರುವ ಆತ್ಮಕತೆಗಳ ಕುರಿತು ಸ್ಥೂಲವಾಗಿ ಚರ್ಚಿಸಿದ್ದಾರೆ ಮೊದಲಿಗೆ ಆತ್ಮಕತೆಯ ರಚನೆಯ ಕುರಿತಂತೆ ಕೆಲವು ಲೇಖಕಿಯರ ನಿಲುವುಗಳೇನು? ಎಂಬುದನ್ನು ತಿಳಿಸಿದ್ದಾರೆ.

Women's Autobiolography and the persona: Towards a poetics of Self explanation (2007) ಎಂಬ ಮಹಾಪ್ರಬಂಧದಲ್ಲಿ ಅಮ್ಮುಲು ಕುಟ್ಟಿ (Ammulu kutty) ಅವರು ಮಹಿಳಾ ಆತ್ಮಕಥೆಗಳಲ್ಲಿ ಮಹಿಳೆಯರು ತಮ್ಮ ಅತ್ಮಕಥೆಗಳಲ್ಲಿ ಮಹಿಳೆಯರು ತಮ್ಮ ಅಸ್ಮಿತೆಗಾಗಿ ನಡೆಸುವ ಹುಡುಕಾಟವನ್ನು ಕುರಿತು ಚರ್ಚಿಸಿದ್ದಾರೆ. ಒಂಟಿಯಾಗಿದ್ದು ಅಥವಾ ಪ್ರತ್ಯೇಕವಾಗಿದ್ದು **'ತನ್ನತನ'**ವನ್ನು ಕಂಡುಕೊಳ್ಳುವ ಮತ್ತು ಅದಕ್ಕೆ ಭಿನ್ನವಾಗಿ ಸಂಬಂಧಾತ್ಮಕ **ಅನನ್ಯತೆ** (relational identity) ಯ ಮೂಲಕ ತನ್ನ ತನವನ್ನು ಅನ್ವೇಷಣೆ ಯಾವ ರೀತಿ ಮಹಿಳಾ ಆತ್ಮಕತೆಗಳಲ್ಲಿ ಆಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಾತೃಪ್ರಧಾನತೆ ವ್ಯವಸ್ಥೆಯಲ್ಲಿ ಮಹಿಳೆಯರ ಪ್ರತಿನಿಧೀಕರಣ ಹೇಗಾಗಿದೆ. ಪಾಶ್ಚಾತ್ಯ ಮಹಿಳಾ ಆತ್ಮಕಥೆಗಳಲ್ಲಿ ಕಂಡುಬರುವ 'ಸ್ವ'(self) ಮತ್ತು ಅನನ್ಯತೆ (identity) ಯ ಕುರಿತು ಅಧ್ಯಯನದಲ್ಲಿ ಚರ್ಚಿಸಿದ್ದಾರೆ. ಸಮಾಜವೊಂದು ನಿರ್ಮಾಣ ಮಾಡಿದ ಸಿದ್ಧ ಮಹಿಳಾ ಮಾದರಿಗಳ ಬದಲಿಗೆ ಹೆಣ್ಣು ತನ್ನದೇ ಆದ ನೈಜ ರೂಪವನ್ನು ಆತ್ಮಕತೆಗಳಲ್ಲಿ ಅಭಿವ್ಯಕ್ತಿಸುವುದರ ಮೂಲಕ ಆತ್ಮಕಥೆಗಳು ಓದುಗರನ್ನು ಸನಿಹ ತರುವಂತೆ ಮಾಡಿತು. ಆತ್ಮಕಥೆಗಳು ಮಹಿಳಾ ಜಗತ್ತಿನ ಕನ್ನಡಿಗಳಂತೆ ಪ್ರತಿಬಿಂಬಿಸುತ್ತವೆ. ತನ್ನ ಬಗ್ಗೆ ಹೇಳಿಕೊಳ್ಳಲು ಯಾವುದೇ ಅವಕಾಶಗಳು ಇಲ್ಲವಾದಾಗ ಅಡೆತಡೆಗಳಿದ್ದಾಗ ಮಹಿಳಾ ಪರವಾದ ವ್ಯಾಖ್ಯಾನ ಮಂಡನೆಯು ಆತ್ಮಕಥೆಯ ಮೂಲಕ ಬೆಳಕಿಗೆ ಬಂತು.

Gender Identity ಎಂಬುದು ಮನಃಶಾಸ್ತ್ರದ ಮೂಲಕ ಬಂದ ಕಲ್ಪನೆಯಾಗಿದೆ. ಈ ರೀತಿಯ ಮನಃಶಾಸ್ತ್ರೀಯ ಪರಿಕಲ್ಪನೆಯು ಸಾಮಾಜಿಕ ಸಂರಚನೆಯ ಜೊತೆಗೆ ಸಂಬಂಧವನ್ನು ಹೊಂದಿದ್ದು ಆಧುನಿಕ ಸಂದರ್ಭದಲ್ಲಿ ತನ್ನ ತನದ ಇರುವಿಕೆಯನ್ನು ಜಗತ್ತಿಗೆ ತೋರಿಸುವ ತಹತಹ ಮಹಿಳೆಯರಲ್ಲಿ ಉಂಟಾಯಿತು. ಅದಕ್ಕಾಗಿ ಅವರು ಪುರುಷ ಪ್ರಧಾನ ಸಮಾಜದಲ್ಲಿ ಅದನ್ನು ಮೀರುವ ಪ್ರಯತ್ನ ನಡೆಸಿದರು. ಸಮಾಜವು ತಮ್ಮ ಸುತ್ತ ಮಹಿಳೆಯರಿಗೆ ನಿರ್ಮಿಸಿದ್ದ ಸಂಪ್ರದಾಯ ರೂಢಿಗಳ ಬೇಲಿಯನ್ನು ಮುರಿದರು. ಸಮಾಜದಲ್ಲಿ ತಮ್ಮ ಆಸ್ಮಿತೆಯನ್ನು ಕಂಡುಕೊಳ್ಳಬಯಸಿದರು. ಆದರೆ ಒಂಟಿಯಾಗಿ ಅಲ್ಲ, ಬದಲಿಗೆ ತಮ್ಮ ಸಮಾಜ, ಕುಟುಂಬದೊಂದಿಗಿನ ಸಂಬಂಧದ ಜೊತೆಗೆಯೇ ಎಂಬುದು ಕೂಡ ಪ್ರಮುಖವಾದ ಅಂಶವಾಗಿದೆ ಎಂಬುದನ್ನು ಸಂಶೋಧಕರು ಚರ್ಚಿಸುತ್ತಾರೆ.

ಈವರೆಗೆ ನಡೆದ ಅಧ್ಯಯನಗಳನ್ನು ಗಮನಿಸಿದಾಗ, ಮುಖ್ಯವಾಗಿ ಕನ್ನಡದಲ್ಲಿ ನಡೆದ ಅಧ್ಯಯನಗಳು ಮಹಿಳಾ ಆತ್ಮಕತೆಗಳ ವಸ್ತು ವಿವರಗಳನ್ನು ಸ್ಥೂಲವಾಗಿ ಚರ್ಚಿಸಿರುತ್ತವೆ. ಆತ್ಮಕತೆಯ ರಚನೆಯು ವೈಯುಕ್ತಿಕ ನೆಲೆಯಿದ್ದಾದರೂ ಆತ್ಮಕಥಾಗಾರ್ತಿಯರ ಬದುಕಿನ ಜೊತೆ ಇತರರ ಬದುಕು, ಜೀವನ, ಕೂಡ ಇರುತ್ತದೆ. ಸಮಾಜ, ಸಮುದಾಯದ ಬದುಕು ಕೂಡ ಒಳಗೊಂಡಿರುತ್ತದೆ. ಅದರ ಜೊತೆಗೆ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಂಶವು ಇರುತ್ತದೆ. ಒಂದರ್ಥದಲ್ಲಿ ಆತ್ಮಕತೆಯು ಆತ್ಮ ಕಥಾಗಾರ್ತಿಯರ ಚರಿತ್ರೆ ಅಲ್ಲದೇ ಅವರ ಸಮಕಾಲೀನ ಚರಿತ್ರೆಯು ಕೂಡ ಆಗುತ್ತದೆ. ನಾವು ಕೃತಿಯೊಂದರ ವಿಮರ್ಶೆಯಲ್ಲಿ ತೊಡಗುವಾಗ ಆ ಕೃತಿ ಸಮಕಾಲೀನ ಸಂದರ್ಭ ಸನ್ನಿವೇಶಗಳನ್ನು ಎಷ್ಟರ ಮಟ್ಟಿಗೆ

ಕಟ್ಟಿಕೊಟ್ಟಿದೆ ಎನ್ನುವುದನ್ನು ಗ್ರಹಿಸಲಾಗಿದೆ. ಈ ನಿಟ್ಟಿನಲ್ಲಿ ಈವರೆಗೆ ನಡೆದ ಅಧ್ಯಯನಗಳು ಈ ಕುರಿತು ಗಮನ ಹರಿಸಿಲ್ಲ ಎನ್ನಬಹುದು. ಅದರ ಬಗ್ಗೆ ಅಧ್ಯಯನ ಚರ್ಚೆಯನ್ನು ಮಾಡಲಾಗಿದೆ.

ಅಧ್ಯಾಯ-೨ ಕನ್ನಡದಲ್ಲಿ ಮಹಿಳಾ ಆತ್ಮಕಥೆಗಳ ಹುಟ್ಟು ಮತ್ತು ಬೆಳವಣಿಗೆ

೨.೧ ಆತ್ಮಕಥೆ ಮತ್ತು ಜೀವನ ಚರಿತ್ರೆ

ಆತ್ಮಕಥೆ ಮತ್ತು ಜೀವನ – ಇವುಗಳ ನಡುವಿನ ಸಾಮ್ಯತೆ ಮತ್ತು ಭಿನ್ನತೆಯನ್ನು ಗುರುತಿಸಲಾಗಿದೆ. ಆತ್ಮಕಥೆ ಮತ್ತು ಜೀವನ ಚರಿತ್ರೆಗಳು ಆಧುನಿಕ ಸಾಹಿತ್ಯ ಪ್ರಕಾರಗಳು. ಅದರಲ್ಲೂ ಗದ್ಯಪ್ರಕಾರ. ಕನ್ನಡ ಸಂದರ್ಭದಲ್ಲಿ ನವೋದಯ ಕಾಲಘಟ್ಟದ ವೇಳೆಯಲ್ಲಿ ಕಾಣಿಸಿಕೊಂಡಂತಹವು. ಔದ್ಯೋಗಿಕ ಕ್ರಾಂತಿ ಮತ್ತು ಇಂಗ್ಲೀಷ್ ಶಿಕ್ಷಣವು ಉಂಟುಮಾಡಿದ ಪ್ರಭಾವವು ವ್ಯಕ್ತಿಗಳಲ್ಲಿ ಸಾಮುದಾಯಿಕ ಬದುಕಿಗೆ ನೀಡುತ್ತಿದ್ದ ಪ್ರಾಮುಖ್ಯತೆಗಿಂತ ವ್ಯಕ್ತಿನಿಷ್ಠತೆ, ವ್ಯಕ್ತಿಸ್ವಾತಂತ್ರ್ಯ, ವೈಚಾರಿಕತೆ, ಇತಿಹಾಸಪ್ರಜ್ಞೆಯನ್ನು ಮೂಡಿಸಿತು. ಇವು ಆತ್ಮಚರಿತ್ರೆ ಮತ್ತು ಜೀವನಚರಿತ್ರೆಗಳ ರಚನೆಗೆ ಕಾರಣವಾಯಿತು. “ಆತ್ಮಚರಿತ್ರೆಯನ್ನು ನಿಜವಾಗಿ ನೋಡಿದರೆ ಅದು ಜೀವನಚರಿತ್ರೆಯ ಒಂದು ಭಾಗ. ಸುಮಾರು ೧೮ನೇ ಶತಮಾನದ ಕೊನೆಯವರೆಗೂ ಆತ್ಮಕಥೆಗೆ ಪ್ರತ್ಯೇಕ ಅಸ್ತಿತ್ವವಿರಲಿಲ್ಲ. ಜೀವನ ಚರಿತ್ರೆಯಲ್ಲಿಯೇ ಅದು ಸೇರಿಹೋಗಿತ್ತು. ೧೯ನೇ ಶತಮಾನದ ಆದಿಭಾಗದಲ್ಲಿ ಅದಕ್ಕೆ ಪ್ರತ್ಯೇಕ ಅಸ್ತಿತ್ವ ಬಂದಿತು” (ಕನ್ನಡ ವಿಶ್ವಕೋಶ, ಸಂ-೧, ೧೯೬೮, ಪು. ೭೩೨)

ಇವೆರಡಲ್ಲೂ ವ್ಯಕ್ತಿಯ ಜೀವನದ ವಿವರಗಳ ದಾಖಲೆಗಳು ಇರುವುದರಿಂದ ಆತ್ಮಚರಿತ್ರೆ ಮತ್ತು ಜೀವನಚರಿತ್ರೆಯಲ್ಲಿನ ವ್ಯತ್ಯಾಸ ಅಷ್ಟೇನು ಹೆಚ್ಚಿನದಲ್ಲ. ಆತ್ಮಕಥೆಯು ಜೀವನಚರಿತ್ರೆಯ ಭಾಗವಾದರೂ ಕೆಲವೊಮ್ಮೆ ಜೀವನಚರಿತ್ರೆ ನಿರ್ಮಾಣದಲ್ಲಿ ಆತ್ಮಕಥೆ ಅವಶ್ಯವಾಗುತ್ತದೆ. ಒಂದು ಆತ್ಮಕಥೆಯು ಹಲವು ಜೀವನಚರಿತ್ರೆ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ. ಉದಾಹರಣೆಗೆ ಮಹಾತ್ಮಗಾಂಧಿಯವರನ್ನು ಕುರಿತಂತೆ ಹಲವು ಜೀವನಚರಿತ್ರೆಗಳು ರಚನೆಯಾಗಿವೆ. ಕನ್ನಡದಲ್ಲಿ ಜೀವನಚರಿತ್ರೆ ಮತ್ತು ಆತ್ಮಕಥೆಗಳ ಸಂಖ್ಯೆ ಹೇಳಿಕೊಳ್ಳುವಷ್ಟು ಪ್ರಮಾಣದಲ್ಲಿ ಅಲ್ಲವಾದರೂ ಇತ್ತೀಚಿನ ದಿನಗಳಲ್ಲಿ ಸಾಕಷ್ಟು ರಚನೆಯಾಗುತ್ತಿವೆ. ಇವುಗಳಲ್ಲಿ ಸುಮಾರು ಕಾಲುಭಾಗದಷ್ಟು ಆತ್ಮಚರಿತ್ರೆಗಳಾದರೆ ಉಳಿದವು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗಳನ್ನು ಮಾಡಿದವರ ಜೀವನಚರಿತ್ರೆಗಳು ಆಗಿವೆ.

ಜೀವನಚರಿತ್ರೆಯಲ್ಲಿ ಚರಿತ್ರಕಾರರು ವೀಕ್ಷಕಸ್ಥಾನದಲ್ಲಿ ನಿಂತು ಯಾವುದೇ ಪೂರ್ವಗ್ರಹವಿಲ್ಲದೇ ತಮ್ಮ ಕೃತಿನಾಯಕರ ನೈಜವಾದ ಚಿತ್ರಣವನ್ನು ಮುಂದಿಡುವರು ಚರಿತ್ರಕಾರರಿಗೆ ಬರವಣಿಗೆಗೆ ಪೂರಕ ದಾಖಲೆಗಳಾಗಿ ಕೃತಿನಾಯಕರ ದಿನಚರಿ, ಪತ್ರವ್ಯವಹಾರ, ಅವರ ಆಪ್ತರ ಬರೆಹಗಳು ಮತ್ತು ಹೇಳಿಕೆ ಸಹಾಯಕವಾಗುತ್ತವೆ. ಆತ್ಮಚರಿತ್ರೆಯಲ್ಲಿ ಲೇಖಕರೇ ಸ್ವಯಂ ನಾಯಕರಾಗಿರುವುದರಿಂದ ಅವರಿಗೆ ಅಂತಹ ದಾಖಲೆಗಳ ಅವಶ್ಯಕತೆ ಇರುವುದಿಲ್ಲ. ಅವರು ತಮ್ಮ ಕಥೆಯನ್ನು ನೆನಪಿನಿಂದಲೇ ಬರೆಯುತ್ತಾರೆ. ಒಂದು ವೇಳೆ ದಿನಚರಿಯನ್ನು ಬರೆಯುವ ಅಭ್ಯಾಸವಿದ್ದಿದ್ದರೆ ನೆನಪನ್ನು ಖಚಿತಪಡಿಸಿಕೊಳ್ಳಲು ಅದನ್ನು ಬಳಸಿಕೊಳ್ಳಬಹುದು.

ಆತ್ಮಕಥೆಯ ಮತ್ತು ಜೀವನ ಚರಿತ್ರೆಯ ವ್ಯತ್ಯಾಸಗಳಲ್ಲಿ ಇನ್ನೊಂದು ಅಂಶವೆಂದರೆ ಆತ್ಮಕಥೆಯು ವ್ಯಕ್ತಿನಿಷ್ಠ ರಚನೆಯಾದರೆ ಜೀವನಚರಿತ್ರೆ ವಸ್ತುನಿಷ್ಠವಾದ ರಚನೆಯಾಗಿರುತ್ತದೆ. ಆತ್ಮಕಥೆರಚನಕಾರರ ಭಾವನೆ, ಅಂತರ್ಮುಖತೆ ಮೊದಲಾದ ಅಂಶಗಳು ಅವರಿಗಷ್ಟೇ ಸೀಮಿತ ಮತ್ತು ತಿಳಿದವುಗಳಾಗಿರುತ್ತವೆ. ಅದು ಅವರ ವೈಯಕ್ತಿಕ

ಅನುಭವವಾಗಿರುವುದರಿಂದ ಆತ್ಮಕಥೆಯ ರಚನೆಯು ವ್ಯಕ್ತಿನಿಷ್ಠವಾಗಿದ್ದಾಗಿರುತ್ತದೆ. ಜೀವನಚರಿತ್ರೆಯನ್ನು ರಚಿಸುವಾಗ ಹಲವು ದಾಖಲೆಗಳ (ಆತ್ಮಕಥೆ, ದಿನಚರಿ, ಆಪ್ತರ ಹೇಳಿಕೆ) ಮೂಲಕ ಕೃತಿನಾಯಕರ ಬದುಕನ್ನು ಕಟ್ಟಿಕೊಡಲಾಗುತ್ತವೆ. ಇಲ್ಲಿ ಜೀವನಚರಿತ್ರಕಾರರಿಗೆ ವೈಯಕ್ತಿಕ ಅಭಿಪ್ರಾಯಕ್ಕಿಂತ ದಾಖಲೆಗಳು ಹೇಳುವ ಮಾಹಿತಿಗಳು ಮುಖ್ಯವಾಗುತ್ತವೆ. ಚರಿತ್ರಕಾರರ ಶೈಲಿ, ನಿರೂಪಣೆ, ವರ್ಚಸ್ಸು ಬರವಣಿಗೆ ಮೇಲೆ ಬಿದ್ದರೂ, ಕೃತಿನಾಯಕರ ಸಾಧನೆಯೇ ಜೀವನಚರಿತ್ರೆ ಜನಪ್ರಿಯಗೊಳ್ಳಲು ಮಹತ್ವದಾಗುತ್ತವೆ. ಇನ್ನೊಂದು ಅಂಶವೆಂದರೆ ಆತ್ಮಕಥೆಯಲ್ಲಿ ಉತ್ತಮಪುರುಷ ಸರ್ವನಾಮ ಪದವಾದ 'ನಾನು' ಉಪಯೋಗಿಸಲಾಗುತ್ತದೆ. ಜೀವನಚರಿತ್ರೆಯಲ್ಲಿ ಪ್ರಥಮಪುರುಷ ಸರ್ವನಾಮ ಪದಗಳಾದ 'ಅವನು/ಅವಳು' ಉಪಯೋಗಿಸಲಾಗುತ್ತದೆ.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಆತ್ಮಚರಿತ್ರೆ ಮತ್ತು ಜೀವನ ಚರಿತ್ರೆಗಳ ನಡುವಿನಲ್ಲಿ ಕಾಣುವ ವ್ಯಾಪ್ತಿ, ಇತಿಮಿತಿ, ಲಕ್ಷಣ ಮೊದಲಾದವುಗಳಲ್ಲಿ ಕೆಲವೊಂದು ಸಾಮ್ಯತೆ ಮತ್ತು ವೈಶಿಷ್ಟ್ಯತೆಯನ್ನು ಮನಗಾಣಬಹುದು.

೨.೨ ಆತ್ಮಚರಿತ್ರೆ ಬರೆಹ- ಪಾಶ್ಚಾತ್ಯರ ಮತ್ತು ಭಾರತೀಯರ ನಿಲುವು-

ಪಾಶ್ಚಾತ್ಯ ಮತ್ತು ಭಾರತೀಯರಲ್ಲಿ ಹಲವು ಹತ್ತು ವಿಚಾರ, ಸ್ತರಗಳಲ್ಲಿ ಭಿನ್ನತೆಯಿರುವಂತೆಯೇ ಆತ್ಮಕಥೆಯ ಬರೆಹದ ಕುರಿತಂತೆ ಇಬ್ಬರಲ್ಲೂ ಆಭಿಪ್ರಾಯ ಭೇದಗಳಿರುವುದನ್ನು ಗ್ರಹಿಸಬಹುದು. ಆತ್ಮಕಥೆಯ ಕುರಿತು ಪಾಶ್ಚಿಮಾತ್ಯ ವಿದ್ವಾಂಸನಾದ ಜೆರೋಮ್ ಬಕ್ಲೀ (Jerome Buckley) ತನ್ನ ಕೃತಿ The Turning Key Autobiography and the subjective impulse, since 1980 (1984), 'The Ideal autobiography….describes a voyage of self discovery a life- journey and confused by frequent misdirection and even crisis of identity but reaching at last a sense of perspectives and integration., It traces through the alert awakened memory continuity from early childhood to maturity or even to old age. And as a work of literature it achieves a satisfying wholeness' (Ammulu Kutty, 2007, p. 8) ಅಂದರೆ ಮಾನವನ ಜೀವನವೇ ಒಂದು ಸಮುದ್ರಯಾನದಂತೆ ಸರಿ. ಅಂತಹ ಪ್ರಯಾಣದಲ್ಲಿ ತನ್ನ ಜೀವನದಲ್ಲಿ ಕಂಡುಕೊಂಡು ಹೆಚ್ಚುಗಾರಿಕೆ ಮತ್ತು ಬದುಕಿನ ಲಯದಲ್ಲಿ ತಪ್ಪು ನಿರ್ಧಾರ ತೆಗೆದುಕೊಂಡು ಎಡವಿದ ಪ್ರಸಂಗಗಳು ಇರುತ್ತವೆ. ವ್ಯಕ್ತಿಗಳು ಬಾಲ್ಯದಿಂದ ಪ್ರಬುದ್ಧತೆಯವರೆಗೆ ಸಮಾಜದಲ್ಲಿ ತನ್ನತನವನ್ನು ಕಂಡುಕೊಳ್ಳಲು ಬದುಕಿನ ಕೊನೆಯ ಕ್ಷಣದವರೆಗೂ ಹೋರಾಟವನ್ನು ನಡೆಸುತ್ತಾರೆ. ಹೋರಾಟ ನಡೆಸಿ ಗೆದ್ದ ಜೀವದ ತೃಪ್ತಿದಾಯಕವಾದ ಬದುಕೇ ಆತ್ಮಕಥೆಯ ರಚನೆಗೆ ಕಾರಣವಾಗುತ್ತದೆ. ತಾನು ಸಾಗಿಬಂದ ಹಾದಿಯನ್ನು ತೋರುವ ಮೂಲಕ ತನ್ನ ಬಗೆಗೆ ಸ್ವ-ಅಭಿಮಾನದಿಂದ ಕಾಣುವುದರೊಂದಿಗೆ ಅದನ್ನು ನಾಲ್ಕು ಜನಕ್ಕೆ ದರ್ಶನ ಮಾಡಿಸುವ ತವಕವೂ ಇರುತ್ತದೆ.

ಆತ್ಮಕಥೆಕಾರರಿಗೆ ತಮ್ಮ ಜೀವನದ ಸವಿಯನ್ನು ಉಣಬಡಿಸುವುದು ಒಂದು ಮಹತ್ವದ ಉದ್ದೇಶವಾಗಿರುತ್ತವೆ. ಅದರ ಜೊತೆಗೆ ರಕ್ಷಣಾತ್ಮಕ ತಂತ್ರವಾಗಿ ಆತ್ಮಕಥೆ ನೆರವಿಗೆ ಬರುತ್ತವೆ. ತಾವು ಮಾಡಿದ ಅನಿರೀಕ್ಷಿತ ಕಾರ್ಯದಿಂದ ಕೆಡಕು ಸಂಭವಿಸಿದಾಗ ತಮ್ಮ ಬಗ್ಗೆ ಜಗತ್ತು ತಪ್ಪು ತಿಳಿಯದೇ ಇರಲಿ ಎನ್ನುವ, ತನ್ನ ಕಾರ್ಯದ ಸಮರ್ಥನೆಗಾಗಿ ಕೂಡ ಆತ್ಮಕಥೆಯ ರಚನೆಯು ಮುಖ್ಯವಾಗುತ್ತದೆ. 'ಜಾರ್ಜ್ ಗುಸ್‌ಡೋರ್ಫ್ (George Gusdorf) ಎನ್ನುವ ಪಾಶ್ಚಾತ್ಯ ವಿದ್ವಾಂಸ 'Autobiography is mirror in which the individual reflects this own image 'ಎಂತಲೂ 'Autobiography is not possible in a cultural landscape where consciousness of the self does not exist.' (Ammulu Kutty, 2007, p. 80)ಆತ್ಮವೆಂದಾಗ ಪ್ರಾಮಾಣಿಕತೆ, ಶುದ್ಧತೆ, ನೇರನುಡಿ, ತನ್ನ ಒಳಗಿನ ಭಾವವನ್ನು ಹೊರಹಾಕುವ ಮನಸ್ಸಿನ ಒಂದು ಸ್ಥಿತಿ ಎನ್ನಬಹುದು. ಹಾಗಾದಾಗ ತಾನು ಹೇಗೆ ಇರುವೆನೋ ಹಾಗೇ ಚಿತ್ರಿಸಬೇಕು. ಇರುವಿಕೆ ಮತ್ತು ಕೃತಿಯ ಮೂಲಕ ಆಗುವಿಕೆಯಲ್ಲಿ ಹೊಂದಾಣಿಕೆ ಇರಬೇಕು. ಆಗ ನಿಜವಾದ ಅರ್ಥದಲ್ಲಿ ತನ್ನ ಆತ್ಮಕಥೆಗೆ ನ್ಯಾಯಕೊಟ್ಟಂತೆ ಆಗುತ್ತದೆ.

ಆತ್ಮಕಥೆಯ ಬರವಣಿಗೆಯ ಕುರಿತಾಗಿ ಭಾರತೀಯರ ದೃಷ್ಟಿಕೋನವು ಪಾಶ್ಚಾತ್ಯರಿಗಿಂತ ಭಿನ್ನವಾದುದು. ಆ ಭಿನ್ನತೆಯ ಬಗೆಗೆ ಇಲ್ಲಿನವರ ಮಾತುಗಳಿಂದಲೇ ನಿಲುವುಗಳು ಸ್ಪಷ್ಟವಾಗುತ್ತವೆ. ಮಹಾತ್ಮಗಾಂಧಿಯವರು ಆತ್ಮಕತೆಯ ಕುರಿತು 'ಆತ್ಮಕತೆಯನ್ನು ಬರೆಯುವುದ ಒಂದು ಪಾಶ್ಚಾತ್ಯ ಚಟ ಅಥವಾ ಅಭ್ಯಾಸ .ಅದೊಂದು 'ಸ್ವ'ದ ವೈಭವೀಕರಣ, ಭಾರತೀಯ ಸಂಪ್ರದಾಯ ಇದಕ್ಕೆ ವಿರುದ್ಧ ಅನ್ನುವುದಾದರೆ ಆತ್ಮಕಥನವನ್ನು ತನ್ನ ವೈಭವೀಕರಣದ ಚಾಳಿಯಿಂದ ಬಿಡುಗಡೆಗೊಳಿಸಿ ವಿವರಗಳಲ್ಲಿ ನಿಂತು ತನ್ಮಯವಾಗುವ 'ಸ್ವ'ದ ಬದಲು ವಿಕಸನದ ದಾರಿಯಲ್ಲಿ ಹುರಿಗೊಳ್ಳುವ ಏಳುಬೀಳುಗಳನ್ನು ಕಾಣುವ ಆತ್ಮವನ್ನು ಕಥನದ ಕೇಂದ್ರವಾಗಿ ಮಾಡಬಹುದು' (ಪಟ್ಟಾಭಿರಾಮ ಸೋಮಯಾಜಿ, ೧೯೯೦, ಪು. ೫೩) ಎನ್ನುವರು.

ಮಹಾತ್ಮ ಗಾಂಧೀಜಿಯವರ ಆತ್ಮಕಥನ 'ಸತ್ಯದೊಂದಿಗಿನ ನನ್ನ ಪ್ರಯೋಗಗಳು' ಜಗತ್ಪ್ರಸಿದ್ಧವಾದ ಕೃತಿ. ಅವರಿಗೆ ಆತ್ಮಕಥನದ ಬರವಣಿಗೆ ತಾನು ಮಾಡಿದ ಸತ್ಯನಿಷ್ಠೆಯ ಪ್ರಯೋಗದ ಕುರಿತು ಹೇಳಿಕೊಳ್ಳಲು ಮಾಧ್ಯಮವಾಯಿತು. ತನ್ನ ಸಾಧನೆ ಸಿದ್ಧಿಗಳನ್ನು ವೈಭವೀಕರಿಸಿಕೊಳ್ಳುವುದಕ್ಕಿಂತ ತನ್ನ ಒಳಗನ್ನು ತೆರೆದು ಆತ್ಮಶೋಧನೆ ಮಾಡಿಕೊಳ್ಳುವುದರ ಮೂಲಕ ತಾನು ವಿಕಸನವಾಗುತ್ತ ವೈಶಾಲ್ಯದೆಡೆಗೆ ಸಾಗಬೇಕು ಎನ್ನುವ ವಿಚಾರ ಒಟ್ಟು ಭಾರತೀಯ ಸಂಪ್ರದಾಯದ, ಸಂಸ್ಕೃತಿಯ ಪ್ರತೀಕವಾಗಿದೆ ಎನ್ನಬಹುದು.

೨.೩ ಕನ್ನಡದಲ್ಲಿ ಮಹಿಳಾ ಆತ್ಮಕಥೆಗಳ ಆರಂಭಕಾಲ

ಕನ್ನಡಸಾಹಿತ್ಯದಲ್ಲಿ ನಿಜವಾಗಿ ಮಹಿಳಾ ಆತ್ಮಕಥೆಯ ಆರಂಭವನ್ನು **'ಮಳವಳ್ಳಿ ಸುಂದರಮ್ಮ'**ನವರ ಬರವಣಿಗೆಯಿಂದ ಗುರುತಿಸಬಹುದು. ೧೯೭೫ರಲ್ಲಿ ರಚನೆಯಾದ **'ಅಭಿನಯ ವಿಶಾರದೆ'** ಕೃತಿ ರಂಗಭೂಮಿ ಕಲಾವಿದೆಯರಲ್ಲಿ ಹಾಗೂ ರಚನೆಯಾದ ಕನ್ನಡದ ಮಹಿಳಾ ಆತ್ಮಕಥೆಗಳಲ್ಲಿ ಮೊದಲನೆಯದು. ಸುಂದರಮ್ಮನವರು ಆತ್ಮಕಥೆಯಲ್ಲಿ ತಮ್ಮ ರಂಗಭೂಮಿ ವೃತ್ತಿಯಲ್ಲಿನ ಸಾಧಕ-ಬಾಧಕಗಳನ್ನು ಮತ್ತು ರಂಗಭೂಮಿ ಆಯ್ಕೆಯ ಕಾರಣವನ್ನು ವಿವರಿಸಿದ್ದಾರೆ. ಇವರ ಆತ್ಮಕಥೆಯ ಮೂಲಕ ಅಂದಿನ ರಂಗಭೂಮಿಯ ಕುರಿತು ತಿಳಿಯಲು ಸಾಧ್ಯವಾಗುತ್ತದೆ. ಅಂದು

ಮಳವಳ್ಳಿ ಸುಂದರಮ್ಮನವರು ನಾಟಕರಂಗ ಪ್ರವೇಶಿಸುವ ಪೂರ್ವದಲ್ಲಿ ಸಂಪ್ರದಾಯಬದ್ಧ ಸಮಾಜವು ನಾಟಕರಂಗಭೂಮಿಯನ್ನು ಕೀಳಾಗಿ ನೋಡುತ್ತಿತ್ತು. ಆ ವೃತ್ತಿಯನ್ನು ಅನೈತಿಕ ವೇಶ್ಯಾವಾಟಿಕೆಯ ಹಿನ್ನೆಲೆಯದು ಎಂದು ಕೀಳಾಗಿ ಕಾಣಲಾಗುತ್ತಿತ್ತು. ಪುರುಷರೇ ನಾಟಕದಲ್ಲಿ ಪಾತ್ರಮಾಡಲು ಹಿಂಜರಿಯುತ್ತಿದ್ದರು. ಸ್ತ್ರೀಯರಿಗಂತೂ ನಾಟಕವನ್ನು ನೋಡುವ ಅವಕಾಶ ಸಿಗುವುದೇ ಅಪೂರ್ವ. ಅಂತಹ ಸಂದರ್ಭದಲ್ಲಿ ಮಳವಳ್ಳಿ ಸುಂದರಮ್ಮ ನಾಟಕ ರಂಗವನ್ನು ಪ್ರವೇಶಿಸಿದರು. ನಾಟಕದಲ್ಲಿ ಪುರುಷರಷ್ಟೇ ತೊಡಗಿದ್ದರು. ತಮ್ಮ ಬದುಕಿಗಾಗಿ ವೃತ್ತಿಯನ್ನಾಗಿ ನಾಟಕ ರಂಗವನ್ನು ಆಯ್ಕೆಮಾಡಿಕೊಂಡ ಸುಂದರಮ್ಮನವರು ಅದರ ಏಳುಬೀಳು ಕಂಡರು. ಅವರ ನಾಟಕರಂಗಭೂಮಿಯ ಅನುಭವ ಕಥನವಾದ **'ಅಭಿನಯ ವಿಶಾರದೆ'**ಯಲ್ಲಿ ಇದನ್ನು ಸವಿವರವಾಗಿ ಹೇಳಿಕೊಂಡಿದ್ದಾರೆ.

ನಂತರದಲ್ಲಿ ದಕ್ಷಿಣ ಕನ್ನಡದ ಹಿರಿಯ ಲೇಖಕಿಯಾದ ವಾಸಂತಿಬಾಯಿ ಪಡುಕೋಣೆಯವರ ಆತ್ಮಕಥೆಯನ್ನು ರಚಿಸಿರುವುದನ್ನು ಗಮನಿಸಬಹುದು. ೧೯೭೬ ರಲ್ಲಿ 'ನನ್ನ ಮಗ ಗುರುದತ್ತ' ಮತ್ತು ೧೯೭೭ ರಲ್ಲಿ 'ಜೀವನದ ಹೋರಾಟ' ಎನ್ನುವ ಆತ್ಮಕಥೆಗಳನ್ನು ಬರೆದರು. 'ನನ್ನ ಮಗ ಗುರುದತ್ತ' ಕೃತಿಯಲ್ಲಿ ವಾಸಂತಿಯವರು ಹಿಂದಿ ಚಿತ್ರರಂಗದಲ್ಲಿ ನಟನಾಗಿದ್ದ ತನ್ನ ಮಗನಾದ ಗುರುದತ್ತನ ಸಿನಿಮಾರಂಗದಲ್ಲಿನ ಸಾಧನೆಗಳನ್ನು ಹೇಳಿದ್ದಾರೆ. ಮಗನ ಸಾಧನೆಯನ್ನು ಜೊತೆಗೆ ತಾನು ಅವನಿಗೆ ಮಾಡಿದ ಸಹಾಯ ಒತ್ತಾಸೆಗಳನ್ನು ವಿವರಿಸಿದ್ದಾರೆ. ಅವರ ಇನ್ನೊಂದು ಆತ್ಮಕಥನ 'ಜೀವನದ ಹೋರಾಟ'. ಇದು ನೇರವಾಗಿ ಅವರ ಬದುಕಿನ ವಿವರಗಳನ್ನು ಕಟ್ಟಿಕೊಡುತ್ತದೆ. ಅವರು ಹೆಂಡತಿಯಾಗಿ, ತಾಯಿಯಾಗಿ ಅನುಭವಿಸಿದ ಸಂಗತಿಗಳನ್ನು ಈ ಕೃತಿ ಕಟ್ಟಿಕೊಡುತ್ತದೆ.

೨.೪ ಮಹಿಳಾ ಆತ್ಮಕಥೆಗಳನ್ನು ರಚಿಸಿದ ಪ್ರಮುಖರು

ಮಳವಳ್ಳಿ ಸುಂದರಮ್ಮ ಕನ್ನಡದ ಪ್ರಾರಂಭದ ಆತ್ಮಕಥೆಯೆನಿಸಿದ 'ಅಭಿನಯ ವಿಶಾರದೆ'(೧೯೭೫) ಎನ್ನುವ ಕೃತಿಯನ್ನು ಮಳವಳ್ಳಿ ಸುಂದರಮ್ಮ ರಚಿಸಿದ್ದಾರೆ. ಮಳವಳ್ಳಿ ಸುಂದರಮ್ಮ ನಾಟಕರಂಗದಲ್ಲಿ ಹೆಸರು ಮಾಡಿದವರು. ಕೆ.ನಾಗರತ್ನಮ್ಮನವರ ಆತ್ಮಕಥೆ 'ಮರಿಯಮ್ಮನಹಳ್ಳಿ ರಂಗಭೂಮಿ'(೧೯೯೯). ರಂಗಭೂಮಿಯನ್ನು ಪ್ರವೇಶಿಸಿ ಅಚ್ಚಳಿಯದಂತೆ ತಮ್ಮ ಹೆಜ್ಜೆಗುರುತನ್ನು ಮೂಡಿಸಿದವರಲ್ಲಿ ಕೆ.ನಾಗರತ್ನಮ್ಮ ಒಬ್ಬರು. ನಾಟಕಗಳಲ್ಲಿ ಪುರುಷರೇ ತುಂಬಿದಕಾಲದಲ್ಲಿ ಇವರು ರಂಗಭೂಮಿಯನ್ನು ಪ್ರವೇಶಿಸಿದರು. ಸಿನಿಮಾರಂಗಕ್ಕಿಂತ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುವುದು ಸುಲಭದ ಮಾತಲ್ಲ. ಕೆ.ನಾಗರತ್ನಮ್ಮನವರು ಕಠಿಣ ಪರಿಶ್ರಮದಿಂದ ಹೆಸರನ್ನು ಗಳಿಸಿದವರು. ಅವರ ತಮ್ಮ ಆತ್ಮಕಥೆಯಲ್ಲಿ ನಾಲ್ಕುದಶಕಗಳ ಕಾಲದ ರಂಗಭೂಮಿಯಲ್ಲಿದ್ದು ನೆನಪಿನಲ್ಲಿ ಉಳಿಯುವ ಸಾಧನೆಯನ್ನು ಮಾಡಿದ್ದಾರೆ. ಕನ್ನಡದ ಹೆಸರಾಂತ ಕಲಾವಿದೆ ಉಮಾಶ್ರೀಯವರ ಆತ್ಮಕಥನ 'ಬೆಂಕಿ ಬೆಡಗು'(೨೦೧೩). ಇದು ಸಮಾಜದ ಹಿಂದುಳಿದ ಸಮುದಾಯದಿಂದ ಬಂದು ರಂಗಭೂಮಿ ಮತ್ತು ಸಿನಿಮಾ ಇವೆರಡರಲ್ಲೂ ತನ್ನನ್ನು ತೊಡಗಿಸಿಕೊಂಡ, ಹೋರಾಟ ಮತ್ತು ಸಾಧನೆಗಳ ಮೂಲಕ ತನ್ನ ಬದುಕನ್ನು ಕಟ್ಟಿಕೊಂಡ ಉಮಾಶ್ರೀಯವರ ಅನುಭವ ಕಥನ. ಬಾಲ್ಯದಲ್ಲಿ ಹೆತ್ತವರನ್ನು ಕಳೆದುಕೊಂಡು ಅನ್ಯರ ನೆರಳಿನಲ್ಲಿ ಬವಣೆಯ ಬದುಕನ್ನು ನಡೆಸಿದರು. ಅಪ್ರಾಪ್ತ ವಯಸ್ಸಿನಲ್ಲಿ ಮದುವೆಯಾಗಿ ಗಂಡನ ಕಿರುಕುಳ ತಾಳಲಾರದೇ ಮಕ್ಕಳೊಂದಿಗೆ ತವರುಮನೆಗೆ ವಾಪಸಾದಾಗ ಸಮಾಜದ ನಿಂದನೆಗೆ ಹೆದರಿ ಸಾಕು ತಂದೆತಾಯಿಗಳು ಮನೆಯ ಪ್ರವೇಶವನ್ನು ನಿರಾಕರಿಸಿದರು. ಆಗ ತನ್ನಿಬ್ಬರ ಮಕ್ಕಳ ಹೊಟ್ಟೆಹೊರೆಯುವುದು ಮುಖ್ಯವಾದ

ಕಾರಣ ಅನಿವಾರ್ಯವಾಗಿ ರಂಗಭೂಮಿಯ ಪ್ರವೇಶ ಮಾಡಿದರು. ಖ್ಯಾತ ರಂಗಭೂಮಿಯ ಕಲಾವಿದೆ, ನಿರ್ದೇಶಕಿ ಪ್ರೇಮಾಕಾರಂತರ 'ಸೋಲಿಸಬೇಡ ಗೆಲಿಸಯ್ಯ'(೨೦೧೦) ಇದು ಅವರ ಉತ್ಕಟ ಜೀವನಪ್ರೀತಿಯ ಕೃತಿಯಾಗಿದೆ. ತಮ್ಮ ಪತಿ ರಂಗಭೂಮಿಯ ಜನಪ್ರಿಯ ರಂಗತಜ್ಞ ಬಿ.ವಿ.ಕಾರಂತರೊಂದಿಗಿನ ನೋವು ನಲಿವುಗಳನ್ನು, ರಂಗಭೂಮಿಯ ತಮ್ಮ ಚಟುವಟಿಕೆಯನ್ನು ಪ್ರೇಮಾ ಕಾರಂತರವರು ಸವಿವರವಾಗಿ ಈ ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ರಂಗಭೂಮಿ ಕಲಾವಿದೆ ಅನ್ನಪೂರ್ಣದೇವಿಸಾಗರ ಇವರ ಆತ್ಮಕಥೆ 'ನನ್ನ ಬದುಕಿನ ಪುಟಗಳಿಂದ'(೨೦೦೭),ಬಣ್ಣದ ಬದುಕನ್ನೇ ಹೊಟ್ಟೆಪಾಡಿಗಾಗಿ ನೆಚ್ಚಿಕೊಂಡಿದ್ದ ಹಲವಾರು ಕಲಾವಿದೆಯರಲ್ಲಿ ಅನ್ನಪೂರ್ಣ ಸಾಗರ ಕೂಡ ಒಬ್ಬರು. ಮುಖದಲ್ಲಿ ನಗುವನ್ನು, ಕಣ್ಣಿನಲ್ಲಿ ಹೊಳಪನ್ನು, ದೇಹದಲ್ಲಿ ಉತ್ಸಾಹವನ್ನು, ಚೈತನ್ಯವನ್ನು ತುಂಬಿಕೊಂಡು ತಮ್ಮ ಬದುಕಿನ ಎಲ್ಲಾ ಕಷ್ಟ, ನೋವುಗಳನ್ನು ತನ್ನಲ್ಲಿಯೇ ಉಳಿಸಿಕೊಂಡು ಕೇವಲ ಸಿಹಿಯನ್ನೇ ಹಂಚಿಕೊಂಡು ನಗುವುದು, ನಗಿಸುವುದು ಸಾಮಾನ್ಯ ಸಾಧನೆಯಲ್ಲ. ಅದರಲ್ಲಿ ಕಲಾವಿದೆಯರ ಕಲಾಯಾನದ ಬದುಕಿನಲ್ಲಿ ಅಡಿಯಿಡಲು ಸಿಗುವುದೇ ಕಲ್ಲು, ಮುಳ್ಳುಗಳಿಂದ ಕೂಡಿದ ಹಾದಿ. ಅನ್ನಪೂರ್ಣ ಸಾಗರರವರು ರಂಗಭೂಮಿಯಲ್ಲಿ ತಾವು ಸವೆಸಿದ ಹಾದಿಯನ್ನು ಆತ್ಮಕಥೆಯಲ್ಲಿ ಮೆಲುಕುಹಾಕಿದ್ದಾರೆ. ಬಿ.ಜಯಮ್ಮ ನವರು ರಂಗಭೂಮಿಯ ಹಿರಿಯ ಕಲಾವಿದೆ ಹಾಗು ಚಲನಚಿತ್ರದ ತ್ರಿಭಾಷಾತಾರೆ. ಇವರ ಪತಿ ನಾಟಕರತ್ನ ಖ್ಯಾತಿಯ ಗುಬ್ಬಿ ವೀರಣ್ಣ. ಬಿ.ಜಯಮ್ಮನವರು ತಮ್ಮ ಆತ್ಮಕಥೆ 'ಅಭಿನೇತ್ರಿ(೧೯೭೬)'ಯಲ್ಲಿ ಕಂಪೆನಿ ನಾಟಕಗಳ ಅವಧಿಯಲ್ಲಿ ಕಲಾವಿದೆಯರಿಗೆ ದೊರೆಯುತ್ತಿದ್ದ ಜನರ ಪ್ರೀತಿ ಆದರ, ಗೌರವ ಮತ್ತು ನಟನೆಗೆ ಸಿಗುತ್ತಿದ್ದ ಅವಕಾಶ ಮೊದಲಾದ ವಿವರಗಳಿವೆ.

ಮಾಲತಿಶ್ರೀ ಮೈಸೂರು ಇವರ ಆತ್ಮಕಥೆ 'ತೆರೆ ಸರಿಯಿತು'(೨೦೦೫)'. ಇವರು ಎಳವೆಯಲ್ಲಿ ತಂದೆತಾಯಿಯನ್ನು ಕಳೆದುಕೊಂಡು ಹನ್ನೆರಡನೆಯ ವಯಸ್ಸಿನಲ್ಲಿ ಕುಟುಂಬದ ಹೊಣೆಹೊತ್ತು ನಾಟಕರಂಗವನ್ನು ಸೇರಿದರು. ಆರಂಭದಲ್ಲಿ ಎದುರಾದ ಸಮಸ್ಯೆಗಳನ್ನು ಎದುರಿಸಿ ಮುನ್ನಡೆದರು. 'ನನ್ನ ಬದುಕಿನ ಹಾಡು'(೨೦೦೧)–ಇದು ಖ್ಯಾತ ಹಿಂದುಸ್ಥಾನಿ ಗಾಯಕಿ ಗಂಗೂಬಾಯಿ ಹಾನಗಲ್‌ರವರ ಆತ್ಮಕಥೆ. ಇದರ ನಿರೂಪಕರು ಎನ್ಕೆಯವರು. ಸಂಗೀತದಲ್ಲಿ ಉನ್ನತ ಸ್ಥಾನವನ್ನು ಗಳಿಸಿದ ಅಗ್ರಮಾನ್ಯ ಗಾನವಿದುಷಿ ಗಂಗೂಬಾಯಿ ಹಾನಗಲ್. ಸಂಗೀತಾಸಕ್ತಿಯ ಮನೆತನದಲ್ಲಿ ಜನಿಸಿ ಸತತ ಪರಿಶ್ರಮದಿಂದ ಸಂಗೀತ ಸಾಧನೆ ಮಾಡಿ ಸಹಸ್ರಾರು ಸಂಗೀತಪ್ರಿಯರಿಗೆ ರಸದೌತಣ ನೀಡಿದ ಕರ್ನಾಟಕ ಕಂಡ ಅಪ್ರತಿಮ ಕಲಾ ಸಾಧಕಿ. ವಾಸಂತಿಬಾಯಿ ಪಡುಕೋಣೆಯವರು ಆತ್ಮಕಥೆಯನ್ನು ಬರೆದ ಹಿರಿಯ ಲೇಖಕಿಯರಲ್ಲಿ ಒಬ್ಬರು. ಇವರು ೧೯೭೬ರಲ್ಲಿ 'ನನ್ನ ಮಗ ಗುರುದತ್ತ' ಮತ್ತು ೧೯೭೭ರಲ್ಲಿ 'ಜೀವನದ ಹೋರಾಟ'ವೆನ್ನುವ ಆತ್ಮಕಥೆಗಳೆರಡನ್ನು ಬರೆದಿದ್ದಾರೆ. ಒಲವೇ ನಮ್ಮ ಬದುಕು'(೧೯೭೭) ಶಾರದಾ ಗೋಕಾಕರ ಆತ್ಮಕಥೆ. ಮರಾಠಿಯಲ್ಲಿ ಪ್ರಕಟವಾಗಿದ್ದ ಲಕ್ಷ್ಮೀಬಾಯಿ ಟಿಳಕರ 'ಸ್ಮೃತಿಚಿತ್ರೆ' ಕೃತಿಯಿಂದ ಪ್ರೇರಿತರಾಗಿ ತಾನು ತನ್ನ ಆತ್ಮಕಥೆಯನ್ನು ಬರೆದಿರುವುದಾಗಿ ಹೇಳಿಕೊಂಡಿದ್ದಾರೆ. ಶಾರದ ಹೆಮ್ಮಿಗೆಯವರು ಆತ್ಮಕಥೆ 'ಬದುಕು ಕೊಟ್ಟಿದ್ದು, ಕಲಿಸಿದ್ದು'. ಶಾರದಾ ಹೆಮ್ಮಿಗೆ ಮಧ್ಯಮವರ್ಗದ ಒಬ್ಬ ಸಾಮಾನ್ಯ ಗೃಹಿಣಿ. ಡಾ.ಕಮಲಾ ಹೆಮ್ಮಿಗೆಯವರ ತಾಯಿ. ಶಾರದಾ ಹೆಮ್ಮಿಗೆಯವರು ವಿಶಾಲಮನಸ್ಸಿನ, ಸೂಕ್ಷ್ಮಬುದ್ಧಿಯ ಲೇಖಕಿ. ಇವರ ಆತ್ಮಕಥೆಯಲ್ಲಿ ಕಾಣುವ ಇವರ ತಲ್ಲಣ ಕೇವಲ ಆಕೆಯದೇ ಆಗಿರದೇ ಒಂದು ತಲೆಮಾರಿನ ತಳಮಳವಾಗಿ, ಮಧ್ಯಮ ವರ್ಗದ ಬದುಕಿನ ವಾಸ್ತವದ ದಾಖಲೆಯಾಗಿ ಈ ಕೃತಿಗೆ ಚಾರಿತ್ರಿಕ ಮಹತ್ವವಿದೆ. ಅನುಪಮಾನಿರಂಜನ ಕನ್ನಡ

ಸಾಹಿತ್ಯದಲ್ಲಿ ಅಗ್ರಪಂಕ್ತಿಯ ಲೇಖಕಿ. ಇವರ ಆತ್ಮಕಥೆಗಳು ಕೃತಿಗಳು 'ನೆನಪು–ಸಿಹಿಕಹಿ'(೧೯೮೫) ಮತ್ತು 'ಬರಹಗಾರ್ತಿಯ ಬದುಕು'(೧೯೯೦). ಚಿ.ನ.ಮಂಗಳ ಅವರು ಕನ್ನಡ ಸಾಹಿತ್ಯದ ಹೆಸರಾಂತ ಲೇಖಕಿ ಮತ್ತು ಶಿಕ್ಷಣ ತಜ್ಞೆ. ಬೆಂಗಳೂರಿನ ಎನ್.ಎಂ.ಕೆ.ಆರ್.ವಿ ಕಾಲೇಜಿನ ಪ್ರಾರಂಭಿಕ ಪ್ರಾಂಶುಪಾಲೆಯಾಗಿ ಸೇವೆ ಸಲ್ಲಿಸಿದವರು. ಇವರು 'ಅಧ್ಯಾಪಕಿಯಾಗಿ ಇಪ್ಪತ್ತೈದುವರ್ಷ', 'ಪ್ರಾಂಶುಪಾಲೆಯಾಗಿ ಇಪ್ಪತ್ತುವರ್ಷ' ಮತ್ತು 'ಸ್ನೇಹಸಿಂಧು'–ಎನ್ನುವ ಮೂರು ಆತ್ಮಕತೆಗಳನ್ನು ಬರೆದಿದ್ದಾರೆ.

೨.೫ ಆತ್ಮಕಥೆಯ ರಚನೆಯ ಕುರಿತು ಮಹಿಳೆಯರ ನಿಲುವುಗಳು

ಸಾಹಿತ್ಯ ಪ್ರಕಾರದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದ ಆತ್ಮಕಥೆಗಳು ಕೃತಿಕಾರರ ಸ್ವ–ಅನುಭವಗಳ ಅಭಿವ್ಯಕ್ತಿಯಾಗಿ ರೂಪುಗೊಂಡವುಗಳು. ಅಂಥಹ ಆತ್ಮಕಥೆಯ ಕುರಿತಾಗಿ ಹಲವು ಲೇಖಕಿಯರು ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಆತ್ಮಕಥೆಯ ರಚನೆ ಕುರಿತಂತೆ ಸುಸನ್ ಸ್ಟನ್‌ಫೋರ್ಡ್ ಫ್ರೀಡ್‌ಮನ್ (Susan Stanford friedman) ಎನ್ನುವ ಚಿಂತಕಿ "Autobiography is possible when the individual does not feel herself to exist outside of others, and still less against others, but very much with others in an interdependent existence that assarts it rhythms everywhere in the community" (Ammulu Kutty, 2007, p. 53) ಎನ್ನುವಳು.

ಆತ್ಮಕತೆಯ ಬರವಣಿಗೆ ಬಗ್ಗೆ ಭಾರತೀಯ ಲೇಖಕಿಯಾದ ಮೀನಾ ಸೋಧಿ (Meena sodhi) "Autobiography or the narrative of the self or the voyage of inner discovery indulges in self – glorification'(Ammulu Kutty, 2007, p.49) ಎನ್ನುವರು. ಆತ್ಮಕಥಾ ಬರವಣಿಗೆ ಅಥವಾ ಆತ್ಮಕಥೆಯೆಂದಾಗ ತನ್ನ ಬದುಕಿನ ಕುರಿತಾಗಿ ತಾನೇ ನಿರೂಪಣೆ ಮಾಡಿಕೊಳ್ಳುವುದು, ತನ್ನ ಜೀವನಯಾನದಲ್ಲಿನ ತನ್ನ ಒಳಗನ್ನು ತೆರೆದಿಡುವ ಒಂದು ಕ್ರಿಯೆ.

ವಸುಮತಿ ಉಡುಪ ಅವರು ಆತ್ಮಕಥೆಯನ್ನು ಕುರಿತು "ಬರೆಯುವ ಮನಸ್ಸು ಮಾಡಿದಲ್ಲಿ ಆತ್ಮಕಥೆಯನ್ನು ಬರೆಯುವುದು ಅಸಾಧ್ಯದ ಸಂಗತಿಯಲ್ಲ. ಬರವಣಿಗೆ ಕೂಡ ಒಂದು ಪಾಕ. ಒಂದು ಹದ ಉಪ್ಪು ಹುಳಿ ಖಾರ ಸಿಹಿಗಳನ್ನು ಮನೆಯವರ ನಾಲಿಗೆ ರುಚಿಗೆ ತಕ್ಕಂತೆ ಬಳಸಿ ಅಡುಗೆ ಮಾಡುವುದರಲ್ಲಿ ಮನೆಯಲ್ಲಿ ಮನೆಯ ಗೃಹಿಣಿ ನುರಿತಿರುವಂತೆ ಜನರ ನಾಡಿಮಿಡಿತ ಅರಿತ ಲೇಖಕಿಗತಿಯಲ್ಲ. ಬರವಣಿಗೆ ಕೂಡ ಒಂದು ಪಾಕ. ಒಂದು ಹದ ಉಪ್ಪು ಹುಳಿ ಖಾರ ಸಿಹಿಗಳನ್ನು ಮನೆಯವರ ನಾಲಿಗೆ ರುಚಿಗೆ ತಕ್ಕಂತೆ ಬಳಸಿ ಅಡುಗೆ ಮಾಡುವುದರಲ್ಲಿ ಮನೆಯಲ್ಲಿ ಮನೆಯ ಗೃಹಿಣಿ ನುರಿತಿರುವಂತೆ ಜನರ ನಾಡಿಮಿಡಿತ ಅರಿತ ಲೇಖಕಿಯೊಬ್ಬಳು ಬರವಣಿಗೆಯ ಹಿಡಿತ ಸಿಕ್ಕಿರುತ್ತದೆ." (ಸಬಿಹಾ ಭೂಮಿ ಗೌಡ, ೨೦೦೭, ಪು. ೨೩) ಮಹಿಳೆಯರಿಂದ ಸಾಹಿತ್ಯ, ಅದರಲ್ಲೂ ಆತ್ಮಕಥೆ ರಚಿಸಲು ಬರುವುದಿಲ್ಲ, ಅದು ಏನಿದ್ದರೂ ಪುರುಷರಿಗೆ ಮಾತ್ರ ಎಂಬ ಮಾತನ್ನು ಅಲ್ಲಗೆಳೆಯುತ್ತಾರೆ. ವೈದೇಹಿಯವರು "ಆತ್ಮಕಥನದ ಬರವಣಿಗೆ ಅಂದರೇನೆ ಬಯಲಾಗುವುದು, ಬಯಲಾಗಿ ಬಯಲಲ್ಲಿ ನಿಲ್ಲುವ ಕ್ರಿಯೆ,ಪರಿಶೀಲನೆ,ನಿವೇದನ, ಸ್ವಗತ,ಆತ್ಮಾವಲೋಕನ, ವಿಮರ್ಶನ, ನೆನಪು, ಅನುಭವಗಳ ಹೋರಾಟಗಳ ಕಥನ–ಈ ಎಲ್ಲವನ್ನೂ ಒಳಗೊಂಡು, ಬದುಕಿನ ಶೋಧನೆಯತ್ತ ತಂತಾನೇ

ಸಾಗುವ....."(ಸಬಿಹಾ ಭೂಮಿ ಗೌಡ, ೨೦೦೭, ಪು. ೪೧) ಒಂದು ಪ್ರಯತ್ನವೆನ್ನುವರು. ದು.ಸರಸ್ವತಿಯವರು ಆತ್ಮಕಥೆ ಎಂಬುದು 'ಆತ್ಮವು ಬದುಕಿನ ನೆನಪುಗಳೊಂದಿಗೆ ನಡೆಸುವ ಸಂವಾದ. ಒಂದು ರೀತಿಯಲ್ಲಿ ನಮ್ಮ ನೆನಪುಗಳೊಂದಿಗೆ ನಾವೇ ನಡೆಸುವ ಮರುಪ್ರಯಾಣ, ಆ ಪಯಣದಲ್ಲಿ ಯಾವ ವೇಷಗಳೂ ಇಲ್ಲದೇ ಎಷ್ಟು ಸಹಜವಾಗಿ ಪ್ರಾಮಾಣಿಕವಾಗಿರುತ್ತೇವೋ ಅಷ್ಟೇ ಪ್ರಾಮಾಣಿಕ ಅಭಿವ್ಯಕ್ತಿಯನ್ನು ಆತ್ಮಕಥೆ ಪಡೆದುಕೊಳ್ಳುತ್ತದೆ' (ಸಬಿಹಾ ಭೂಮಿ ಗೌಡ, ೨೦೦೭, ಪು. ೩೫) ಎನ್ನುವರು.

೨.೬ ಮಹಿಳಾ ಆತ್ಮಕಥೆಯ ರಚನೆಯ ಪ್ರೇರಣೆಗಳು

ಅನುಪಮಾ ನಿರಂಜನರು ತಮ್ಮ ಆತ್ಮಕಥೆಯ ರಚನೆಗೆ ಒದಗಿದ ಪ್ರೇರಣೆಯನ್ನು ಹೀಗೆ ಹೇಳುತ್ತಾರೆ. "೧೯೮೨ರಲ್ಲಿ ೨ನೇ ಬಾರಿಗೆ ಕಾನ್ಸರ್‌ಗೆಂದು ನನಗೆ ಶಸ್ತ್ರಕ್ರಿಯೆಯಾದಾಗ ನೋವು, ದುಗುಡಗಳಿಂದ ನಾನು ಬಸವಳಿದಿದ್ದೆ. ಹೆಚ್ಚುದಿನ ಬದುಕುವುದಿಲ್ಲಎಂಬ ಗ್ರಹಿಕೆಯಿತ್ತು. ಜೀವನದುದ್ದಕ್ಕೂ ಹೆಜ್ಜೆಹೆಜ್ಜೆಗೂ ಹೋರಾಟವೇ ನನಗೆದುರಾಗಿತ್ತು. ವೈದ್ಯೆಯಾ, ಸಾಹಿತಿಯಾಗಿ, ಪತ್ನಿಯಾಗಿ, ಮಾತೆಯಾಗಿ ನಾನು ಉಂಡ ಸಿಹಿಕಹಿಗಳನ್ನು ನಾಲ್ಕು ಜನದ ಜೊತೆ ಹಂಚಿಕೊಂಡರೆ ನನ್ನ ಉಳಿದ ಬಾಳು ಸಹ್ಯವಾಗಬಹುದೇನೋ ಎಂದು ತೋರಿತು. ಹಾಗೆ ಬರೆಯ ತೊಡಗಿದ್ದು ನೆನಪು:ಸಿಹಿ-ಕಹಿ." (ಅನುಪಮಾ ನಿರಂಜನ, ೧೯೮೫, ಮೊದಲ ಮಾತು) ಅನುಪಮಾ ನಿರಂಜನರಿಗೆ ತಮಗೆ ಒದಗಬಹುದಾದ ಸಾವಿನ ಬಗ್ಗೆ ಭಯವಿತ್ತು. ಸಾವಿನ ಭಯದಿಂದ ತನ್ನನ್ನು ತಾನು ಸಮಾಧಾನ, ಸಾಂತ್ವನ ಮಾಡಿಕೊಳ್ಳಲು ಅನಿವಾರ್ಯವಾಗಿ ಬರವಣಿಗೆಯನ್ನು ಆಯ್ಕೆಮಾಡಿಕೊಂಡರು. ತಮ್ಮ ಬದುಕಿನಲ್ಲಿ ನಡೆದ ಸಂಗತಿಗಳನ್ನು ದಾಖಲಿಸಿ ಜನರ ಜೊತೆ ಹಂಚಿಕೊಳ್ಳಬೇಕೆಂಬ ಅಭೀಷ್ಟೆಯೇ ಆತ್ಮಕಥೆಯ ರಚನೆಗೆ ಎನ್ನಬಹುದು.

ಶೈಲಜಾ ನಾಗರಘಟ್ಟ ಅವರು ತಮಗೆ ಆತ್ಮಕಥೆ ಬರೆಯಲು ಪ್ರೇರಣೆ ನೀಡಿದ ಸಂದರ್ಭವನ್ನು ವಿವರಿಸುವರು. 'ಬರಹ ನನ್ನ ಅನಾಥತೆಯ ಸಂದರ್ಭದಲ್ಲಿ ಜೊತೆಯಾದುದ್ದು, ಹತ್ತಾರು ಜನರಿಂದ ತುಂಬಿದ ಮನೆಯಲ್ಲಿ ನಾನು ಬಾಲ್ಯವನ್ನು ಕಳೆದೆ. ಆದರೆ ಅಲ್ಲಿಯೂ ಒಂಟಿತನ ಬಾಧಿಸುತ್ತಿತ್ತು. ಆಗ ದಿನಚರಿಯಲ್ಲಿ ನನ್ನ ನೋವುಗಳನ್ನು ದಾಖಲಿಸುತ್ತ ಹಗುರಾಗುತ್ತಿದ್ದೆ' (ಶೈಲಜಾ ನಾಗರಘಟ್ಟ, ೨೦೦೫, ಪು. ೨) ಎನ್ನುವರು.

ಕುಟುಂಬದದ ವಿರೋಧವನ್ನು ಮೀರಿ ತನಗೆ ಯೋಗ್ಯನೆಂದು ಕಾಣಿಸಿದ ಗಂಡನ್ನು, ಅದರಲ್ಲೂ ಅಂತರ್ಜಾತಿಯ ಹುಡುಗನನ್ನು ವಿವಾಹವಾದರು. ಮನೆಯಿಂದ ಹೊರಬಂದಾಗ ಮನಸ್ಸು ನೋವಿನಿಂದ ಭಾರವಾಗಿತ್ತು. ಅಲ್ಲದೇ ತನ್ನ ನೋವು ನುರಿ, ಸಿಹಿಕಹಿಯಾದ ಭಾವನೆಗಳನ್ನು ಹೇಳಿಕೊಳ್ಳಲು ಯಾರೂ ಇರದಿದ್ದಾಗ ಅವರಿಗೆ ಬರವಣಿಗೆ ಆಪ್ತವೆಸಿತು. ತನ್ನ ಮನಸ್ಸಿನ ಭಾವನೆಗಳನ್ನು ಬರೆದಿಡುವುದರ ಮೂಲಕ ಏಕಾಕಿತನದಿಂದ ಹೊರಬರಲು ಈ ಬರವಣಿಗೆ ಅವರಿಗೆ ಸಹಾಯ ಮಾಡಿತು ಎನ್ನಬಹುದು. ಇದು ಕೂಡ ಬರವಣಿಗೆಗೆ ಪ್ರೇರಕವಾದ ಅಂಶವೆಂದು ತಿಳಿಯಬಹುದು. ಕೆಲವೊಮ್ಮೆ ಪ್ರೇರಣೆಗಳು ಹೊರಗಿನಿಂದಲ್ಲಲೇ ನಮ್ಮ ಒಳಗಿನಿಂದಲೇ ಕೂಡ ಹುಟ್ಟುತ್ತದೆ ಎನ್ನುವುದಕ್ಕೆ ಶೈಲಜಾರವರ ಮಾತೇ ಸಾಕ್ಷಿ.

ವೀಣಾಧರಿಯವರು ತಮ್ಮ ಆತ್ಮಕಥೆಯಲ್ಲಿ "ನನ್ನ ಬದುಕು ಜೀವನ ಶೈಲಿ, ಆಹಾರ ಕ್ರಮ, ಚಿಕಿತ್ಸಾಕ್ರಮ, ಹೆಚ್.ಐ.ವಿ ಮಾತ್ರವಲ್ಲದೇ ಬೇರೆ ಬೇರೆ ಕಾಯಿಲೆಗಳಿಂದ ಬಳಲುವವರಿಗೆ ಹೊಸ ಜೀವನ ನೀಡಿತು ಎಂಬ

ಆಶಯದೊಂದಿಗೆ ನಾನು ಬರೆದೆನು'' (ವೀಣಾಧರಿ, 2005, ಪು. ನನ್ನ ಮಾತು)ಅನ್ನುವರು. ಕಾಯಿಲೆ ಬಂದಾಗ ಜನಸಾಮಾನ್ಯರಿಗೆ ಮರಣದ ಭಯ ಕಾಡುವುದು ಸಹಜ. ಅದರಲ್ಲೂ ಏಡ್ಸ್ ಬಂದಾಗಂತೂ ಇನ್ನೂ ತಮಗೆ ಬದುಕುವ ಅವಕಾಶವೇ ಇಲ್ಲವೆಂದು ಜೀವನದಲ್ಲಿ ಸಾರತೆಯನ್ನು ಕಳೆದುಕೊಂಡು ಮೌನಿಯಾಗಲು ಬಯಸುತ್ತಾರೆ. ವೀಣಾಧರಿಯವರು ಅದಕ್ಕೆ ತದ್ವಿರುದ್ಧ. ಅವರು ಗುರುತಿಸಿಕೊಂಡಿದ್ದು ತಮಗೆ ಹೆಚ್.ಐ.ವಿ ತಗಲಿದ ನಂತರವೇ. ಅವರ ಮೇಲಿನ ಹೇಳಿಕೆ ಅವರ ಮನೋಸ್ಥೈರ್ಯವನ್ನು ಬಿಂಬಿಸುತ್ತದೆ. ತಾನು ಸಾವನ್ನು ಗೆದ್ದು ತನ್ನಂತೆ ಸಾವನ್ನು ಇದಿರು ನೋಡುತ್ತಿರುವವರಿಗೆ, ಮುಂದೆ ಇನ್ನು ಬದುಕಿದೆ ಎಂದು ಶಕ್ತಿ ತುಂಬಲು ಆತ್ಮಕಥೆ ಬರೆದಿದ್ದು ಕೂಡ ಅವರ ಅಂತರಾತ್ಮದ ಪ್ರೇರಣೆ ಎನ್ನಬಹುದು.

ಮೇಲಿನ ಎಲ್ಲಾ ಅಂಶವನ್ನು ಗಮನಿಸಿದಾದ ಯಾವೆಲ್ಲ ಅಂಶಗಳು ಲೇಖಕಿಯರಿಗೆ ಆತ್ಮಕಥೆ ರಚಿಸಲು ಪ್ರೇರಣೆ ಒದಗಿಸಿತು ಎನ್ನುವುದು ಸ್ಪಷ್ಟವಾಗುತ್ತದೆ. ಆತ್ಮಕಥೆಯನ್ನು ರಚಿಸಲು ಅಂತರಿಕ ಮತ್ತು ಬಾಹ್ಯ ಅಂಶಗಳು ಪ್ರೇರಣೆಯನ್ನು ಒದಗಿಸುತ್ತವೆ. ಅಂತರಿಕ ಅಂಶವೆಂದಾದ ಕೃತಿಕಾರರ ಸ್ವಯಂಸ್ಫೂರ್ತಿಯಿಂದ ತನ್ನ ಒಳಗಿನ ಸಿಹಿಕಹಿಯನ್ನು ಹೊರಹಾಕಿ ತನ್ಮೂಲಕ ಮನಸ್ಸಿನ ತಳಮಳದಿಂದ ಶಾಂತಿ ಬಯಸುವ ಕಾರಣಕ್ಕಾಗಿ, ಮತ್ತು ತನ್ನ ಸಾಧನೆ, ಬದುಕು ಇತರರಿಗೆ ಸ್ವಲ್ಪ ಪ್ರಮಾಣದ ದಾರಿದೀಪ ಆಗುವುದಾದರೆ ಆಗಲಿ ಎನ್ನುವ ಕಾರಣಕ್ಕಾಗಿ ಆತ್ಮಕಥೆಯನ್ನು ಬರೆಯುತ್ತಾರೆ. ಬಾಹ್ಯ ಅಂಶವೆಂದಾಗ ಯಾರಾದರು ನಿಮ್ಮ ಜೀವನದ ಕುರಿತು ಬರೆಯಿರಿ ಎನ್ನುವ ಇನ್ನೊಬ್ಬರ ಒತ್ತಾಯವನ್ನು ಗೌರವಿಸಿ ಬರೆಯಬೇಕಾಗುತ್ತದೆ. ಅಲ್ಲದೇ ಬೇರೊಂದು ಆತ್ಮಕಥೆ ಇನ್ನೊಂದು ಆತ್ಮಕತೆಯ ರಚನೆ ಕೂಡ ಪ್ರೇರಣೆಯನ್ನು ನೀಡುತ್ತದೆ ಅನ್ನುವುದನ್ನು ಗಮನಿಸಬಹುದು. ಒಟ್ಟಾರೆಯಾಗಿ ಆತ್ಮರಚನೆಯ ಪ್ರೇರಣೆಯಾಗಿ ತಮ್ಮ ಮನಸ್ಸಿನ ತುಮುಲಗಳನ್ನು ಕಳೆದುಕೊಂಡು ಶಾಂತವಾಗಿಸಿಕೊಳ್ಳುವ, ಮನಸ್ಸನ್ನು ಸಂತೋಷಗೊಳಿಸಿಕೊಳ್ಳುವ ಅಂತರಿಕ ಒತ್ತಾಯಗಳೇ ಆತ್ಮಕಥೆಯ ರಚನೆಗೆ ಪ್ರೇರಣೆಯಾದರೆ ಹಾಗೇ ಬಾಹ್ಯ ಕಾರಣವಾದ ಸ್ನೇಹಿತರ, ಸಹವರ್ತಿಗಳ, ಕುಟುಂಬದ ಸದಸ್ಯರ ಒತ್ತಾಯ ಕೂಡ ಆತ್ಮಕಥಾ ರಚನೆಯ ಪ್ರೇರಣೆಯಾಗಿರುತ್ತದೆ.

ಅಧ್ಯಾಯ-೩ ಅನುವಾದಿತ ಮಹಿಳಾ ಆತ್ಮಕಥೆಗಳ ಹುಟ್ಟು ಮತ್ತು ಬೆಳವಣಿಗೆ

೩.೧. ಕನ್ನಡಕ್ಕೆ ಅನುವಾದಗೊಂಡ ಮಹಿಳಾ ಆತ್ಮಕಥೆಗಳ ಆರಂಭಕಾಲ

ಆಧುನಿಕ ಸಾಹಿತ್ಯ ರೂಪಗಳು ಎನ್ನಬಹುದಾದ ಕಥೆ, ಕಾದಂಬರಿ, ಕವನ, ಪ್ರಬಂಧ, ವಿಮರ್ಶೆ ಮೊದಲಾದವುಗಳು ಪಾಶ್ಚಾತ್ಯ ಪ್ರೇರಣೆಯಿಂದ ನಮ್ಮ ನಾಡಿನಲ್ಲಿ ಹುಟ್ಟಿದಂತೆ ಆತ್ಮಚರಿತ್ರೆಯು ನಮ್ಮಲ್ಲಿ ಜನ್ಮತಾಳಿತು. ಭಾರತದಲ್ಲಿ ಆಂಗ್ಲಶಿಕ್ಷಣ ವ್ಯಕ್ತಿವಿಶಿಷ್ಟತೆ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಉದ್ದೀಪಿಸುವ ಕೆಲಸಮಾಡಿತು. ಇದರಿಂದ ಮೂರ್ತಗೊಂಡು ರಚನೆಯಾದ ಮಹಿಳಾ ಆತ್ಮಕಥೆಗಳಲ್ಲಿ ಭಾರತದ ಪ್ರಥಮ ಪ್ರಧಾನಿ ಜವಾಹರ್ ಲಾಲ್ ಅವರ ಸಹೋದರಿ ಕೃಷ್ಣಹತೀಸಿಂಗ್‌ರವರು ೧೯೪೩ರಲ್ಲಿ ಬರೆದ 'With no regrates: An autobiography' ಒಂದು. ಇದನ್ನು ೧೯೪೭ರಲ್ಲಿ ನಾಡಿನ ಹೆಸರಾಂತ ಲೇಖಕರಾದ ದೇಜಗೌ ಅವರು ಕನ್ನಡಕ್ಕೆ **'ನೆನಪು ಕಹಿಯಲ್ಲ'** ಎಂದು ಅನುವಾದಿಸಿದ್ದು, ಇದು ಕನ್ನಡಕ್ಕೆ ಬೇರೆ ಭಾಷೆಯೊಂದರಿಂದ ಅನುವಾದವಾದ ಮೊದಲ ಮಹಿಳಾ ಆತ್ಮಕಥೆಯೆನ್ನಬಹುದು. 'ನೆನಪು

ಕಹಿಯಲ್ಲ' ಕನ್ನಡಕ್ಕೆ ಅನುವಾದಗೊಂಡ ಸುಮಾರು ನಾಲ್ಕು ದಶಕಗಳ ನಂತರ, ಅಂದರೆ ೧೯೭೨ರಲ್ಲಿ ಮರಾಠಿ ಭಾಷೆಯಲ್ಲಿ ಛಾಯಾ ದಾತರ ಬರೆದ **'ಸ್ತ್ರಿ ಉವಚ್'** ಎನ್ನುವ ಆತ್ಮಕತೆಯನ್ನು ೧೯೯೨ರಲ್ಲಿ ಕನ್ನಡಕ್ಕೆ 'ಸ್ತ್ರೀಪುರುಷ' ಎಂಬ ಹೆಸರಿನಲ್ಲಿ ಸರಸ್ವತಿ ರಿಸಬುಡ ಅವರು ಅನುವಾದಿಸಿದರು. ಇದು ಕನ್ನಡಕ್ಕೆ ಅನುವಾದಗೊಂಡ ಎರಡನೆಯ ಮಹಿಳಾ ಆತ್ಮಕತೆಯೆನ್ನಬಹುದು. ಛಾಯಾದಾತರ್ ಅವರು ಸಮಾಜ ಸೇವೆಯ ಮೂಲಕ ಮಹಾರಾಷ್ಟ್ರದಲ್ಲಿ ಜನಜನಿತರಾದವರು.

೧೯೯೦ರಲ್ಲಿ ಮರಾಠಿಯಲ್ಲಿ ರಚನೆಯಾದ ಶಾಂತಾ ಹುಬಳೀಕರ್ ಅವರ ಆತ್ಮಕತೆ **'ಕಶಾಲಾ ಉದ್ಯಾಚಿ ಬಾತ',** ಇದರ ನಿರೂಪಕರು ಡಿ.ಡಿ.ಕುಲಕರ್ಣಿ. ಇದನ್ನು ೧೯೯೫ರಲ್ಲಿ 'ನಾಳೀನ ಚಿಂತ್ಯಾಕ' ಎಂಬ ಹೆಸರಿನಿಂದ ಕನ್ನಡಕ್ಕೆ ಕೆ.ಎಸ್.ಕುಲಕರ್ಣಿಯವರು ಅನುವಾದಿಸಿದ್ದಾರೆ. ಹೀಗೆ ಕನ್ನಡಕ್ಕೆ ಅನುವಾದಗೊಂಡ ಆತ್ಮಕಥೆಯನ್ನು ಗಮನಿಸಿದಾಗ ೧೯೪೭ರ **'ನೆನಪು ಕಹಿಯಲ್ಲ'**ದಿಂದ ಹಿಡಿದು ಇಲ್ಲಿಯವರೆಗೆ ಸರಿಸುಮಾರು ೨೫ಕ್ಕೂ ಅಧಿಕ ಮಹಿಳಾ ಆತ್ಮಕಥೆಗಳು ಕನ್ನಡಕ್ಕೆ ಬಂದು ಹೊಸ ಚಿಂತನೆ, ಅರಿವನ್ನು ಓದುಗರಲ್ಲಿ ಉಂಟುಮಾಡಿವೆ.

೩.೨. ಬಂಗಾಳಿ ಮೂಲದ ಮಹಿಳಾ ಆತ್ಮಕಥೆಗಳು

ಬಂಗಾಳಿ ಭಾಷೆಯಲ್ಲಿ ರಸ್ಸುಂದರಿದೇವಿಯವರಿಂದ ೧೮೭೬ರಲ್ಲಿ ರಚನೆಯಾದ **'ಅಮಾರ್ ಜೀಬನ್'**(Amar jIban) ಎನ್ನುವ ಆತ್ಮಕತೆಯು ರಚನೆಯಾಯಿತು. ಇದು ಬಂಗಾಳಿ ಭಾಷೆಯಲ್ಲಿ ಮಾತ್ರವಲ್ಲದೇ ಭಾರತೀಯ ಭಾಷೆಗಳಲ್ಲೇ ಮಹಿಳೆಯೋರ್ವಳಿಂದ ರಚನೆಯಾದ ಮೊದಲ ಆತ್ಮಕಥೆಯೆಂಬ ಮನ್ನಣೆಗೆ ಪಾತ್ರವಾಗಿದೆ. ಸುಶ್ಮಿತಾಬಂದೋಪಾಧ್ಯಾಯ ಅವರು ೧೯೯೫ರಲ್ಲಿ ಬರೆದಆತ್ಮಕಥೆ **'ಕಾಬೂಲಿವಾಲರ್ ಬಂಗಾಳಿ ಬೊವ್'**(Kabuliwalar Bangali Bou). ೨೦೦೩ರಲ್ಲಿ **'ಕಾಬೂಲಿವಾಲನ ಬಂಗಾಳಿ ಹೆಂಡತಿ'** ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದಗೊಂಡ ಮೊದಲ ಬಂಗಾಳಿ ಭಾಷೆಯ ಮಹಿಳಾ ಆತ್ಮಕಥೆಯಾಗಿದೆ. ಬೇಬಿ ಹಾಲ್ದಾರ್ ಅವರ ೨೦೦೨ರಲ್ಲಿ ರಚನೆಯಾದ ಆತ್ಮಕಥೆ **'ಆಲೋ ಆಂಧಾರಿ'**(Aalo Aandhari). ಇದು ೨೦೦೪ರಲ್ಲಿ ಕನ್ನಡಕ್ಕೆ **'ನೋವು ತುಂಬಿದ ಬದುಕು'** ಎಂಬ ಹೆಸರಿನಿಂದ ಅನುವಾದವಾಗಿದೆ.

೩.೩. ಪಂಜಾಬಿ ಮೂಲದ ಮಹಿಳಾ ಆತ್ಮಕಥೆಗಳು

ಪಂಜಾಬಿ ಭಾಷೆಯಲ್ಲಿ ಆತ್ಮಕಥೆಯನ್ನು ಬರೆದ ಮಹಿಳೆಯರಲ್ಲಿ **ಅಮೃತಾ ಪ್ರೀತಂ** ಒಬ್ಬರು. ೧೯೭೬ರಲ್ಲಿ **'ರಸೀದಿ ತಿಕೇಟು'**ರಲ್ಲಿ ಬರೆದ ಇವರು, ಪುರುಷ ಅಹಂಕಾರಕ್ಕೆ ಸವಾಲಾಗಿ ಈ ಆತ್ಮಕತೆಯನ್ನು ತಾವು ರಚಿಸಿರುವುದಾಗಿ ಹೇಳಿಕೊಂಡಿದ್ದಾರೆ. ೧೯೯೮ರಲ್ಲಿ **ಅಜಿತ ಕೌರ್** ಅವರು **'ಖಾನಾಬದೋಷ'**ಎನ್ನುವ ಆತ್ಮಕಥೆ ಬರೆದಿದ್ದು ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರವು ದೊರೆತಿದೆ. ಇವರು ಮಹಿಳೆಯೆಂಬ ಕಾರಣಕ್ಕೆ ತಾವು ಪಟ್ಟ ನೋವು, ಯಾತನೆ, ಕಷ್ಟ, ಅವಮಾನಗಳನ್ನು ಕೃತಿಯಲ್ಲಿ ದಾಖಲಿಸಿದ್ದಾರೆ.

೩.೪. ತಮಿಳು ಮೂಲದ ಮಹಿಳಾ ಆತ್ಮಕಥೆಗಳು

ತಮಿಳಿನಲ್ಲಿ ರಚನೆಯಾದ ಮೊದಲ ಆತ್ಮಕಥೆಯಾಗಿ ೧೯೩೬ರಲ್ಲಿ ರಚನೆಯಾದ **ಮುವಲೂರ್ ರಾಮಾಮೃತ ಅಮ್ಮಾಳ್** ಅವರ **'ದಾಸಿಗಳಿನ್ ಮೋಸ ವಲೈ'(ದಾಸಿಗಳ ಮೋಸದ ಬಲೆ)** ಕೃತಿಯನ್ನು ಗಮನಿಸಬಹುದು. ೨೦೦೫ರಲ್ಲಿ

ರಚನೆಯಾದ **ಪೂರಣಿ** ಅವರ ಆತ್ಮಕಥೆ **'ಪೂರಣಿಯಿನ್ ನಿನೈವಲೈಗಳ್'** ಮಹತ್ವದ ಕೃತಿ. ತಮ್ಮ ೭೮–೭೯ವಯಸ್ಸಿನಲ್ಲಿ ಅಂದರೆ ೧೯೯೨ರಲ್ಲಿ ಇವರು ಆತ್ಮಕಥೆಯನ್ನು ಬರೆದರು. ತಮಿಳಿನಲ್ಲಿ ದಲಿತ ಮಹಿಳೆಯಿಂದ ರಚನೆಯಾದ ಮೊದಲ ಆತ್ಮಕಥೆಯಾಗಿ **ಭಾಮಾ** ಅವರ **'ಕರಕ್ಕು'** ಕೃತಿಯನ್ನು ಗಮನಿಸಬಹುದು. ೧೯೯೭ರಲ್ಲಿ **ಅಳಗಿಯ ನಾಯಗಿ ಅಮ್ಮಾಳ್** ಅವರು **'ಕವಲೈ'** ಎನ್ನುವ ಆತ್ಮಕಥೆಯು ಬರೆದಿದ್ದು, ಇದನ್ನು ಇವರು ಆತ್ಮಕಥೆಯೆನ್ನದೇ 'ಕುಟುಂಬ ಜಾನಪದ'ವೆಂದು ಕರೆದುಕೊಂಡಿದ್ದಾರೆ. **ಟ್ರಾನ್ಸ್‌ಜೆಂಡರ್ ಮಹಿಳೆ,ನಟಿ, ಚಿತ್ರ ನಿರ್ದೇಶಕಿಯಾದ ಲಿವಿಂಗ್ ಸ್ಮೈಲ್ ವಿದ್ಯಾ ಅವರು ೨೦೦೭ರಲ್ಲಿ ತಮಿಳಿನಲ್ಲಿ 'ಐ ಅಮ್ ವಿದ್ಯಾ' ಎನ್ನುವ ಆತ್ಮಕತೆಯನ್ನು ಬರೆದಿದ್ದಾರೆ. ಇದನ್ನು ೨೦೦೯ರಲ್ಲಿ 'ನಾನು ಅವನಲ್ಲ...ಅವಳು...!'** ಎಂಬ ಹೆಸರಿನಿಂದ ಕನ್ನಡಕ್ಕೆ ಡಾ. ತಮಿಳ್ ಸೆಲ್ವಿಯವರು ಅನುವಾದಿಸಿದ್ದಾರೆ. ಇದು ತಮಿಳಿನಿಂದ ಕನ್ನಡಕ್ಕೆ ಅನುವಾದಗೊಂಡ ಮೊದಲ ಮಹಿಳಾ ಆತ್ಮಕಥನವಾಗಿದೆ. ತಮಿಳಿನಲ್ಲಿ ಎ.ರೇವತಿಯವರ ಆತ್ಮಕತೆಯು ೨೦೦೪ರಲ್ಲಿ **ಉರನ್‌ವುಂ ಉರುವವುಂ (Uranvum Uruvavum) ಎಂಬ ಹೆಸರಿನಿಂದ ಪ್ರಕಟವಾ**ಗಿದುದ್ದು ಇದು ಕನ್ನಡಕ್ಕೆ 'ಬದುಕು ಬಯಲು: ಹಿಜ್ರಾ ಒಬ್ಬಳ ಆತ್ಮಕಥೆ' **ಎಂದು** ೨೦೧೧ರಲ್ಲಿ ದು.ಸರಸ್ವತಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ.

೩.೫. ಮಲಯಾಳಂ ಮೂಲದ ಮಹಿಳಾ ಆತ್ಮಕಥೆಗಳು

೧೯೧೬ರಲ್ಲಿ **ಕಲ್ಯಾಣಿ ಅಮ್ಮ**ನವರಿಂದ **'ಒರು ವ್ಯಜಹವತ್ತ ಸ್ಮರಣಕಾಲ್'** (Oru Vyazahavatta Smaranakal) ಎಂಬ ಕೃತಿ ರಚನೆಯಾಗಿದ್ದು,ಇದು ಮಲೆಯಾಳಂ ಭಾಷೆಯಲ್ಲಿ ಮಹಿಳೆಯೋರ್ವಳ ಮೊದಲ ಆತ್ಮಕಥೆ ಎನ್ನಬಹುದು. ಮಲಯಾಳಂ ಜನಪ್ರಿಯ ಕವಯತ್ರಿ **ಕಮಲಾ ದಾಸ್**ರವರು ಇಂಗ್ಲಿಷ್‌ನಲ್ಲಿ "ಮೈ ಸ್ಟೋರಿ"(My Story) ಆತ್ಮಕಥೆಯನ್ನು ೧೯೭೬ರಲ್ಲಿ ಬರೆದರು. ನಂತರ ಮಲಯಾಳಂನಲ್ಲಿ ಅದನ್ನೇ '**ಎಂಡ ಕಥಾ** (Enta Katha) ಎಂದು ಪ್ರಕಟಿಸಿದರು. ಇದನ್ನು ೨೦೦೭ರಲ್ಲಿ ಕನ್ನಡಕ್ಕೆ ಕೆ.ಪೂರ್ಣಿಮ ಭಟ್‌ರವರು 'ನನ್ನ ಕಥೆ' ಎಂದು ಅನುವಾದಿಸಿದ್ದಾರೆ. ಇದನ್ನು ಮಲಯಾಳಂ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಮೊದಲ ಮಹಿಳಾ ಆತ್ಮಕಥೆಯಾಗಿ ಗುರುತಿಸಬಹುದು.

ನಳಿನಿ ಜಮೀಲಾ ಅವರ ಆತ್ಮಕಥೆ ಮಲಯಾಳಂನಲ್ಲಿ ೨೦೦೫ರಲ್ಲಿ**'ಒರು ಲೈಂಗಿಕ ತೊಳಲಾಳಿಯುಲೆ ಆತ್ಮಕಥಾ'**(Oru Lymgika Thozhilaliyude Atmakadha) ಪ್ರಕಟವಾಯಿತು. ಇದನ್ನು ೨೦೦೯ರಲ್ಲಿ **'ಸೆಕ್ಸ್ ವರ್ಕರ್ ಒಬ್ಬಳ ಆತ್ಮಕಥನ'** ಎಂಬ ಹೆಸರಿನಿಂದ ಕನ್ನಡಕ್ಕೆ ಕೆ.ನಾರಾಯಣಸ್ವಾಮಿಯವರು ಅನುವಾದಿಸಿದರು.

೩.೬. ಮರಾಠಿ ಮೂಲದ ಮಹಿಳಾ ಆತ್ಮಕಥನಗಳು

೧೯೧೧ರಲ್ಲಿ ರಮಾಬಾಯಿ ರಾನಡೆಯವರ **'ಅಮ್ಚ ಆಯುಷ್ಯತಿಲ್ ಕಾಹಿ ಅಟವಣಿ'**, ಇದು ಮರಾಠಿಯಲ್ಲಿ ಮಹಿಳೆಯೋರ್ವಳಿಂದ ರಚನೆಯಾದ ಮೊದಲ ಆತ್ಮಕಥೆಯಾಗಿದೆ. ಮರಾಠಿ ಭಾಷೆಯಿಂದ **'ಸ್ತ್ರೀ–ಪುರುಷ (೧೯೮೪)** ವೆಂಬ ಆತ್ಮಕಥೆಯು ಕನ್ನಡಕ್ಕೆ ಅನುವಾದಗೊಂಡಿದೆ. ಇದು ಛಾಯಾ ದಾತರ್ ಅವರ ಆತ್ಮಚರಿತ್ರೆಯಾಗಿದ್ದು, ೧೯೯೨ರಲ್ಲಿ ಸರಸ್ವತೀ ರಿಸಬೂಡ ಕನ್ನಡಕ್ಕೆ ತಂದಿದ್ದಾರೆ. ೧೯೯೫ರಲ್ಲಿ **ಶಾಂತಾ ಹುಬಳೀಕರ್** ಅವರ 'ನಾಳೀನ ಚಿಂತ್ಯಾಕ' ಕನ್ನಡಕ್ಕೆ ಬಂತು. ೧೯೯೦ರಲ್ಲಿ ಮರಾಠಿಯಲ್ಲಿ **'ಕಶಾಲಾ ಉದ್ಯಾಚೀ ಬಾತ್'** ಎಂಬ ಹೆಸರಿಂದ ರಚನೆಯಾದ ಇದರ ನಿರೂಪಕರು

ಡಿ.ಡಿ.ಕುಲಕರ್ಣಿಯವರು. ಇದನ್ನು **‘ನಾಳೀನ ಚಿಂತ್ಯಾಕ’**ವೆಂಬ ಶಿರ್ಷಿಕೆಯೊಂದಿಗೆ ಕೆ.ಎಸ್ ಕುಲಕರ್ಣಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ.

೧೯೮೮ರಲ್ಲಿ ಮಾಧವಿದೇಸಾಯಿಯವರು **‘ನಾಚ್ ಗ ಘುಮಾ’** ಎಂಬ ಆತ್ಮಕತೆ ಬರೆದಿದ್ದು, ಇದನ್ನು ೧೯೯೭ರಲ್ಲಿ ಚಂದ್ರಕಾಂತ ಪೋಕಳೆಯವರು ಕನ್ನಡಕ್ಕೆ **‘ಕುಣಿಯೇ ಘುಮಾ’** ಎಂಬುದಾಗಿ ಅನುವಾದಿಸಿದ್ದಾರೆ. ಕನ್ನಡಕ್ಕೆ ಅನುವಾದಿಸಿ ಕನ್ನಡಿಗರಿಗೆ ಮರಾಠಿ ಸಾಹಿತ್ಯ ಸವಿಯನ್ನು ಬಡಿಸಿದ್ದಾರೆ. ೧೯೯೦ರಲ್ಲಿ ಸುನೀತಾಬಾಯಿ ದೇಶಪಾಂಡೆಯವರ **‘ಆಹೇ ಮನೋಹರ ತರಿ’**ಮರಾಠಿಯಲ್ಲಿ ಪ್ರಕಟವಾಯಿತು. ಇದನ್ನು ಕನ್ನಡಕ್ಕೆ **‘ಬಾಳು ಸೊಗಸಾದರೂ’** ಎಂಬ ಹೆಸರಿನಲ್ಲಿ ೨೦೦೪ರಲ್ಲಿ ಉಮಾ ಕುಲಕರ್ಣಿಯವರು ತಂದರು. ೧೯೮೬ರಲ್ಲಿಬೇಬಿತಾಯಿ ಕಾಂಬಳೆಯವರ **‘ಜೀನಾ ಅಮುಚಾ’**ಎನ್ನುವ ಆತ್ಮಕಥೆ ಮರಾಠಿ ಭಾಷೆಯಲ್ಲಿ ಪ್ರಕಟವಾಯಿತು. ಇದನ್ನು ೨೦೦೯ರಲ್ಲಿ **‘ಬದುಕು ನಮ್ಮದು’** ಎಂಬುದಾಗಿ ಚಂದ್ರಕಾಂತ ಪೋಕಳೆಯವರು ಕನ್ನಡಕ್ಕೆ ಅನುವಾದಿಸಿದ್ದಾರೆ.

೩.೭. ಇಂಗ್ಲೀಷ್ ಮೂಲದ ಮಹಿಳಾ ಆತ್ಮಕಥೆಗಳು

ಇಂಗ್ಲೀಷ್ ಭಾಷೆಯಲ್ಲಿ ರಚನೆಯಾದ ಆತ್ಮಕಥನ ಕುರಿತು ಹೇಳುವುದಾದರೆ ೧೪೩೨ರಲ್ಲಿ ಮರ್ಜರಿ ಕೆಂಪೆ(Margery Kempe) ಬರೆದಿರುವ ‘The book of Margery Kempe’ ಕೃತಿಯು ಜಗತ್ತಿನ ಮೊದಲ ಮಹಿಳಾ ಆತ್ಮಕಥೆಯೆಂದು ತಿಳಿಯಲಾಗಿದೆ. ಭಾರತದಲ್ಲಿ ಇಂಗ್ಲಿಷ್‌ನಲ್ಲಿ ಆತ್ಮಕಥೆಯನ್ನು ಬರೆದವರಲ್ಲಿ ಮೊದಲಿಗರು ಬಂಗಾಳದ **ಸುನೀತಿ ದೇವಿ**ಯವರು. ಇವರು ೧೯೨೧ರಲ್ಲಿ ‘The autobiography of an Indian princess’ಎನ್ನುವ ಆತ್ಮಕಥೆಯನ್ನು ಬರೆದರು. ಕನ್ನಡಕ್ಕೆ ಇಂಗ್ಲಿಷ್ ಭಾಷೆಯಿಂದ ಅನುವಾದಗೊಂಡ ಮೊದಲ ಮಹಿಳಾ ಆತ್ಮಕಥೆಯಾಗಿ ಕೃಷ್ಣಹತೀಸಿಂಗ್‌ರವರ ನೆನಪುಕಹಿಯಲ್ಲ ಆತ್ಮಕಥೆಯನ್ನು ಗುರುತಿಸಬಹುದು. ೧೯೪೩ರಲ್ಲಿ ರಚನೆಯಾದ ‘ವಿತ್ ನೊ ರೆಗ್ರೆಟ್; ಅನ್ ಆಟೋಬಯಾಗ್ರಫಿ’ (With no regrets: An autobiography) ಯನ್ನು ಕನ್ನಡಕ್ಕೆ ‘ನೆನಪು ಕಹಿಯಲ್ಲ’ ಎಂಬ ಹೆಸರಿನಲ್ಲಿ ೧೯೪೭ರಲ್ಲಿ ದೇಜಗೌ ಅವರು ಅನುವಾದಿಸಿದ್ದಾರೆ. ನಂತರದಲ್ಲಿ ಕಮಲಾದಾಸ್ ಅವರ ‘ಮೈ ಸ್ಟೋರಿ’(My story) ಆತ್ಮಕಥನವು ‘ನನ್ನ ಕಥೆ’ ಎಂಬ ಹೆಸರಿನಲ್ಲಿ ಎಮ್.ಪೂರ್ಣಿಮಾರವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಫ್ಲೇವಿಯಾ ಆಗ್ನೇಸ್‌ರವರ ‘ಮೈ ಸ್ಟೋರಿ...ಅವರ್ ಸ್ಟೋರಿ’(My story...Our story) ಯನ್ನು ‘ನನ್ನ ಕಥೆ...ನಮ್ಮ ಕಥೆ’ ಎಂಬ ಆತ್ಮಕಥೆಯನ್ನು ನೇಮಿಚಂದ್ರ ಅವರು ಅನುವಾದಿಸಿದ್ದಾರೆ. ೧೯೯೯ರಲ್ಲಿ ಪ್ರೋತಿಮಾ ಬೇಡಿಯವರ ‘ಟೈಮ್ ಪಾಸ್’ (Time pass) ಆತ್ಮಕಥೆಯು ರಚನೆಯಾಗಿದ್ದು, ೨೦೦೧ರಲ್ಲಿ ‘ಟೈಮ್ ಪಾಸ್’ ಎಂಬ ಹೆಸರಿನಲ್ಲೇ ರವಿಬೆಳಗೆರೆಯವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಹೀಗೆ ಭಾರತದ ಹಲವಾರು ಭಾಷೆಯಲ್ಲಿನ ಅತ್ಯುತ್ತಮ ಮಹಿಳಾ ಆತ್ಮಕಥೆಗಳು ಕನ್ನಡಕ್ಕೆ ಅನುವಾದವಾಗುವ ಮೂಲಕ ಕನ್ನಡ ಸಾಹಿತ್ಯದ ಕಣಜವನ್ನು ಸಮೃದ್ಧಗೊಳಿಸಿವೆ ಮತ್ತು ಬೆಳೆಸಿವೆ.

೩.೮. ಮಹಿಳಾ ಆತ್ಮಕಥೆಗಳ ಅನುವಾದಕರು

ಕನ್ನಡ ಭಾಷೆ ಅನುವಾದದಿಂದ ಹಲವು ಭಾಷೆಯಲ್ಲಿನ ಸತ್ವವನ್ನು ತನ್ನದಾಗಾಸಿಕೊಳ್ಳುವ ಮೂಲಕ ಬೆಳೆಯುತ್ತಿದೆ. ಈ ಬೆಳವಣಿಗೆಯ ಹಿಂದಿನ ವ್ಯಕ್ತಿಗಳು ಹಲವರಿದ್ದಾರೆ. ಅಂತಹ ವ್ಯಕ್ತಿಗಳ ಪರಿಶ್ರಮ, ಭಾಷಾಪ್ರೇಮದಿಂದ ಇಂದು ಕನ್ನಡ ಬೆಳೆಯುತ್ತಿದೆ. ಇಂತಹ ಕಾರಣೀಭೂತರಾದವರ ಬಗೆಗೆ ತಿಳಿಯುವುದು ಸಹ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಮಹಿಳಾ ಆತ್ಮಕಥೆಗಳನ್ನು ಕನ್ನಡಕ್ಕೆ ಅನುವಾದಿಸಿರುವ ಹಲವರ ಪರಿಚಯವನ್ನು ಮಾಡಿಕೊಡುವುದು ಪ್ರಸ್ತುತವೆನಿಸುತ್ತದೆ.

ದೇ.ಜ.ಗೌ

ನೂರಕ್ಕೂ ಅಧಿಕ ಪುಸ್ತಕಗಳನ್ನು ಪ್ರಕಟಿಸಿರುವ ಇವರು ಹಲವು ಕೃತಿಗಳನ್ನು ಅನ್ಯಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಭಾರತದ ಸ್ವತಂತ್ರ ಹೋರಾಟದಲ್ಲಿ ತೊಡಗಿದ್ದ ಪ್ರತಿಷ್ಠಿತ ಮನೆತನವಾದ ನೆಹರು ಕುಟುಂಬದ ಸದಸ್ಯೆಯಾದ ಕೃಷ್ಣಹಥೀಸಿಂಗ್‌ರವರು 'With no regrets: An autobiography' ಎಂಬ ಆತ್ಮಕಥೆಯನ್ನು ೧೯೪೩ರಲ್ಲಿ ಬರೆದಿದ್ದು ದೇಜಗೌರವರು 'ನೆನಪು ಕಹಿಯಲ್ಲ'ವೆಂದು ಅನುವಾದಿಸಿದ್ದಾರೆ. ಇದು ಅನ್ಯ ಭಾಷೆಯೊಂದರಿಂದ ಕನ್ನಡಕ್ಕೆ ಅನುವಾದಿಸಿದ ಮೊದಲ ಮಹಿಳಾ ಆತ್ಮಕಥೆಯಾಗಿದ್ದು ಅದರ ಹಿರಿಮೆ ದೇಜಗೌರವರದು. ಅಷ್ಟೇ ಅಲ್ಲದೇ ತಮ್ಮ ಬದುಕಿನ, ಅನುಭವಗಳ ಕುರಿತಾಗಿ 'ಹೋರಾಟದ ಬದುಕು' ಎನ್ನುವ ಆತ್ಮಕಥೆಯನ್ನು ಬರೆದಿದ್ದಾರೆ.

ಚಂದ್ರಕಾಂತ ಪೋಕಳೆ

ಕನ್ನಡ ಮತ್ತು ಮರಾಠಿ ಭಾಷೆಗಳೆರಡರಲ್ಲಿ ಪ್ರಭುತ್ವ ಪಡೆದು ಕನ್ನಡಿಗರಿಗೆ ಮರಾಠಿ ಸಾಹಿತ್ಯದ ಎಲ್ಲಾ ಪ್ರಕಾರಗಳನ್ನು ಪರಿಚಯಿಸುತ್ತಿರುವ ಕನ್ನಡ ಮತ್ತು ಮರಾಠಿ ಭಾಷೆಗಳ ನಡುವಿನ ಸೇತುವೆಯಾಗಿ ಕೆಲಸ ಮಾಡುತ್ತಿರುವವರು ಚಂದ್ರಕಾಂತ ಪೋಕಳೆಯವರು.

ದಲಿತರ ಸಾಂಸ್ಕೃತಿಕ ಹೋರಾಟದ ನೆಲೆಗಟ್ಟಿನ ಮೇಲೆ ರೂಪುಗೊಂಡಿರುವ 'ಉಚಲ್ಯಾ' (ಲಕ್ಷ್ಮಣ ಗಾಯಕವಾಡ್) ಮತ್ತು 'ಬದುಕು ನಮ್ಮದು'(ಬೇಬಿತಾಯಿ ಕಾಂಬಳೆ), ಬದುಕು-ಬರೆಹದಲ್ಲಿ ಇಬ್ಬಂದಿತನವಿರುವ ಲೇಖಕನ ಬದುಕನ್ನು ನಿರೂಪಿಸುವ 'ಕುಣಿಯೇ ಘುಮಾ' (ಮಾಧವಿ ದೇಸಾಯಿ) ಮೊದಲಾದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಜಿ.ಕುಮಾರಪ್ಪ

ಜಿ.ಕುಮಾರಪ್ಪನವರು ಬಂಗಾಳಿ ಭಾಷೆಯಲ್ಲಿ ರಚಿತವಾದ **ಸುಶ್ಮಿತಾ ಬಂದ್ಯೋಪಾಧ್ಯಾಯರ 'ಕಾಬೂಲಿವಾಲಾರ್ ಬಂಗಾಲಿ ಬೊ'**ಎನ್ನುವ ಆತ್ಮಕಥೆಯನ್ನು 'ಕಾಬೂಲಿವಾಲನ ಬಂಗಾಳಿ ಹೆಂಡತಿ' ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರು ಬಂಗಾಳಿಯಿಂದ ಅನುವಾದಿಸಿದ ಕೃತಿ **'ನೋವು ತುಂಬಿದ ಬದುಕು'. ೨೦೦೪ರಲ್ಲಿ ರಚನೆಯಾದ ಈ ಕೃತಿಯ ಮೂಲನಾಮ 'ಆಲೊ ಆಂಧಾರಿ'(Aalo Aandhari).** ಶ್ರಮಿಕ ವರ್ಗದ ಮಹಿಳೆ **ಬೇಬಿ ಹಾಲ್ದಾರ್** ಅವರ ಬದುಕಿನ ಕಥನ. ಕೈಹಿಡಿದ ಗಂಡನ ನಿರ್ಲಕ್ಷ್ಯಕ್ಕೆ ಒಳಗಾಗಿ ಆತನನ್ನು ತೊರೆದು ಬಾಡಿಗೆಮನೆಯನ್ನು ಪಡೆದು ವಾಸಮಾಡಿಕೊಂಡು ಬೇರೆಯವರ ಮನೆಯ ಕೆಲಸವನ್ನು ಮಾಡಿಕೊಂಡು ತನ್ನ ಕಾಲಮೇಲೆ ತಾನೇ ನಿಂತು ಸ್ವಾಭಿಮಾನದಿಂದ ಬದುಕನ್ನು ಸಾಗಿಸಿದ ಮಹಿಳೆಯ ಕಥೆ. **ಸುಶೀಲಾ ರಾಯ್** ಅವರು ಬರೆದ ಹಿಂದಿ ಮೂಲದ **'ಏಕ್ ಅನ್‌ಪಡ್ ಕಹಾನಿ'** (Ek anpad kahani)-ಎಂಬ ಕೃತಿಯನ್ನು **'ನಿರಕ್ಷರಿಯ ಆತ್ಮಕಥನ'**(೨೦೦೯) ವೆಂದು ಕನ್ನಡಕ್ಕೆ ಅನುವಾದಿಸಿದ್ದಾರೆ.

ಕೆ.ನಾರಾಯಣ ಸ್ವಾಮಿ

ಡಾ.ಯು.ಆರ್.ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯನ್ನು ತೆಲುಗು ಭಾಷೆಗೆ ಅನುವಾದಿಸಿದ್ದಾರೆ. ೨೦೦೫ರಲ್ಲಿ ಮಲಯಾಳಂನ ಸೆಕ್ಸ್ ವರ್ಕರ್ ನಳಿನಿ ಜಮೀಲಾರವರು 'ಜ್ಞಾನ್ ಲೈಂಕಿಕ ತೊಳಿಲಾಳಿ' ಎನ್ನುವ ಆತ್ಮಕಥೆ ಬರೆದಿದ್ದು ಭಾರತದ ಇತಿಹಾಸದಲ್ಲಿ ಸೆಕ್ಸ್ ವರ್ಕರ್ ಒಬ್ಬರ ಮೊದಲ ಕೃತಿ ಎನ್ನಬಹುದು. ಇದನ್ನು 'ಸೆಕ್ಸ್ ವರ್ಕರ್ ಒಬ್ಬಳ ಆತ್ಮಕಥನ' ಎಂದು ಕನ್ನಡಕ್ಕೆ ತಂದವರು ಕೆ. ನಾರಾಯಣಸ್ವಾಮಿಯವರು. ಈ ಕೃತಿಯನ್ನು ಕನ್ನಡಕ್ಕೆ ತಂದ ಉದ್ದೇಶ ಮತ್ತು ಆಶಯ ಅವರ ಮಾತಿನಿಂದ ಅರ್ಥವಾಗುತ್ತದೆ. 'ಕೃತಿಯ ಶೀರ್ಷಿಕೆ ಓದುತ್ತಿದ್ದಂತೆ, ಕೇಳುತ್ತಿದ್ದಂತೆ ಮುಖ ಸಿಂಡರಿಸಿಕೊಳ್ಳುವವರೇ ಅಧಿಕ. ಕುತೂಹಲಕ್ಕಾಗಿಯಾದರೂ ಪುಟಗಳನ್ನೂ ತಿರುವಿ ಹಾಕುವುದಿಲ್ಲ. ಸದರಿ ಸಮುದಾಯದ ಬಗ್ಗೆ ಸಹಾನುಭೂತಿ, ಅನುಕಂಪಕ್ಕೆ ಬದಲಾಗಿ ತಿರಸ್ಕಾರ, ಅಸಹನೆಯ ಅಲೆಗಳು ಮನಸ್ಸಿನಲ್ಲಿ ವಿಜೃಂಭಿಸತೊಡಗುತ್ತವೆ. ನಾಗರಿಕ ಸಮಾಜ ಸಮೂಹ ಸನ್ನಿಗೊಳಗಾದಂತೆ, ನೀಚರೆಂದು, ಪರಮ ಪಾಪಿಗಳೆಂದು, ಸಮಾಜಕ್ಕಂಟಿದ ಭಯಂಕರ ರೋಗವೆಂದು ಶಪಿಸುತ್ತಾರೆ. ಅನಿವಾರ್ಯ ಕಾರಣದಿಂದ ಈ ವೃತ್ತಿಗಿಳಿದ ಪರಿಸ್ಥಿತಿಯನ್ನು ಗ್ರಹಿಸಬೇಕಾಗಿದೆ. ಸಾಂಪ್ರದಾಯಕ ಅಳತೆಗೋಲನ್ನು ಬಳಸದೇ, ಮಾನವತಾವಾದ, ವೈಚಾರಿಕತೆ, ವೈಜ್ಞಾನಿಕತೆ, ಆರ್ಥಿಕ ಸ್ಥಿತಿಗತಿ, ಕೌಟುಂಬಿಕ ಪರಿಸ್ಥಿತಿ, ಲಿಂಗತಾರತಮ್ಯ, ಹೆಣ್ಣಿನ ಅಸಹಾಯಕತೆ, ಶೋಷಣೆಯ ಅಸ್ತ್ರಗಳು ಮುಂತಾದ ಮಾನದಂಡಗಳ ಮೂಲಕ ಹೊಸ ಅರಿವು ಮೂಡಿಸಬೇಕಾದ್ದು ಅತ್ಯಗತ್ಯ' ಎಂದು ಈ ಕೃತಿಯ ಮುನ್ನುಡಿಯಲ್ಲಿ ಹೇಳಿರುವ ಮಾತು ಅರ್ಥಗರ್ಭಿತವಾಗಿದೆ.

ನಾ ದಾಮೋದರ ಶೆಟ್ಟಿ

ಮಲಯಾಳಂ ಪ್ರಸಿದ್ಧ ಕವಯತ್ರಿ ಕಮಲಾದಾಸ್‌ರವರ 'ಬಾಲ್ಯಕಾಲದ್ ಸ್ಮರಣಂಕಳ್' ಎಂಬ ಆತ್ಮಕಥೆಯನ್ನು 'ಬಾಲ್ಯದ ನೆನಪುಗಳು' ಎಂಬ ಹೆಸರಿನಿಂದ ಅನುವಾದಿಸಿದ್ದಾರೆ. ಇದರ ನಿರೂಪಣೆಯಲ್ಲಿ ದಕ್ಷಿಣ ಕನ್ನಡದ ಭಾಷೆಯನ್ನು ಬಳಸಿಕೊಂಡಿರುವುದು ವಿಶೇಷ. ಅವರ ಒಲವು ಮತ್ತು ಒಡನಾಟವೆಲ್ಲವೂ ದಕ್ಷಿಣಕನ್ನಡ ಆಗಿರುವುದರಿಂದ ಆ ಭಾಷೆಯನ್ನು ಬಳಸಿಕೊಂಡಿದ್ದು ಸಹಜವಾಗಿದೆ. ಹಲವಾರು ಮಲೆಯಾಳಂ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಪಾರ್ವತಿ ಜಿ ಐತಾಳ್

ಇವರು ಮಲಯಾಳಂನ ಲೇಖಕಿ ಕಮಲಾದಾಸ್‌ರ 'ನೀರ್‌ಮಾದಳ ಹೂಬಿಟ್ಟಕಾಲ' ಆತ್ಮಕಥೆಯನ್ನು ಕನ್ನಡಕ್ಕೆ ತಂದಿದ್ದಾರೆ. ಮೂಲತಃ ಮಲಯಾಳ ಅವರ ಮಾತೃಭಾಷೆ ಭಾಷೆಯಾದುದರಿಂದ ಮತ್ತು ಕನ್ನಡ ವ್ಯವಹಾರ ಭಾಷೆಯಾದರಿಂದ ಕಮಲಾದಾಸರ ಆತ್ಮಕಥೆಯನ್ನು ಅನುವಾದಿಸಲು ಅವರಿಗೆ ಭಾಷೆಯ ತೊಡಕು ಉಂಟಾಗಲಿಲ್ಲವೆನ್ನಬಹುದು.

ದು.ಸರಸ್ವತಿ

ಇವರ ಆತ್ಮಕಥನ 'ಈಗೇನ್ ಮಾಡೀರಿ?'. ತಮಿಳಿನಲ್ಲಿ ಹಿಜಡಾ ಸಮುದಾಯದ ಎ.ರೇವತಿಯವರ ಆತ್ಮಕತೆಯು ೨೦೦೪ರಲ್ಲಿ 'ಉರನ್‌ವುಂ ಉರುವವುಂ' (Uranvum Uruvavum) ಎಂಬ ಹೆಸರಿನಿಂದ ಪ್ರಕಟವಾಗಿದ್ದು ಇದು ಕನ್ನಡಕ್ಕೆ

‘ಬದುಕು ಬಯಲು: ಹಿಜ್ರಾ ಒಬ್ಬಳ ಆತ್ಮಕಥೆ’ ಎಂದು ೨೦೧೧ರಲ್ಲಿ ದು.ಸರಸ್ವತಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಆ ಮೂಲಕ ಹಿಜಡಾ ಸಮುದಾಯದ ಪರ ಸಮಾಜದಲ್ಲಿ ಸಹಾನುಭೂತಿ ಸಹಾಯ ದೊರಕುವಂತೆ ಮಾಡಿದ್ದಾರೆ.

ತಮಿಳ್ ಸೆಲ್ವಿ

ಸಮಾಜವು ಹಿಜಡಾ ಸಮುದಾಯವನ್ನು ಒಂದು ಅನಿಷ್ಟವೆಂದು ಕಾಣುವ ಸಂದರ್ಭದಲ್ಲಿ ಅವರ ಬಗೆಗೆ ಸಹಾನುಭೂತಿಯಿಂದ ತಮಿಳ್‌ಸೆಲ್ವಿಯವರು ಆ ಸಮುದಾಯದ ವಿದ್ಯಾ ಅವರ ಆತ್ಮಕಥೆಯನ್ನು ಕನ್ನಡಕ್ಕೆ ‘ನಾನು ಅವನಲ್ಲ...ಅವಳು’ ಎಂದು ಅನುವಾದಿಸುವ ಮೂಲಕ ಹಿಜಡಾ ಸಮುದಾಯದ ಬಗೆಗೆ ಯೋಚಿಸುವಂತೆ ಮಾಡಿದ್ದಾರೆ.

ನೇಮಿಚಂದ್ರ

ನನ್ನ ಕಥೆ...ನಮ್ಮ ಕಥೆ –ಇದು ಕೌಟುಂಬಿಕ ಹಿಂಸೆಯನ್ನು, ದೌರ್ಜನ್ಯದ ವಿರುದ್ಧ ಹೋರಾಟ ನಡೆಸಿದ ಮಹಿಳೆಯಾದ ಫ್ಲೇವಿಯಾ ಅಗ್ನೇಸ್‌ರವರ ಆತ್ಮಕಥನ. ನೇಮಿಚಂದ್ರರ ಮಹಿಳಾ ಕಾಳಜಿಯ ಹಲವು ಬರಹಗಳಿದ್ದು ಅಂತಹ ಬರಹಗಳಲ್ಲಿ ಈ ಆತ್ಮಕಥೆಯ ಅನುವಾದವೂ ಒಂದು.

ಉಮಾ ಕುಲಕರ್ಣಿ

ಮರಾಠಿಯಲ್ಲಿದ್ದ ಸುನೀತಾ ದೇಶಪಾಂಡೆಯವರ ‘ಆಹೇ ಮನೋಹರ ತರಿ’ ಆತ್ಮಕಥೆಯನ್ನು ‘ಬಾಳು ಸೊಗಸಾದರೂ’ ಎಂಬ ಆತ್ಮಕಥೆಯನ್ನು ಕನ್ನಡಕ್ಕೆ ತಂದಿದ್ದಾರೆ. ಹೀಗೆ ಹಲವು ಅನುವಾದಕರು ಬೇರೆಬೇರೆ ಭಾಷೆಯಲ್ಲಿನ ಆತ್ಮಕಥನಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಮೂಲಕ ಕನ್ನಡ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಆ ಮೂಲಕ ಕನ್ನಡ ಸಾಹಿತ್ಯಕ್ಕೆ ಹೊಸವಿಚಾರ, ಹೊಸ ವ್ಯಕ್ತಿಗಳ ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ತನ್ಮೂಲಕ ಕನ್ನಡದ ಬೆಳವಣಿಗೆಗೆ ಕಾರಣೀಭೂತರಾಗಿದ್ದಾರೆ.

ಅಧ್ಯಾಯ ೪ ಲೇಖಕಿಯರ ಆತ್ಮಕಥೆಗಳ ವೈಶಿಷ್ಟ್ಯ

೪.೧ ಅನುಪಮಾ ನಿರಂಜನ

ಅನುಪಮಾ ಅವರು **‘ನೆನಪು: ಸಿಹಿ–ಕಹಿ’** ಮತ್ತು **‘ಬರಹಗಾರ್ತಿಯ ಬದುಕು’** ಎಂಬ ಎರಡು ಆತ್ಮಕಥೆಯನ್ನು ಬರೆದಿದ್ದಾರೆ. ತಮ್ಮ ೫೧ನೇ ವಯಸ್ಸಿನಲ್ಲಿ ಅಂದರೆ ೧೯೮೫ರಲ್ಲಿ ರಚಿಸಿದ ಪೂರ್ಣಪ್ರಮಾಣದೆನ್ನಬಹುದಾದ ಆತ್ಮಕಥೆ **‘ನೆನಪು ಸಿಹಿ–ಕಹಿ’.**

ಒಂದು ಬಗೆಯ ಗಂಭೀರವಾದ ಬಾಲ್ಯವು ಅವರದ್ದು ಎನ್ನಬಹುದು. ಕಾರಣ ಒಂದು ತಂದೆಯ ಶಿಸ್ತು. ಎರಡನೆಯದಾಗಿ ಆಕೆ ಮನೆಯಲ್ಲಿ ಹಿರಿಯವಳಾದರಿಂದ ತನಗಿಂತ ಕಿರಿಯವರ ಮತ್ತು ಮನೆಯ ಜವಾಬ್ದಾರಿ ಅವರಿಗಿತ್ತು. ಮೂರನೆಯದಾಗಿ ಅವರು ಬಾಲ್ಯದಿಂದಲೇ ಬದುಕಿನ ಬಗೆಗೆ ನಿರ್ದಿಷ್ಟ ಗುರಿಯಿಟ್ಟುಕೊಂಡು ಬಂದವರು. ತಮ್ಮ ಗುರಿಯ ಮುಂದೆ ಬಾಲ್ಯ ಸಹಜವೆನ್ನುವ ತುಂಟಾಟ, ಕೀಟಲೆಗೆ ಆಸ್ಪದವಿರಲಿಲ್ಲ. ಅನುಪಮಾ ಅವರು ಬಾಲ್ಯದಲ್ಲಿಯೇ ಒಂದು ಬಗೆಯ ಗಂಭೀರತೆಯನ್ನು ಹೊಂದಿದ್ದು ಈ ಗಂಭೀರತೆಯೇ ಅವರನ್ನು ಇತರರಿಂದ ಭಿನ್ನವಾಗಿಸಿದೆ.

ಅನುಪಮಾ ನಿರಂಜನರ ಹದಿಹರೆಯದ ವಯೋಸಹಜವಾದ ಗುಣವನ್ನು ಮೀರಬಹುದು ಅನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಅನುಪಮಾ ಹರೆಯದಲ್ಲಿ ತನ್ನ ತಂದೆಯ ಆಫೀಸಿನಲ್ಲಿರುವ ಹರಿಜನ ಗುಮಾಸ್ತನನ್ನು ಮನಸ್ಸಿನಲ್ಲೇ ಪ್ರೀತಿಸುತ್ತಿದ್ದರು. ಸಹಜವಾಗಿರುವ ಹರೆಯದವರನ್ನು ಕಾಡುವ ತಾರುಣ್ಯದ ಆತಂಕಗಳು, ಕಾತರಗಳು ಅನುಪಮಾರನ್ನೂ ಬಿಡಲಿಲ್ಲ. ಆದರೆ ಅದರಿಂದ ಅನುಪಮಾ ಬಿಡಿಸಿಕೊಂಡ ಬಗೆ ಮಾತ್ರ ಗಮನಿಸಬೇಕಾದ ವಿಚಾರ. ತಮ್ಮ ಭಾವನೆಗಳನ್ನು ಬರೆಹಕ್ಕೆ ಇಳಿಸಿದರು. ಸವರ್ಣೀಯ ಕನ್ಯೆ ಹರಿಜನ ಯುವಕನನ್ನು ಮದುವೆಯಾಗುವ ಕಥೆ ಬರೆದರು. ಇಲ್ಲಿಗೆ ಅವರ ಪ್ರೇಮ ಪ್ರಕರಣ ಮುಗಿಯಿತು. ಸುಪ್ತ ಭಾವನೆಗಳಿಗೆ ಅಭಿವ್ಯಕ್ತಿ ನೀಡುವುದಕ್ಕೆ ಬರೆಹವೇ ಸರಿಯಾದ ಮಾರ್ಗವೆಂದು ಭಾವಿಸಿ ಮನಸ್ಸಿನ ಭಾವನೆಗಳಿಗೆ ಅಕ್ಷರರೂಪ ಕೊಡುವುದರ ಮೂಲಕ ತಮ್ಮ ಮನಸ್ಸಿನಲ್ಲಿ ಹುಡುಗನ ಪ್ರೀತಿಯಿಂದ ಹೊರಬಂದರು. ಹೀಗೆ ಹರೆಯದ ಸಮಸ್ಯೆಯಿಂದ ಪಾರಾದರು ಎನ್ನಬಹುದು. ಹೀಗೆ ತಾನು ಕೂಡ ಹರೆಯದಲ್ಲಿ ದಾರಿ ತಪ್ಪುತ್ತಿದ್ದೆ ಎಂದು ಹೇಳಿಕೊಳ್ಳುವ ಪ್ರಾಮಾಣಿಕತೆ ಅವರಲ್ಲಿದೆ.

೪.೨ ಚಿ.ನ. ಮಂಗಳ

ಚಿ.ನ.ಮಂಗಳಾರವರು **‘ಅಧ್ಯಾಪಕಿಯಾಗಿ ೨೦ ವರ್ಷ’** ಮತ್ತು **‘ಪ್ರಾಂಶುಪಾಲೆಯಾಗಿ ೨೫ ವರಷ’** ಎನ್ನುವ ಎರಡು ಆತ್ಮಕಥೆಗಳನ್ನು ಬರೆದಿದ್ದಾರೆ. ಇವೆರಡನ್ನು ಸೇರಿಸಿ ಹಾಗೂ ‘Far Across the Seas’ ಎಂಬ ಕೃತಿಯನ್ನು ಪರಿಷ್ಕರಿಸಿ ಇವುಗಳ ಜೊತೆ ಅವರ ಮಲೇಷಿಯಾ ಹಾಗೂ ಕೆನಡಾದ ವೃತ್ತಿಪರ ಪ್ರವಾಸದ ಅನುಭವವನ್ನು ಸೇರಿಸಿ **‘ಸ್ನೇಹಸಿಂಧು’** ಎನ್ನುವ ಆತ್ಮಕಥೆಯನ್ನು ಬರೆದಿದ್ದಾರೆ.

೪.೩. ಸಾರಾ ಅಬೂಬಕ್ಕರ್

ಸಾರಾ ಅಬೂಬಕ್ಕರ್ ಕನ್ನಡ ಸಾಹಿತ್ಯದ ಪ್ರಮುಖ ಲೇಖಕಿಯಾಗಿ ಗುರುತಿಸಿಕೊಂಡವರು. ಇವರ ಜೀವನಾನುಭವಗಳು ಲೇಖನ ಮತ್ತು ಕೃತಿಗಳಲ್ಲಿ ವ್ಯಕ್ತವಾಗಿವೆ. ೧೯೮೨ರಲ್ಲಿ **‘ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು’** ಎಂಬ ಚಿಕ್ಕದಾದ (೨೫ಪುಟಗಳು) ಆತ್ಮಕಥೆಯನ್ನು ಲಂಕೇಶ್ ಅವರ ಒತ್ತಾಯಕ್ಕಾಗಿ ಬರೆದರು. ಆಮೇಲೆ ೧೯೯೮ರಲ್ಲಿ ಕರ್ನಾಟಕ ಲೇಖಕಿಯರ ವಾಚಕಿಯರ ಸಂಘ ಹೊರತಂದ **‘ಲೇಖಲೋಕ’**ದಲ್ಲಿ, ೨೦೦೯ರಲ್ಲಿ ಡಾ.ಸಬಿಹಾ ಅವರ ಸಂಪಾದಕತ್ವದಲ್ಲಿ ಪ್ರಕಟವಾದ ಸಾರಾ ಅಬೂಬಕ್ಕರ್ ಅವರ **‘ಚಂದ್ರಗಿರಿ’** ಅಭಿನಂದನಾ ಗ್ರಂಥದಲ್ಲಿ ಅವರ ಜೀವನಾನುಭವವಿದೆ. **‘ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು’** ಬರೆದ ಇಪ್ಪತ್ತೆಂಟು ವರ್ಷಗಳ ನಂತರ ಪೂರ್ಣಪ್ರಮಾಣದೆನ್ನಬಹುದಾದ **‘ಹೊತ್ತುಕಂತುವ ಮುನ್ನ (೨೦೧೦)’** ಬರೆದರು. ಈ ಮೇಲೆ ಉಲ್ಲೇಖಿಸಿದ ಕೃತಿಗಳಲ್ಲಿ ಅವರ ಬದುಕಿನ ಚಿತ್ರಣ ದೊರಕುತ್ತದೆ.

೪.೪ ಕಮಲಾ ದಾಸ್

ಮಲೆಯಾಳಂ ಭಾಷೆಯ ಜನಪ್ರಿಯ ಕವಯತ್ರಿ ಕಮಲಾ ದಾಸ್ ಇವರು ತಮ್ಮ ಆತ್ಮಕಥೆಯನ್ನು ೧೯೭೬ರಲ್ಲಿ ಇಂಗ್ಲೀಷ್‌ನಲ್ಲಿ **‘ಮೈ ಸ್ಟೋರಿ’** ಎಂಬ ಹೆಸರಿನಲ್ಲಿ ಬರೆದರು. ಅದು ಅತ್ಯುತ್ತಮವಾಗಿ ಮಾರಾಟವಾಗಿದ್ದಲ್ಲದ್ದೇ ಸಾಕಷ್ಟು ಚರ್ಚಾಗ್ರಾಸವೂ ಜನಪ್ರಿಯವೂ ಆಗಿತ್ತು. ಇದಾದ ಆರು ವರ್ಷಗಳ ನಂತರ ಅಂದರೆ ೧೯೮೨ರಲ್ಲಿ **‘ಎಂಡೆ ಕಥಾ’** ಎಂಬ ಹೆಸರಿನಲ್ಲಿ ಅವರ ಮಾತೃಭಾಷೆಯಾದ ಮಲೆಯಾಳಂನಲ್ಲಿ ರಚನೆಯಾಯಿತು. ೧೯೮೭ರಲ್ಲಿ ತಮ್ಮ ಬಾಲ್ಯಕಾಲಕ್ಕೆ

ಸಂಬಂಧಿಸಿದಂತೆ 'ಬಾಲ್ಯಕಾಲ ಸ್ಮರಣಕಳ್' ಮತ್ತು ೧೯೯೪ರಲ್ಲಿ 'ನೀರ್‌ಮಾದಳಂ ಪೂತ್ತ ಕಾಲಂ' ಎಂಬ ಆತ್ಮಕಥೆ ರಚಿಸಿದ್ದಾರೆ. ಇದರಲ್ಲಿ 'ಮೈ ಸ್ಟೋರಿ' ಅನ್ನು ಕನ್ನಡಕ್ಕೆ ಡಾ.ಪೂರ್ಣಿಮಾ ಭಟ್.ಕೆ ಅವರು ೧೯೯೫ರಲ್ಲಿ, 'ಬಾಲ್ಯಕಾಲ ಸ್ಮರಣಕಳ್' ಅನ್ನು ನಾ. ದಾಮೋದರ ಶೆಟ್ಟಿ ಅವರು ೨೦೦೧ರಲ್ಲಿ 'ಬಾಲ್ಯದ ನೆನಪುಗಳು' ಮತ್ತು ೨೦೦೯ರಲ್ಲಿ 'ನೀರ್‌ಮಾದಳಂ ಪೂತ್ತ ಕಾಲಂ' ಅನ್ನು ಡಾ.ಪಾರ್ವತಿ.ಜಿ ಐತಾಳ್ ಅವರು 'ನೀರ್‌ಮಾದಳ ಹೂಬಿಟ್ಟ ಕಾಲ' ಎಂದು ಅನುವಾದಿಸಿದ್ದಾರೆ.

೪.೫. **ಅಮೃತಾ ಪ್ರೀತಂ**

ಪಂಜಾಬಿ ಸಾಹಿತ್ಯದ ಪ್ರಮುಖ ಲೇಖಕರು ಅಮೃತಾ ಪ್ರೀತಂ ಇವರು ಪಂಜಾಬಿ ಭಾಷೆಯಲ್ಲಿ ೧೯೬೮ ರಲ್ಲಿ ಕಾಲಾ ಗುಲಾಬ್ (Kala gualab), ೧೯೭೬ರಲ್ಲಿ ರಶೀದಿ ತಿಕೀಟು (Rasidi ticket), ೨೦೦೪ರಲ್ಲಿ ಅಕ್ಷರೊನ್ ಕಾ ಸಾಯೀ (Aksharon ka saayee) ಎಂಬ ಮೂರು ಆತ್ಮಕಥನಗಳನ್ನು ಬರೆದಿದ್ದಾರೆ. ಅದರಲ್ಲಿ 'ರಶೀದಿ ತಿಕೀಟು' ಅನ್ನು ೨೦೦೪ರಲ್ಲಿ ಹಸನ್ ನಯೀಂ ಸುರಕೋಡ ಇವರು ಕನ್ನಡಕ್ಕೆ ಅನುವಾದಿಸಿದ್ದಾರೆ.

೪.೬. ಅಜಿತ್‌ಕೌರ್ :

ಪಂಜಾಬಿ ಲೇಖಕಿಯಾದ ಇವರು 'ಖಾನ್‌ಬದೋಷ್' ಎನ್ನುವ ಆತ್ಮಕಥೆಯನ್ನು ಬರೆದರು. ಇದನ್ನು ಲವ್‌ಲೀನ್ ಜಾಲಿ ಮತ್ತು ವಿಜಯಲಕ್ಷ್ಮೀ ಅರಸ್ ಅವರು ಕನ್ನಡಕ್ಕೆ 'ಅಲೆಮಾರಿ' ಎಂದು ಅನುವಾದಿಸಿದ್ದಾರೆ.

ಲೇಖಕಿಯರ ಆತ್ಮಕಥೆಯಲ್ಲಿ ಅವರ ವೈಯಕ್ತಿಕ ಬದುಕಿನ ವಿವರಗಳಾದ ಬಾಲ್ಯ, ಹರೆಯ ಮತ್ತು ದಾಂಪತ್ಯಗಳ ಕುರಿತು ಚರ್ಚಿಸಲಾಗಿದೆ. ಜೊತೆಗೆ ಅವರ ಮೇಲೆ ಪ್ರಭಾವ ಬೀರಿದ ಪರಿಸರ, ವ್ಯಕ್ತಿಗಳ ಕುರಿತು ಹಾಗೂ ಅವರು ಎದುರಿಸಿದ ಸಮಸ್ಯೆ ಸವಾಲುಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ೫ ಕಲಾವಿದೆಯರ ಮತ್ತು ಹೋರಾಟಗಾರ್ತಿಯರ ಆತ್ಮಕಥೆಗಳ ವೈಶಿಷ್ಟ್ಯ

ಇದರಲ್ಲಿ ಉಪ ಅಧ್ಯಾಯ ೫.೧ ರಲ್ಲಿ **ಗಂಗೂಬಾಯಿ ಹಾನಗಲ್**, ೫.೨ರಲ್ಲಿ **ಮಳವಳ್ಳಿ ಸುಂದರಮ್ಮ** ಮತ್ತು **ಕೆ.ನಾಗರತ್ನಮ್ಮ**, ೫.೩ ರಲ್ಲಿ **ಬಿ.ಜಯಮ್ಮ** ಮತ್ತು **ಉಮಾಶ್ರೀ**, ೫.೪ರಲ್ಲಿ **ಮಾಧವಿ ದೇಸಾಯಿ**, ೫.೫ **ಸುನೀತಾ ದೇಶಪಾಂಡೆ.** ೫.೬ರಲ್ಲಿ **ಗೋದಾವರಿ ಪುರುಳೇಕರ್** –ಮೊದಲಾದವರ ಬಾಲ್ಯ, ಹರೆಯ, ದಾಂಪತ್ಯ, ಸಾಧನೆ, ಎದುರಿಸಿದ ಸಮಸ್ಯೆ ಮತ್ತು ಸವಾಲುಗಳ ಕುರಿತು ಚರ್ಚಿಸಲಾಗಿದೆ. ಅವರ ವೈಯುಕ್ತಿಕ ಬದುಕು/ಖಾಸಗಿ ಬದುಕು ಮತ್ತು ಸಾರ್ವಜನಿಕ ಬದುಕಿನ ಹಲವು ಮಹತ್ವದ ವಿಚಾರಗಳ ಕುರಿತಾಗಿ ಚರ್ಚಿಸಲಾಗಿದೆ.

ಅಧ್ಯಾಯ ೬ ಸಮಾಜದ ಅಂಚಿನಲ್ಲಿ ಉಳಿದ ಮಹಿಳೆಯರ ಆತ್ಮಕಥೆಗಳ ವೈಶಿಷ್ಟ್ಯ

ಇದರಲ್ಲಿ ಉಪ ಅಧ್ಯಾಯ ೬.೧ ರಲ್ಲಿ **ಜಾಜಿ ತಿಮ್ಮಯ್ಯ,** ೬.೨. **ದು.ಸರಸ್ವತಿ,** ೬.೩ರಲ್ಲಿ **ವೀಣಾಧರಿ,** ೬.೪ರಲ್ಲಿ **ನಳಿನಿ ಜಮೀಲಾ,** ೬.೫ರಲ್ಲಿ **ಬೇಬಿತಾಯಿ ಕಾಂಬಳೆ,** ೬.೬ರಲ್ಲಿ **ಬೇಬಿ ಹಾಲ್ದಾರ್**– ಇವರುಗಳ ಆತ್ಮಕಥೆಯನ್ನು ಅಧ್ಯಯನ ಮಾಡಲಾಗಿದೆ. ಸಮಾಜದ ತಳಸಮಾಜ/ ಶೋಷಿತ ಸಮಾಜದಲ್ಲಿ ಹುಟ್ಟಿದ ಅವರ ಬಾಲ್ಯ, ಹರೆಯ ಮತ್ತು

ದಾಂಪತ್ಯ ಮೊದಲಾದ ಖಾಸಗಿ ಬದುಕಿನ ವಿವರಗಳ ಜೊತೆಗೆ ಅವರ ಸಾರ್ವಜನಿಕ ಬದುಕಿನಲ್ಲಿ ಅವರ ಸಾಧನೆ, ಎದುರಿಸಿದ ಸವಾಲುಗಳು ಮೊದಲಾದ ವಿಚಾರಗಳ ಕುರಿತಾದ ಚರ್ಚೆಯನ್ನು ಮಾಡಲಾಗಿದೆ.

ಅಧ್ಯಾಯ ೭ ಮಹಿಳಾ ಆತ್ಮಕಥೆಗಳ ತೌಲನಿಕ ಅಧ್ಯಯನ

ಇದರಲ್ಲಿ ಕನ್ನಡ ಮಹಿಳಾ ಆತ್ಮಕಥೆಗಳು ಮತ್ತು ಅನುವಾದಿತ ಮಹಿಳಾ ಆತ್ಮಕಥೆಗಳ ವಸ್ತು ವಿನ್ಯಾಸ– ಇವುಗಳನ್ನು **ತೌಲನಿಕ ವಿವೇಚಿಸಲಾಗಿದೆ. ಉಪ ಅಧ್ಯಾಯವಾದ ೭.೧ ಆತ್ಮಕಥಾಗಾರ್ತಿಯರ ವೈಯಕ್ತಿಕ ಬದುಕಿನ ವಿವರಗಳು.** ಇದರ ಒಳ ಉಪ ಅಧ್ಯಾಯದಲ್ಲಿ ೭.೧.೧ ಬಾಲ್ಯ, ೭.೧.೨ ಹರೆಯ ಮತ್ತು ೭.೧.೩ ದಾಂಪತ್ಯ ಮೊದಲಾದ ವಿಷಯಗಳನ್ನು ಕನ್ನಡ ಮಹಿಳಾ ಆತ್ಮಕಥೆಗೂ ಅನುವಾದಿತ ಮಹಿಳಾ ಆತ್ಮಕಥೆಯನ್ನು ಹೋಲಿಕೆ ಮಾಡಿ, ಯಾರ ಬಾಲ್ಯ, ಹರೆಯ ಮತ್ತು ದಾಂಪತ್ಯ ಉತ್ತಮವಾಗಿತ್ತು, ಸಂತೋಷದಿಂದ ಕೂಡಿತ್ತು. ಯಾರ ಬಾಲ್ಯ, ಹರೆಯ ಮತ್ತು ದಾಂಪತ್ಯ ಉತ್ತಮವಾಗಿರಲಿಲ್ಲ. ಅದಕ್ಕೆ ಕಾರಣಗಳೇನು? ಅಂತಹ ಕಷ್ಟಪರಂಪರೆಯ ನಡುವೆಯೂ ಅವರು ಬದುಕಿನ ಕುರಿತಾಗಿ ತೋರಿದ ಧನಾತ್ಮಕ ಅಂಶವೇನು? ಮೊದಲಾದ ವಿಷಯಗಳ ಕುರಿತು ಚರ್ಚಿಸಲಾಗಿದೆ. **ಉಪ ಅಧ್ಯಾಯ ೭.೨ ಆತ್ಮಕಥಾಗಾರ್ತಿಯರ ಸಾಂಸ್ಕೃತಿಕ ಬದುಕಿನ ವಿವರಗಳು.** ಇದರ ಒಳ ಅಧ್ಯಾಯದಲ್ಲಿ ೭.೨.೧ ರಲ್ಲಿ ಸಮಾಜ– ಇದು ಆತ್ಮಕಥಾಗಾರ್ತಿರ ಮೇಲೆ ಪ್ರಭಾವ ಬೀರಿದ, ಪ್ರಭಾವಿಸಿದೆ ಮತ್ತು ಅವರ ಆತ್ಮಕಥೆಗಳಲ್ಲಿ ಸಮಾಜದ ಪ್ರತಿನಿಧಿಕರಣದ ಕುರಿತು ಚರ್ಚೆ ಮಾಡಲಾಗಿದೆ. ಅವರ ಸುತ್ತ ೭.೨.೨ ರಲ್ಲಿ ಸಂಸ್ಕೃತಿ– ಅವರ ಸಾಂಸ್ಕೃತಿಕ ವಿವರ ೭.೨.೩ ರಲ್ಲಿ ಭಾಷೆ – ಆತ್ಮಕಥಾಗಾರ್ತಿಯರು ಬಳಸಿದ ಭಾಷೆಯ ವೈಶಿಷ್ಟ್ಯತೆಯನ್ನು ಚರ್ಚಿಸಲಾಗಿದೆ. ಉಪ ಅಧ್ಯಾಯ **೭.೩ ಆತ್ಮಕಥಾಗಾರ್ತಿಯರು ಎದುರಿಸಿದ ಸಮಸ್ಯೆಗಳು ಸವಾಲುಗಳು–**೭.೩.೧. ಕೌಟುಂಬಿಕ ಸಮಸ್ಯೆಗಳು, ೭.೩.೨. ಸಾಮಾಜಿಕ ಸಮಸ್ಯೆಗಳು**,** ೭.೩.೩. ಧಾರ್ಮಿಕ ಸಮಸ್ಯೆಗಳು, ೭.೩.೪. ವೃತ್ತಿಯಲ್ಲಿನ ಸಮಸ್ಯೆಗಳು, ೭.೩.೫. ಸಾಹಿತ್ಯಿಕ ಸಮಸ್ಯೆಗಳು– ಈ ಎಲ್ಲಾ ಸಮಸ್ಯೆಗಳು ಸವಾಲುಗಳು ಎದುರಾದರೂ ಅದನ್ನು ಮೀರಿ ಬದುಕನ್ನು ಕಟ್ಟಿಕೊಂಡ ಅವರ ಧೈರ್ಯ, ಆತ್ಮಸ್ಥೈರ್ಯ, ಬದುಕಿನ ಕುರಿತಾದ ಪ್ರೀತಿ ಇವೆಲ್ಲಾ ವಿಚಾರಗಳನ್ನು ಇಲ್ಲಿ ಚರ್ಚಿಸಲಾಗಿದೆ

ಅಧ್ಯಾಯ ೮ ಸಮಾರೋಪ

ಇದರಲ್ಲಿ **ಉಪ ಅಧ್ಯಾಯ ೮.೧ ರಲ್ಲಿ ಅಧ್ಯಯನದ ಫಲಿತ**ಗಳನ್ನು ನೀಡಲಾಗಿದೆ.

'ಸ್ವತಂತ್ರ ಮತ್ತು ಅನುವಾದಿತ ಮಹಿಳಾ ಆತ್ಮಕಥೆಗಳ ತೌಲನಿಕ ಅಧ್ಯಯನ' ಎಂಬ ಈ ಅಧ್ಯಯನದ ಮುಕ್ತಾಯದಲ್ಲಿ ಕಾಣುವ ಕೆಲವು ಪ್ರಮುಖ ಅಂಶಗಳನ್ನು ಗಮನಿಸಬಹುದು.

೧. ಕನ್ನಡ ಮತ್ತು ಅನುವಾದಿತ ಮಹಿಳಾ ಆತ್ಮಕಥೆಗಳಲ್ಲಿ ಆತ್ಮಕಥಾಗಾರ್ತಿಯರ ಬಾಲ್ಯವನ್ನು ಗಮನಿಸಿದಾಗ ಬಹುತೇಕರ ಬಾಲ್ಯವು ಕಹಿ ಅನುಭವಗಳಿಂದ ಕೂಡಿದೆ. ತಮ್ಮ ಕೌಟುಂಬಿಕ ಸಮಸ್ಯೆಯನ್ನು ಹೆಚ್ಚು ನೇರವಾಗಿ ಹೆಣ್ಣುಮಕ್ಕಳು ಅನುಭವಿಸಿದರು. ಕನ್ನಡದ ಆತ್ಮಕಥಾಗಾರ್ತಿರು ಮುಖ್ಯವಾಗಿ ಬಾಲ್ಯದಲ್ಲಿ ಬಡತನವನ್ನು, ಆರ್ಥಿಕ ಸಂಕಷ್ಟವನ್ನು ಎದುರಿಸಿದ್ದು ಕಾಣಬಹುದು. ಅನ್ಯಭಾಷೆಯ ಆತ್ಮಕಥಾಗಾರ್ತಿಯಲ್ಲಿ ಹಲವಾರು ಶ್ರೀಮಂತರು, ಅನುಕೂಲಸ್ಥ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಆದರೆ ಇವರು ಬಾಲ್ಯದಲ್ಲಿ ಎದುರಿಸಿದ ಸಮಸ್ಯೆಯು ಕನ್ನಡದ

ಆತ್ಮಕಥಾಗಾರ್ತಿಯರಿಗಿಂತ ಭಿನ್ನವಾದುದು. ಇವರ ಪೋಷಕರು ಸಮಾಜದ ಪ್ರತಿಷ್ಟಿತ ವ್ಯಕ್ತಿಗಳಾಗಿದ್ದು, ತಮ್ಮ ಕೆಲಸ ಕಾರ್ಯಗಳಲ್ಲೇ ತೊಡಗಿಕೊಂಡು ಮಕ್ಕಳನ್ನು ಮನೆಯ ಕೆಲಸದಾಳುಗಳ ಹತ್ತಿರಬಿಟ್ಟು ಹೋಗುತ್ತಿದ್ದರು. ಇದರಿಂದ ಅನ್ಯಭಾಷೆಯ ಆತ್ಮಕಥಾಗಾರ್ತಿಯರಲ್ಲಿ ಅನೇಕರು ಪೋಷಕರ ಪ್ರೀತಿ,ವ ಾತ್ಸಲ್ಯ, ಮಮತೆಯನ್ನು ಕಾಣದೇ ಏಕಾಂಗಿತನ, ಅನಾಥಪ್ರಜ್ಞೆ, ಹತಾಶೆಯಿಂದಲೇ ಬಾಲ್ಯವನ್ನು ಕಳೆದರು.

೨. ಕನ್ನಡ ಮತ್ತು ಅನ್ಯ ಭಾಷೆಯ ಆತ್ಮಕಥೆಗಾರ್ತಿಯರ ಹರೆಯವು ಕೂಡ ನೋವಿನಿಂದ ಕೂಡಿತ್ತು. ಹರೆಯದ ಆಸೆ, ಆಕಾಂಕ್ಷೆಗಳನ್ನು ಅನುಭವಿಸುವ ಹೊತ್ತಿನಲ್ಲಿ ಬಾಳ ಬದುಕಿನ ನೊಗಕ್ಕೆ ತಮ್ಮ ಕೊರಳನ್ನು ನೀಡಬೇಕಾಯಿತು. ಹರೆಯದ ಆಸೆ, ಕನಸುಗಳ ಕುರಿತಂತೆ ಕನ್ನಡದ ಆತ್ಮಕಥಾಗಾರ್ತಿಯರಲ್ಲಿ ಅನುಪಮಾ ನಿರಂಜನ ಅವರನ್ನು ಹೊರತುಪಡಿಸಿ ಉಳಿದವರ ಆತ್ಮಕಥೆಯಲ್ಲಿ ವಿವರಗಳು ಇಲ್ಲ. ಅನುಪಮಾ ನಿರಂಜನ ಅವರಿಗೆ ಹರೆಯವು ಭಯ, ಆತಂಕವನ್ನು ತಂದಿತು. ಆದರೆ ಅನ್ಯಭಾಷೆಯ ಆತ್ಮಕಥಾಗಾರ್ತಿಯರಲ್ಲಿ ಮುಖ್ಯವಾಗಿ ಕಮಲಾ ದಾಸ್ ಮತ್ತು ಅಮೃತಾ ಪ್ರೀತಂ ಅವರ ಆತ್ಮಕಥೆಗಳಲ್ಲಿ ಹರೆಯದ ಕನಸು, ಆಕಾಂಕ್ಷೆಗಳು ಹೆಚ್ಚು ಕಾಡಿರುವುದನ್ನು ಕಾಣಬಹುದು. ಹರೆಯವು ಬಂದು ಬಾಲ್ಯದ ಮುಗ್ಧತೆಯನ್ನು ನಾಶಮಾಡಿದರೂ ಅದು ತಮ್ಮ ಮುಂದಿನ ಬದುಕಿನುದ್ದಕ್ಕೂ ಸಾಹಿತ್ಯದಲ್ಲಿ ಕಾಣಿಸಿಕೊಂಡಿದ್ದು, ಅದಕ್ಕೆ ತಾವು ಋಣಿಯಾಗಿದ್ದೇವೆ ಎಂಬ ಮಾತು ಹರೆಯನ್ನು ಸ್ವಾಗತಿಸಿದ್ದನ್ನು ಕಾಣಬಹುದು.

೩. ಮಹಿಳಾ ಆತ್ಮಕಥಾಗಾರ್ತಿಯರಲ್ಲಿ ಹಲವರ ದಾಂಪತ್ಯವು ಕಹಿ ಅನುಭವವನ್ನು ಕೂಡಿದ್ದನ್ನು ಕಾಣಬಹುದು. ಕನ್ನಡದ ಆತ್ಮಕಥಾಗಾರ್ತಿಯರಲ್ಲಿ ಪ್ರತಿಭಾ ನಂದಕುಮಾರ್,ಉಮಾಶ್ರೀ ಮತ್ತು ವೀಣಾಧರಿ ಅವರ ದಾಂಪತ್ಯವು ನೋವಿನಿಂದ ಕೂಡಿತ್ತು. ಗಂಡಂದಿರ ಶೋಷಣೆ, ದಬ್ಬಾಳಿಕೆ, ದೈಹಿಕ, ಮಾನಸಿಕ ಹಿಂಸೆ, ಹೊಣೆಗೇಡಿತನವು ಅತಿಶಯವಾಗಿತ್ತು. ಗಂಡನ ಮನೆಯಲ್ಲಿ ತೀವ್ರವಾದ ಬಡತನ, ಹಸಿವೆಯನ್ನು ಕಾಣಬೇಕಾಯಿತು. ಗಂಡಂದಿರ ದುಡಿಮೆಯಿಲ್ಲದೇ ಮನೆಯ ನಿರ್ವಹಣೆ ಕಷ್ಟವಾದಾಗ ತಾವೇ ದುಡಿದು ಕುಟುಂಬವನ್ನು ನಿರ್ವಹಿಸಿದವರು ಇವರು. ಈ ಮೂವರನ್ನು ಹೊರತುಪಡಿಸಿ ಬಹುತೇಕರ ದಾಂಪತ್ಯವು ಉತ್ತಮವಾಗಿತ್ತು. ಅನ್ಯಭಾಷೆಯ ಸುನೀತಾ ದೇಶಪಾಂಡೆ ಮತ್ತು ಗೋದಾವರಿ ಪರುಳೇಕರ್ ಇವರನ್ನು ಹೊರತುಪಡಿಸಿ ಉಳಿದ ಆತ್ಮಕಥಾಗಾರ್ತಿಯರ ದಾಂಪತ್ಯವನ್ನು ಗಮನಿಸಿದಾಗ ಬಹುತೇಕರ ದಾಂಪತ್ಯವು ವಿಷಮವಾಗಿತ್ತು. ಕಮಲಾದಾಸ್, ಅಮೃತಾ ಪ್ರೀತಂ, ಅಜಿತ್ ಕೌರ್, ಮಾಧವಿ ದೇಸಾಯಿ, ನಳಿನಿ ಜಮೀಲಾ ಮತ್ತು ಬೇಬಿ ಹಾಲ್ದಾರ್ ಇವರ ದಾಂಪತ್ಯವು ವಿಷಮವಾಗಿತ್ತು. ಕಮಲಾ ದಾಸ್ ಮತ್ತು ಅಮೃತಾ ಪ್ರೀತಂ ಇವರು ತಮ್ಮ ಗಂಡಂದಿರಲ್ಲಿ ನೈಜವಾದ ಪ್ರೀತಿಯನ್ನು ದೊರೆಯದೇ ಹೋದ ಭಾವನಾತ್ಮಕವಾಗಿ ಹೊಂದಾಣಿಕೆಯಾಗದೇ ದಾಂಪತ್ಯವು ಹೆಚ್ಚುಕಾಲ ಬಾಳದೇ ಹೋಯಿತು. ಅನ್ಯಭಾಷೆಯ ಆತ್ಮಕಥಾಗಾರ್ತಿಯರಲ್ಲಿ ನಳಿನಿ ಜಮೀಲಾ ಅವರನ್ನು ಹೊರತುಪಡಿಸಿ ಅನೇಕರ ಗಂಡಂದಿರು ಉತ್ತಮವಾದ ಉದ್ಯೋಗದಲ್ಲಿದ್ದರು, ಸಮಾಜದ ಪ್ರತಿಷ್ಠಿತ ವ್ಯಕ್ತಿಗಳು ಆಗಿದ್ದರು. ಉತ್ತಮವಾದ ದಾಂಪತ್ಯ ನಡೆಸಲು ಹಣಕ್ಕಿಂತ ಇಬ್ಬರ ನಡುವಿನ ಪ್ರೀತಿ, ವಿಶ್ವಾಸ, ನಂಬಿಕೆ, ಪರಸ್ಪರ ಸಹಕಾರ, ಕಾಳಜಿ, ಹೊಂದಾಣಿಕೆ, ತ್ಯಾಗ– ಇತ್ಯಾದಿ ಗುಣಗಳು ಅವಶ್ಯವೆನ್ನುವುದನ್ನು ಮನಗಾಣಿಸುತ್ತವೆ.

೪. ಆತ್ಮಕಥಾಗಾರ್ತಿಯರ ಕೌಟುಂಬಿಕ ಬದುಕು ಮತ್ತು ಸಾರ್ವಜನಿಕ ಬದುಕು –ಇದರಲ್ಲಿ ಕೌಟುಂಬಿಕ ಬದುಕಿನ ಕುರಿತು ಕನ್ನಡದ ಮತ್ತು ಅನ್ಯಭಾಷೆಯ ಆತ್ಮಕಥಾಗಾರ್ತಿರಿಬ್ಬರೂ ಹೇಳಿಕೊಂಡರೂ ತೀರ ವೈಯುಕ್ತಿಕವಾದ, ಖಾಸಗಿಯಾದ ವಿಚಾರಗಳನ್ನು ಅನ್ಯಭಾಷೆಯ ಆತ್ಮಕಥೆಗಳಲ್ಲಿ ಕೇಳಿಕೊಂಡಿದ್ದಾರೆ. ಕನ್ನಡದಲ್ಲಿ ಪ್ರತಿಭಾ ನಂದಕುಮಾರ್ ಅವರು ತಮ್ಮ ಖಾಸಗಿ ಬದುಕಿನ ಕುರಿತಾಗಿ ಹೇಳಿದ್ದು, ಅದರಲ್ಲಿ ಮೂರ್ನಾಲ್ಕು ಜನರೊಂದಿಗೆ ಭಾವಾನಾತ್ಮಕ ಪ್ರೀತಿಯನ್ನು ಹೊಂದಿದ್ದನ್ನು ಮುಚ್ಚುಮರೆಯಿಲ್ಲದೇ ಹೇಳಿಕೊಂಡಿದ್ದಾರೆ. ಅವರ ಹೆಸರನ್ನು ಹೇಳದೇ 'ಅವನು' 'ಅವರು' ಎಂದಿಷ್ಟೇ ಹೇಳಿದ್ದಾರೆ. ಇದು ಕನ್ನಡದ ಒಂದು ದಶಕದ ಹಿಂದೆ ರಚನೆಯಾಗಿದ್ದು ಆಧುನಿಕ ಮಹಿಳೆ ಅವಕಾಶಗಳಿಗೆ ಮುಕ್ತವಾಗಿ ತೆರೆದುಕೊಳ್ಳುತ್ತಿರುವ ಸೂಚನೆಯಿದೆ. ಅನ್ಯಭಾಷೆಯ ಆತ್ಮಕಥಾಗಾರ್ತಿಯಾಗಿರುವ ಕಮಲಾ ದಾಸ್ ಅವರು ಹರೆಯದಲ್ಲಿ ತಮ್ಮ ದೈಹಿಕ ಬದಲಾವಣೆ ಮತ್ತು ಪ್ರೀತಿ, ಪ್ರೇಮದ ಕುರಿತು, ಡ್ರಾಯಿಂಗ್ ಮಾಸ್ಟರ್ ಮೇಲೆ ಮನಸ್ಸಾಗಿ ಮಳೆಯಲ್ಲಿ ನೆನೆಯುತ್ತ ಅವರ ಮನೆಗೆ ಹೋಗಿದ್ದು, ಶಾಲಾದಿನದಲ್ಲಿ ಅಧ್ಯಾಪಕರಿಂದ ಪುಂಡಾಟವಾಡಿ ಪೆಟ್ಟು ತಿನ್ನುತ್ತಿದ್ದ ಆ ಹುಡುಗನ ಪುಂಡಾಟವು ಇಷ್ಟವಾಗಿ ಆತನನ್ನು ಮನಸಾರೆ ಪ್ರೀತಿಸಿದ್ದು, ಅದನ್ನು ತಾವು ಮನೆಯಲ್ಲಿ ಹೇಳಿದಾಗ ಮನೆಯವರಿಂದ ಬೈಸಿಕೊಂಡಿದ್ದು, ಮಹಾಭಾರತದಲ್ಲಿ ಬರುವ ಕುಂತಿಯು ಸೂರ್ಯನಲ್ಲಿ ತನಗೊಂದು ಮಗು ಬೇಡಿದಂತೆ ಇವರು ಕೂಡ ಹರೆಯದಲ್ಲಿ ಸೂರ್ಯನಲ್ಲಿ ತನಗೂ ಮಗುವೊಂದು ಬೇಕು ಎಂದು ಬೇಡಿದ್ದನ್ನು ಕಾಣಬಹುದು. ಅವರು ಹೇಳುವಂತೆ "ಸ್ನಾನದ ಬಳಿಕ ಕೋಣೆಯಲ್ಲಿ ಸೂರ್ಯನಿಗೆದುರು ಬೆತ್ತಲಾಗಿ ನನಗೂ ಒಂದು ಮಗೂ ಕೊಡಲೇಬೇಕೆಂದು ಬೇಡಿಕೊಂಡೆ. ನನ್ನದೆಲ್ಲವೂ ನಿನಗೆ ಅರ್ಪಿಸುತ್ತೇನೆ. ನನ್ನ ಉಬ್ಬಿದ ಕೈಕಾಲುಗಳು, ಅಲೆ ಅಲೆಯಾದ ಕೂದಲು, ನನ್ನ ದುಂಡು ಸ್ತನಗಳು ಎಲ್ಲವನ್ನೂ ತೆಗೆದುಕೋ. ನನಗೊಂದು ಮಗು ಕೊಡು ಎಂದು ಬೇಡಿದೆ" (ಕಮಲಾ ದಾಸ್, ೧೯೯೫, ಪು೫೭) ಎಂದು ಹೇಳಿಕೊಳ್ಳುವ ಪ್ರಾಮಾಣಿಕತೆ ಮೆಚ್ಚುವಂತದ್ದು. ಅಲ್ಲದೇ ಹಾಸ್ಟೆಲ್ ಗೆಳತಿಯೊಬ್ಬಳಿಗೆ ಮನಸೋತು ಆಕೆಯೊಂದಿಗೆ ರೈಲಿನಲ್ಲಿ ಪ್ರಯಾಣಿಸುವಾಗ ಆಕೆ ಬಂದು ಇವರ ಜೊತೆ ಮಲಗಿ ಗಟ್ಟಿಯಾಗಿ ತಬ್ಬಿಕೊಂಡು ತುಟಿಯನ್ನು ಚುಂಬಿಸಿದಾಗ ಇವರು ಸಹಕರಿಸಿದ್ದು ಸಲಿಂಗರತಿಯ ಕುರಿತು, ಮದುವೆಯ ನಂತರ ಇಟಾಲಿಯನ್ ಯುವಕ ಕಾರ್ಲೋ ಎಂಬ ಪ್ರಿಯಕರನ ಜೊತೆಗೆ ಭಾವಾನಾತ್ಮಕ ಸಂಬಂಧವನ್ನು ಇಟ್ಟುಕೊಂಡಿದ್ದು ಆತನ ಜೊತೆಗೆ ಪಾರ್ಟಿ, ಸುತ್ತಾಟ ಮಾಡಿದ್ದು, ಪಾರ್ಟಿಗಳಲ್ಲಿ ಬಿಯರ್, ವಿಸ್ಕಿ ಕುಡಿಯುತ್ತಿದ್ದನ್ನು, ವಿವಾಹಬಾಹಿರ ಪ್ರೀತಿಯನ್ನು ಪಡೆಯಲು ಪ್ರಯತ್ನಿಸಿದ್ದು ಇತ್ಯಾದಿ ವಿಚಾರಗಳನ್ನು ಮುಕ್ತವಾಗಿ ನಿರ್ಭಿತಿಯಿಂದ ಹೇಳಿಕೊಳ್ಳುವ ಧೈರ್ಯವನ್ನು ಕಾಣಬಹುದು. ಅದೇ ರೀತಿ ಅಮೃತಾ ಪ್ರೀತಂ ಅವರು ಸಾಹಿರ್ ಲುಧಿಯಾನ್ವಿ, ಸಜ್ಜಾದ್ ಹೈದರ್ ಮತ್ತು ಇಮ್ರೋಜ್ ಎಂಬ ತಮ್ಮ ಪ್ರಿಯಕರರ ಹೇಳಿಕೊಂಡಿದ್ದಾರೆ. ಕನ್ನಡದ ಆತ್ಮಕಥಾಗಾರ್ತಿಯರಲ್ಲಿ ಸಾರ್ವಜನಿಕ ಬದುಕಿನ ವಿವರಗಳು, ಅಜಿತ್ ಕೌರ್ ಅವರು ಹರೆಯಲ್ಲಿ ಇಂಗ್ಲೀಷ್ ಅಧ್ಯಾಪಕರಾಗಿದ್ದ ಬಲದೇವ್ ಅವರೊಂದಿಗಿನ ಪ್ರೀತಿ, ಒಡನಾಟ, ತಿರುಗಾಟವನ್ನು, ನಳಿನಿ ಜಮೀಲಾ ಅವರು ತಾವು ಸೆಕ್ಸ್ ವರ್ಕರ್ ಆಗಿದ್ದು, ಆ ವೇಳೆಯಲ್ಲಿ ಗಿರಾಕಿಗಳಾಗಿ ಬಂದ ಕೋಯಕ್ಕ ಮತ್ತು ಹಮೀದ್ ಅವರ ಜೊತೆ ಹಲವು ವರ್ಷ ಬಾಳುವೆ ನಡೆಸಿದ್ದು ಇತ್ಯಾದಿ ವಿಚಾರಗಳನ್ನು ಮುಕ್ತವಾಗಿ, ಧೈರ್ಯವಾಗಿ ಹೇಳಿಕೊಂಡಿದ್ದಾರೆ. ಇದು ಅನ್ಯಭಾಷೆಯ ಆತ್ಮಕಥಾಗಾರ್ತಿಯರಲ್ಲಿ ಜಾಸ್ತಿಯೆನ್ನಬಹುದು.

೫. ಕನ್ನಡ ಮತ್ತು ಅನ್ಯಭಾಷೆಯ ಮಹಿಳಾ ಆತ್ಮಕಥೆಗಳನ್ನು ಗಮನಿಸಿದಾಗ ಕೌಟುಂಬಿಕ ಸಂಬಂಧಕ್ಕೆ, ಕೌಟುಂಬಿಕ ಪ್ರೀತಿಗೆ, ಮಾನವೀಯ ಸಂಬಂಧಗಳಿಗೆ ಹೆಚ್ಚಿನ ಮಹತ್ವವನ್ನು ನೀಡಿರುವುದನ್ನು ಕಾಣಬಹುದು. ಕನ್ನಡದ ಆತ್ಮಕಥಾಗಾರ್ತಿಯಲ್ಲಿ ಕೌಟುಂಬಿಕ ಪ್ರೀತಿ, ಹೊಂದಾಣಿಕಯ ಮನೋಭಾವ ಎದ್ದು ಕಾಣುತ್ತದೆ. ಆದರೆ ಅನ್ಯಭಾಷೆಯ ಆತ್ಮಕಥೆಗಳಲ್ಲಿ ಈ ಅಂಶವು ತುಸು ಕಡಿಮೆಯೇ ಎನ್ನಲಡ್ಡಿಯಿಲ್ಲ.

೬. ಮಹಿಳಾ ಆತ್ಮಕಥೆಗಳು ಮುಖ್ಯವಾಗಿ ಭಾವನಾತ್ಮಕವಾದ ಅಂಶವನ್ನು ಒಳಗೊಂಡಿರುವ ಬರವಣಿಗೆಯೆನ್ನಬಹುದು. ಬಾಲ್ಯದಲ್ಲಿ ತಂದೆತಾಯಿ, ಪೋಷಕರ ಪ್ರೀತಿ, ಮದುವೆಯ ನಂತರ ಗಂಡನ ಪ್ರೀತಿ, ಆಮೇಲೆ ಮಕ್ಕಳ ಪ್ರೀತಿಯ ಹುಡುಕಾಟದಲ್ಲಿ ಇರುವುದನ್ನು ಕಾಣಬಹುದು. ಕನ್ನಡದ ಆತ್ಮಕಥಾಗಾರ್ತಿಯರಲ್ಲಿ ಈ ಬಗೆಯ ಹುಡುಕಾಟದ ತೀವ್ರತೆಯು ಅನ್ಯಭಾಷೆಯ ಆತ್ಮಕಥಾಗಾರ್ತಿಯರಲ್ಲಿ ಹೆಚ್ಚು ಎನ್ನಬಹುದು.

೭. ಕನ್ನಡದ ಆತ್ಮಕಥಾಗಾರ್ತಿಯರು ಸಂಪ್ರದಾಯಶೀಲರು. ದಾಂಪತ್ಯ ಜೀವನದಲ್ಲಿ ಕೌಟುಂಬಿಕವಾಗಿ ಎಷ್ಟೇ ಶೋಷಣೆಯಾದರೂ ಅದನ್ನು ಸಹಿಸಿಕೊಂಡು ಬದುಕುವ ಪ್ರಯತ್ನ ಮಾಡಿದವರು. ಕನ್ನಡದಲ್ಲಿ ಸಂಪ್ರದಾಯಿಕ ಹೆಚ್ಚು ಗೃಹಿಣಿಯರು ಕಂಡುಬರುತ್ತಾರೆ. ಆದರೆ ಅನ್ಯಭಾಷೆಯ ಆತ್ಮಕಥೆಗಳಲ್ಲಿ ದಾಂಪತ್ಯದಲ್ಲಿ ಭಾವನಾತ್ಮಕವಾಗಿ ಹೊಂದಾಣಿಕೆಯಾಗದೇ ಹೋದರೂ ದಾಂಪತ್ಯದಿಂದ ಹೊರಬಂದು ತಮ್ಮದೇ ಆದ ಅಸ್ತಿತ್ವವನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿರುವುದು ಮುಖ್ಯವೆನಿಸುತ್ತದೆ. ಇಲ್ಲಿ ಸಂಪ್ರದಾಯಿಕ ಗೃಹಿಣಿಯನ್ನೆವ ಚೌಕಟ್ಟನ್ನು ಮೀರಿರುವುದನ್ನು ಕಾಣಬಹುದು.

೮. ಕನ್ನಡದ ಆತ್ಮಕಥಾಗಾರ್ತಿಯರಲ್ಲಿ ಹೆಚ್ಚಾಗಿ ತಮ್ಮ ಬಡತನ, ಶೋಷಣೆಯ ಕುರಿತು ತಾವೇ ಮರುಕವನ್ನು, ಹಾಗೇ ತಾವು ಮಾಡಿದ ಕಾರ್ಯಕ್ಕೆ ತಾವೇ ಸಮಜಾಯಿಸಿ ಕೊಡುವುದನ್ನು ಮಾಡಿದ್ದಾರೆ. ಅಂದರೆ ಇಲ್ಲಿ 'ಸ್ವಾನುಕಂಪ' 'ಸ್ವಸಮರ್ಥನೆ' ಎದ್ದು ಕಾಣುವ ಅಂಶವಾದರೇ ಅನ್ಯಭಾಷೆಯ ಆತ್ಮಕಥಾಗಾರ್ತಿಯರಲ್ಲಿ ತಮ್ಮೊಳಗಿನ ಶಕ್ತಿ, ಸಾಮರ್ಥ್ಯದ, ಮಿತಿಗಳ ಕುರಿತು ಹೇಳಿಕೊಳ್ಳುವ 'ಸ್ವಶೋಧ' 'ಆತ್ಮವಿಮರ್ಶೆ, 'ತನ್ನತನದ ಹುಡುಕಾಟ'ದ ಚಿಂತನೆಯನ್ನು ಕಾಣಬಹುದು.

೯. ಆತ್ಮಕಥೆಯಲ್ಲಿ ಎದ್ದು ಕಾಣುವ ಅಂಶಗಳಲ್ಲಿ ಅವರ ಆತ್ಮವಿಶ್ವಾಸವು, ಧೈರ್ಯ ಮುಖ್ಯವಾಗುತ್ತದೆ. ಸೋಲಿಗೆ ಹೆದರದೇ ಬಂದ ಸಂಕಷ್ಟವನ್ನು ಎದುರಿಸಿ ಗೆಲ್ಲುವೇ ಎನ್ನುವ ಹಠವು ಅವರಲ್ಲಿನ ಜೀವನ್ಮುಖಿಯಾದ ಧನಾತ್ಮಕವಾದ ಚಿಂತನೆಯಾಗಿದೆ.

೧೦. ಲಿಂಗಾಧಾರಿತ ಶೋಷಣೆಯನ್ನು, ಅಸಮಾನತೆಯ ಕುರಿತ ಅಸಮಾಧಾನವು ಕೂಡ ಆತ್ಮಕಥೆಯಲ್ಲಿ ಕಾಣುವ ಅಂಶವಾಗಿದೆ. ಈ ತೀವ್ರತೆಯು ಅನ್ಯಭಾಷೆಯ ಆತ್ಮಕಥಾಗಾರ್ತಿಯರಲ್ಲಿ ಹೆಚ್ಚು ಪ್ರಖರವಾಗಿದೆ. ಆದರೆ ಎಲ್ಲೂ ಕೂಡ ದ್ವೇಷವನ್ನು ಪ್ರಕಟಪಡಿಸಿಲ್ಲ.

೧೧. ಮಹಿಳಾ ಆತ್ಮಕಥೆಯನ್ನು ಗಮನಿಸಿದಾಗ ಸಾರ್ವಜನಿಕ ಬದುಕಿನಲ್ಲಿ ಸಮಾನತೆಗೆ ಹೋರಾಟ ನಡೆಸಿದವರು ಕೌಟುಂಬಿಕ ಬದುಕಿನಲ್ಲಿ ಸಮಾನತೆಗೆ ಹೋರಾಟ ನಡೆಸಿದಕ್ಕಿಂತ ಹೊಂದಾಣಿಕೆ ಮಾಡಿಕೊಂಡವರ ಸಂಖ್ಯೆಯೇ ಹೆಚ್ಚುಯೆನ್ನಬಹುದು.

೧೨. ವಿವಾಹವೆನ್ನುವುದು ಗಂಡ–ಹೆಣ್ಣುಗಳ ನಡುವಿನ ಪವಿತ್ರವಾದ ಬಂಧ. ಇಬ್ಬರಿಗೂ ಸಮಾನವಾದ ಪ್ರಾತಿನಿಧ್ಯವಿದೆಯೆಂದೂ ಹೇಳಲಾಗುತ್ತಿದ್ದರೂ ಇದು ವಾಸ್ತವದಲ್ಲಿ ಹೆಚ್ಚು ಶೋಷಣಾಕಾರಿ ಪರಿಣಮಿಸಿದೆ. ಹೆಣ್ಣಿನ ಸ್ವಾತಂತ್ರ್ಯ, ಸಮಾನತೆ, ಅಸ್ತಿತ್ವದ ಮೇಲೆ ಮಾರಕವಾಗಿದೆ ಎನ್ನಬಹುದು. ಇಂದಿನ ಸಂಕ್ರಮಣದ ಸಂದರ್ಭದಲ್ಲೂ ಮಹಿಳೆಯರು ಸ್ವಲ್ಪ ಪ್ರಮಾಣದಲ್ಲಿ ಸ್ವಾತಂತ್ರ್ಯವನ್ನು ಸಾಧಿಸಿದ್ದಾಳೆ ಎನ್ನಲಾದರೂ ಇನ್ನೂ ಅನೇಕರು ಸಂಪ್ರದಾಯದ ಅಧೀನಳಾಗಿಯೇ ಉಳಿದಿದ್ದು ಹೊರಬರಲಾರದ ಸ್ಥಿತಿಯಲ್ಲಿ ಇದ್ದಾರೆ.

೧೩. ಆತ್ಮಕಥಾಗಾರ್ತಿಯರು ತಮ್ಮ ಕೌಟುಂಬಿಕ ಬದುಕು ಮತ್ತು ಸಾರ್ವಜನಿಕ ಬದುಕಿನಲ್ಲಿ ಎದುರಿಸಿದ ಮಾನಸಿಕ ತಳಮಳ, ತಲ್ಲಣಗಳು, ಅಸಹಾಯಕತೆಗಳು, ಸಂಕಷ್ಟಗಳು, ಪಿತೃ ಪ್ರಧಾನ ಸಮಾಜದಲ್ಲಿನ ಲೋಪದೋಷ, ಮನುಷ್ಯನಲ್ಲಿನ ಸಣ್ಣತನಗಳು ಆತ್ಮಕಥೆಯ ಒಳಗಡೆ ಬಹುಸೂಕ್ಷ್ಮವಾಗಿ ನಿರೂಪಿತವಾಗಿದೆ.

೧೪. ಆಧುನಿಕ ಶಿಕ್ಷಣವು ಮಹಿಳೆಯರಲ್ಲಿ ಆತ್ಮವಿಶ್ವಾಸ, ಸ್ವಾಭಿಮಾನ, ಸ್ವಚಿಂತನೆ, ಸ್ವತಂತ್ರ ಮನೋಭಾವದ ಬೆಳವಣಿಗೆಗೆ ಪೂರಕವಾಗಿದೆ ಎಂಬುದರ ಜೊತೆಗೆ ಉದ್ಯೋಗ ನೀಡುವುದರ ಮೂಲಕ ಆರ್ಥಿಕ ದೃಢತೆಯನ್ನು ನೀಡುತ್ತದೆ ಎಂಬ ನಂಬಿಕೆ ಬಲವಾಗಿದೆ.

೧೫. ಮಹಿಳಾ ಆತ್ಮಕಥೆಗಳಲ್ಲಿ ಕಾಣುವ ಇನ್ನೊಂದು ಅಂಶ ಸ್ವಗತ. ತಾವು ಹೇಳಬೇಕಾದ ವಿಚಾರ, ಸಂಗತಿಯನ್ನು ಆ ಸಂದರ್ಭದಲ್ಲಿ ಹೇಳಲಾಗದೇ ಕೊರಗಿದವರೇ ಜಾಸ್ತಿ. ಇದು ಕನ್ನಡ ಮತ್ತು ಅನ್ಯಭಾಷೆಯ ಆತ್ಮಕಥೆಯಲ್ಲಿಯೂ ಸಾಮಾನ್ಯವಾಗಿ ಕಾಣುವ ಅಂಶವಾಗಿದೆ.

೧೬. ಮಹಿಳಾ ಆತ್ಮಕಥೆಗಳಲ್ಲಿ ಕಾಣುವ ಇನ್ನೊಂದು ಅಂಶವೆಂದರೆ ಕೌಟುಂಬಿಕ ಆವರಣದ ಒಳಗೆ ಹೆಚ್ಚು ಸುತ್ತುವುದನ್ನು ಕಾಣಬಹುದು. ತಮ್ಮ ಬದುಕಿನೊಂದಿಗೆ ತಂದೆ,ತಾಯಿ, ಗಂಡ ಮಕ್ಕಳ ಕುರಿತಾದ ವಿಚಾರಗಳು ಹೆಚ್ಚು ಆತ್ಮಕಥೆಯ ಒಳಗೆ ಮಹತ್ವ ಪಡೆದಿರುವುದನ್ನು ಕಾಣಬಹುದು.

೮.೨. ಸಂಶೋಧನಾ ಅಧ್ಯಯನದ ಸಾಧ್ಯತೆಗಳು

ಇಲ್ಲಿಯವರೆಗೆ ನಡೆದ ಸಂಶೋಧನಾ ಅಧ್ಯಯನವನ್ನು ಆಧರಿಸಿಕೊಂಡು ಮುಂದೆ ನಡೆಸಬಹುದಾದ ಸಂಶೋಧನಾ ಅಧ್ಯಯನದ ಸಾಧ್ಯತೆಯನ್ನು ಇಲ್ಲಿ ವಿಶದಪಡಿಸಲಾಗಿದೆ.

- ಲೇಖಕಿಯರ ಆತ್ಮಕಥೆಗಳ ಸ್ವರೂಪಗಳು, ಅವರು ಎದುರಿಸಿದ ಸಮಸ್ಯೆಗಳು ಮತ್ತು ಸವಾಲುಗಳು.
- ಕಲಾವಿದೆಯರ ಆತ್ಮಕಥೆಗಳ ಸ್ವರೂಪಗಳು, ಅವರು ಎದುರಿಸಿದ ಸಮಸ್ಯೆಗಳು ಮತ್ತು ಸವಾಲುಗಳು.
- ದಲಿತ ಮಹಿಳೆಯರ ಆತ್ಮಕಥೆಗಳ ಸ್ವರೂಪಗಳು, ಅವರು ಎದುರಿಸಿದ ಸಮಸ್ಯೆಗಳು ಮತ್ತು ಸವಾಲುಗಳು.
- ಬುಡಕಟ್ಟು ಮಹಿಳೆಯರ ಆತ್ಮಕಥೆಗಳ ಸ್ವರೂಪಗಳು,ಅವರು ಎದುರಿಸಿದ ಸಮಸ್ಯೆಗಳು ಮತ್ತು ಸವಾಲುಗಳು.
- ಪಾಶ್ಚಾತ್ಯ ಮತ್ತು ಭಾರತೀಯ ಮಹಿಳಾ ಆತ್ಮಕಥೆಗಳ ಸ್ವರೂಪ.
- ಮಹಿಳೆ ಮತ್ತು ಪುರುಷ ಆತ್ಮಕಥೆಗಳ ವಸ್ತು ವಿನ್ಯಾಸ.
-

ಅನುಬಂಧ -೧

೧.೧ ಮೂಲ ಆಕರ ಗ್ರಂಥಗಳು

೧. ಅಜಿತ್ ಕೌರ್ (ಮೂಲ) ; ಅಲೆಮಾರಿ, ಅನು: ವಿಜಯಲಕ್ಷ್ಮೀ ಅರಸ್, ಲವ್‌ಲೀನ್ ಜಾಲಿ, ಅಭಿರುಚಿ ಪ್ರಕಾಶನ ಮೈಸೂರು, ೨೦೦೩

೨. ಅಮೃತಾ ಪ್ರೀತಂ (ಮೂಲ) ; ರಶೀದಿ ತಿಕೇಟು, ಅನು: ಹಸನ್ ನಯೀಂ ಸುರಕೋಡ, ಲೋಹಿಯಾ ಪ್ರಕಾಶನ ಬಳ್ಳಾರಿ, ೨೦೦೪

೩. ಅನುಪಮ ನಿರಂಜನ ; ಬರಹಗಾರ್ತಿಯ ಬದುಕು, ಪ್ರಕಾಶಕರು ಡಿ. ವಿ. ಕೆ ಮೂರ್ತಿ ಕೃಷ್ಣಮೂರ್ತಿಪುರಂ ಮೈಸೂರು, ೧೯೯೦

೪. ಅನುಪಮಾ ನಿರಂಜನ ; ನೆನಪು: ಸಿಹಿ-ಕಹಿ, ಪ್ರಕಾಶಕರು ಡಿ. ವಿ. ಕೆ ಮೂರ್ತಿ ಕೃಷ್ಣಮೂರ್ತಿಪುರಂ , ಮೈಸೂರು, ೧೯೮೫

೫. ಉಮಾಶ್ರೀ ; ಬೆಂಕಿ ಬೆಡಗು, ಉಮಾಶ್ರೀ, ಅಹರ್ನಿಶಿ ಪ್ರಕಾಶನ, ಜ್ಞಾನವಿಹಾರ ಬಡಾವಣೆ, ಕಂಟ್ರಿ ಕ್ಲಬ್ ಎದುರು ವಿದ್ಯಾನಗರ, ಶಿವಮೊಗ್ಗ, ೨೦೧೩

೬. ಕಮಲಾ ದಾಸ್ (ಮೂಲ) ; ನನ್ನ ಕತೆ, ಅನು: ಡಾ.ಪೂರ್ಣಿಮಾ ಭಟ್. ಕೆ. ಹೇಮಂತ ಸಾಹಿತ್ಯ, ಬೆಂಗಳೂರು, ೧೯೯೫

೭. ಕಮಲಾ ದಾಸ್ (ಮೂಲ) ; ನೀರ್‌ಮಾದಳ ಹೂಬಿಟ್ಟ ಕಾಲ, ಅನು: ಪಾರ್ವತಿ ಜಿ ಐತಾಳ್, ಮನೋಹರ ಗ್ರಂಥಮಾಲೆ ಧಾರವಾಡ, ೨೦೦೯

೮. ಕಮಲಾ ಸುರಯ್ಯ (ಮೂಲ) ; ಬಾಲ್ಯದ ನೆನಪುಗಳು, ಅನು: ನಾ.ದಾಮೋದರ ಶೆಟ್ಟಿ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ೨೦೦೧

೯. ಗಂಗೂಬಾಯಿ ಹಾನಗಲ್ ; ನನ್ನ ಬದುಕಿನ ಹಾಡು, ಸಾಹಿತ್ಯ ಪ್ರಕಾಶನ, ಸಿಟಿ ಕ್ಲಿನಿಕ್ ಸಂಕೀರ್ಣ, ದಾಜೀಬಾನ ಪೇಟೆ ಹುಬ್ಬಳ್ಳಿ, ೨೦೦೦

೧೦. ಗೋದಾವರಿ ಪರುಳೇಕರ್ (ಮೂಲ) ; ಮಾನವ ಎಚ್ಚೆತ್ತಾಗ, ಅನು: ಸರಸ್ವತಿ ರಿಸಬುಡ್, ಅಧ್ಯಯನ ಪ್ರಕಾಶನ ಶಿರಸಿ, ಉತ್ತರ ಕನ್ನಡ, ೨೦೦೦

೧೧. ಜಯಮ್ಮ. ಬಿ ; ಅಭಿನೇತ್ರಿ, ಕಲಾ ಸಾಹಿತ್ಯ ಪ್ರಕಾಶನ ಬೆಂಗಳೂರು, ೧೯೭೯

೧೨. ಜಾಜಿ ತಿಮ್ಮಯ್ಯ ; ಹೆಜ್ಜೇನು, ಡೀಡ್ ಸಂಸ್ಥೆ ಹೆಚ್. ಡಿ. ಕೋಟೆ ರಸ್ತೆ, ಹುಣಸೂರು, ಮೈಸೂರು, ೨೦೦೬

೧೩. ನಳಿನಿ ಜಮೀಲಾ (ಮೂಲ) ; ಸೆಕ್ಸ್ ವರ್ಕರ್ ಒಬ್ಬಳ ಆತ್ಮಕಥನ, ಅನು: ಕೆ. ನಾರಾಯಣ ಸ್ವಾಮಿ, ಸೃಷ್ಟಿ ಪಬ್ಲಿಕೇಶನ್, ವಿಜಯನಗರ, ಬೆಂಗಳೂರು, ೨೦೦೬

೧೪. ನಾಗರತ್ನಮ್ಮ. ಕೆ ; ಮರಿಯಮ್ಮನಹಳ್ಳಿ ರಂಗಸಿರಿ, ಬರಹ ಪಬ್ಲಿಷಿಂಗ್ ಹೌಸ್ ಬೆಂಗಳೂರು, ೧೯೯೯

೧೫. ಬೇಬಿ ತಾಯಿ ಕಾಂಬಳೆ (ಮೂಲ) ; ಬದುಕು ನಮ್ಮದು, ಅನು: ಚಂದ್ರಕಾಂತ ಪೋಕಳೆ, ನವಕರ್ನಾಟಕ ಪ್ರಕಾಶನ ಬೆಂಗಳೂರು, ೨೦೦೯

೧೬.ಬೇಬಿ ಹಾಲ್ದಾರ್ (ಮೂಲ) ; ನೋವು ತುಂಬಿದ ಬದುಕು, ಅನು: ಜಿ. ಕುಮಾರಪ್ಪ, ನವಕರ್ನಾಟಕ ಪ್ರಕಾಶನ ಬೆಂಗಳೂರು, ೨೦೦೯

೧೭.ಮಂಗಳಾ ಚಿ. ನ ; ಅಧ್ಯಾಪಕಿಯಾಗಿ ೨೫ ವರುಷ, ಎನ್. ಎಂ. ಕೆ. ಆರ್. ವಿ. ಮಹಿಳಾ ಪ್ರಥಮದರ್ಜೆ ಕಾಲೇಜು, ಬೆಂಗಳೂರು, ೧೯೮೫

೧೮.ಮಂಗಳಾ ಚಿ. ನ ; ಪ್ರಾಂಶುಪಾಲೆಯಾಗಿ ಇಪ್ಪತ್ತು ವರ್ಷ, ಎನ್.ಎಂ.ಕೆ.ಆರ್.ವಿ.ಮಹಿಳಾ ಪ್ರಥಮದರ್ಜೆ ಕಾಲೇಜು ಬೆಂಗಳೂರು, ೧೯೯೧

೧೯. ಮಂಗಳಾ ಚಿ. ನ ; ಸ್ನೇಹಸಿಂಧು, ಎನ್.ಎಂ.ಕೆ.ಆರ್.ವಿ.ಮಹಿಳಾ ಪ್ರಥಮದರ್ಜೆ ಕಾಲೇಜು ಬೆಂಗಳೂರು, ೧೯೯೬

೨೦. ಮಾಧವಿ ದೇಸಾಯಿ (ಮೂಲ) ; ಕುಣಿಯೇ ಘುಮಾ, ಅನು:ಚಂದ್ರಕಾಂತ ಪೋಕಳೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೭

೨೧.ವೀಣಾಧರಿ ; ಎಚ್.ಐ.ವಿ ಮತ್ತು ನಾನು, 'ಸುಧಾ' ಪರಶುರಾಮ ನಗರ ಮಂಗಳೂರು, ೨೦೦೫

೨೨. ಸರಸ್ವತಿ. ದು ; ಈಗೇನ್ ಮಾಡೀರಿ?, ಮಾನಸ, ಪಂಚಾಯತಿ ರಸ್ತೆ, ಆಡುಗೋಡಿ ಅಂಚೆ, ಬೆಂಗಳೂರು, ೨೦೦೧

೨೩.ಸಾರಾ ಅಬೂಬಕ್ಕರ್ ; ಹೊತ್ತು ಕಂತುವ ಮುನ್ನ, ಚಂದ್ರಗಿರಿ ಪ್ರಕಾಶನ, ಮೈಕ್ರೋವೇವ್ ಸ್ಟೇಷನ್ ಹತ್ತಿರ, ಮಂಗಳೂರು, ೨೦೧೦

೨೪.ಸುನೀತಾ ದೇಶಪಾಂಡೆ (ಮೂಲ) ; ಬಾಳು ಸೊಗಸಾದರೂ, ಅನು: ಉಮಾ ವಿರೂಪಾಕ್ಷ ಕುಲಕರ್ಣಿ, ಸತ್ಯಶ್ರೀ ಪ್ರಿಂಟರ್ಸ್, ಬೆಂಗಳೂರು, ೨೦೦೪

೨೫.ಸುಂದರಮ್ಮ ಮಳವಳ್ಳಿ ; ಅಭಿನಯ ಶಾರದೆ, ಮಳವಳ್ಳಿ ಕಲಾ ಸಾಹಿತ್ಯ ಪ್ರಕಾಶನ ಬೆಂಗಳೂರು, ೧೯೭೫.

೧.೨.ಅನುಷಂಗಿಕ ಆಕರಗಳು

೧. ರೋಹಿಣಿ ಬಿ. ಎಂ; ಅಧ್ಯಾಪಕಿಯ ಅಧ್ವಾನಗಳು, ಶಿಕ್ಷಣ ಸಂಗತಿ ಬಳಗ, ಸುಂದರಿಭಾಗ್ ಉಳ್ಳಾಲ ಮಂಗಳೂರು, ೨೦೦೭

೨. ಶಶಿಕಲಾ ವೀರಯ್ಯ ಸ್ವಾಮಿ ; ಅಪ್ಪ ಮತ್ತು ಮಣ್ಣು, ಸುವರ್ಣ ಪ್ರಕಾಶನ ಸಿಂದಗಿ, ೨೦೦೪

೩. ಶಾರದಾ. ವಿ. ಗೋಕಾಕ್ ; ಒಲವೇ ನಮ್ಮ ಬದುಕು, ಸುರುಚಿ ಪ್ರಕಾಶನ, ಸರಸ್ವತಿಪುರಂ ಮೈಸೂರು, ೧೯೯೭

೪. ಶೈಲಜಾ ನಾಗರಘಟ್ಟ ; ಕಿಚ್ಚಿಲ್ಲದ ಬೇಗೆ, ಊರುಕೇರಿ ಪ್ರಕಾಶನ, ಶಾರದಾನಗರ, ತಿಪಟೂರು, ೨೦೦೫

೫. ಸುವಾಸಿನಿ. ಡಿ ; ಗುತ್ತಿನ ಮನೆಯಿಂದ ಜಗತ್ತಿನ ಅಂಗಳಕ್ಕೆ, ಡಿ.ಸುವಾಸಿನಿ, ರಾಜಮಹಲ್ ಅಪಾರ್ಟಮೆಂಟ್ ಬಲ್ಲಾಲ್‌ಬಾಗ್ ಮಂಗಳೂರು, ೧೯೯೭

೬. ಸುಶ್ಮಿತಾ ಬಂಡೋಪಾಧ್ಯಾಯ (ಮೂಲ) ; ಕಾಬೂಲಿವಾಲನ ಬಂಗಾಳಿ ಹೆಂಡತಿ, ಅನು: ಜಿ.ಕುಮಾರಪ್ಪ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೨೦೦೩

ಅನುಬಂಧ– ೨

೨.೧ ಪರಾಮರ್ಶಾನಾ ಕೃತಿಗಳು

೧. ಅನುಪಮಾ ನಿರಜನ ; ಮಾನಿನಿ, ಡಿ. ವಿ. ಕೆ ಮೂರ್ತಿ, ಮೈಸೂರು, ೧೯೯೬

೨. ಅರವಿಂದ ಮಾಲಗಿತ್ತಿ (ಸಂ) ; ದಲಿತಮಾರ್ಗ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೩. ಆರ್ಯಾಂಬಾ ಪಟ್ಟಾಭಿ (ಸಂ) ; ಮಹಿಳಾ ಸಾಹಿತ್ಯ ಸಮೀಕ್ಷೆ, ಕರ್ನಾಟಕ ಲೇಖಕಿಯರ ಸಂಘ, ಸಂವಹನ, ಮೈಸೂರು, ೨೦೦೪

೪. ಆಶಾದೇವಿ ಎಂ. ಎಸ್. ; ನಡುವೆ ಸುಳಿವ ಆತ್ಮ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೧

೫. ಇಂದಿರಾ. ಆರ್ ; ಮಹಿಳೆ, ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೨

೬. ಈಶ್ವರ ಭಟ್ಟ ಬೋಳಂತಕೋಡಿ (ಸಂ) ; ಅನುಪಮಾ ಅಭಿನಂದನ, ಕರ್ನಾಟಕ ಸಂಘ, ಪುತ್ತೂರು, ೧೯೮೮

೭. ಉಷಾ ಪಿ. ರೈ, ವಿಜಯಲಕ್ಷ್ಮೀ (ಸಂ) ; ಲೇಖ–ಲೋಕ–೪, ಕರ್ನಾಟಕ ಲೇಖಕಿಯರ ಸಂಘ (ರಿ), ಚಾಮರಾಜ ಪೇಟೆ, ಬೆಂಗಳೂರು, ೨೦೦೩

೮. ಉಷಾ ಪಿ. ರೈ, ಸಂಧ್ಯಾರೆಡ್ಡಿ ಕೆ. ಆರ್ (ಸಂ) ; ಲೇಖ–ಲೋಕ ೩, ಕರ್ನಾಟಕ ಲೇಖಕಿಯರ ಸಂಘ (ರಿ), ಚಾಮರಾಜಪೇಟೆ, ಬೆಂಗಳೂರು, ೨೦೦೧

೯. ಕರ್ನಾಟಕ ಭಾರತಿ ಬೆಳ್ಳಿ ಹಬ್ಬ ಸಂಯುಕ್ತ ಸಂಚಿಕೆ ; ಆಧುನಿಕ ಕನ್ನಡ ಸಾಹಿತ್ಯ ರೂಪಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ, ೧೯೯೬

೧೦. ಕಮಲಾ ಹೆಮ್ಮಿಗೆ (ಸಂ) ; .ಶಾರದಾ ಹೆಮ್ಮಿಗೆ: ಬದುಕು ಬರಹ, ಸ್ಫೂರ್ತಿ ಪ್ರಕಾಶನ, ಜಿ. ಕೆ. ವಿ.ಕೆ. ಯಲಹಂಕ, ಬೆಂಗಳೂರು, ೨೦೦೦

೧೧. ಕಲಬುರ್ಗಿ ಎಂ. ಎಂ. ; ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಡಾ.ಎಂ.ಎಂ.ಕಲಬುರ್ಗಿ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ೧೯೭೩

೧೨. ಕವಿತಾ ರೈ ; ಮಹಿಳೆ: ಅಸ್ತಿತ್ವದ ಸಂಕಥನ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೦೯

೧೩. ಕಿಶೋರಿ ನಾಯಕ್. ಕೆ ; ಸ್ತ್ರೀವಾದ: ನೆಲೆಗಳು ಹಾಗೂ ನಿಲುವುಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ೧೯೯೯

೧೪. ಕೇಶವ ಶರ್ಮ. ಕೆ ; ಸ್ತ್ರೀವಾದಿ ವಿಮರ್ಶೆ, ಅನ್ವೇಷಣ ಪ್ರಕಾಶನ, ಬೆಂಗಳೂರು, ೧೯೯೨

೧೫. ಗಾಯತ್ರೀ ನಾವಡ ; ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

೧೬. ಗಾಯತ್ರೀ ನಾವಡ ; ವಿರಚನೆ, ಎನ್. ಆರ್. ಎ. ಎಂ. ಎಚ್. ಪ್ರಕಾಶನ, ಕೋಟೇಶ್ವರ, ದಕ್ಷಿಣ ಕನ್ನಡ, ೧೯೯೭

೧೭. ಗೀತಾ ಕೃಷ್ಣಮೂರ್ತಿ ; ಮಹಿಳೆ–ಸಮಾಜ–ಕಾನೂನು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ೨೦೦೭

೧೮. ತಾರಾನಾಥ್. ಎನ್. ಎಸ್ (ಸಂ) ; ಶತಮಾನದ ಸಂಶೋಧನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು, ೨೦೦೧

೧೯. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ (ಸಂ) ; ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕನ್ನಡ ಸಂಘ , ಕ್ರೈಸ್ಟ್ ಕಾಲೇಜು, ಬೆಂಗಳೂರು ೧೯೯೪

೨೦. ದಂಡಪ್ಪ ಎಚ್ (ಸಂ) ; ಬಡವರ ನಗುವಿನ ಶಕ್ತಿ, ಅಂಕಿತ ಪುಸ್ತಕ ಪ್ರಕಾಶನ, ಬಸವನ ಗುಡಿ, ಬೆಂಗಳೂರು, ೨೦೦೧

೨೧. ನಾಯಕ ಹಾ. ಮಾ. (ಸಂ) ; ಕನ್ನಡ ವಿಶ್ವಕೋಶ ಸಂಪುಟ- ೩, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ೧೯೭೧

೨೨.ನಿಂಗಮಾರಯ್ಯ ; ಸಮಕಾಲೀನ ಕನ್ನಡ ದಲಿತ ಲೇಖಕರ ಸಾಮಾಜಿಕ ಚಿಂತನೆ (ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯದಲ್ಲಿ) ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು, ೨೦೦೪

೨೩.ನೇಮಿಚಂದ್ರ ; ಮಹಿಳಾ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು, ೨೦೦೧

೨೪.ನೇಮಿಚಂದ್ರ (ಸಂ) ; ಮಹಿಳಾ ಲೋಕ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೫

೨೫.ಪುಟ್ಟಯ್ಯ. ಬಿ. ಎಂ. ; ಆತ್ಮಕಥೆಗಳಲ್ಲಿ ಕರ್ನಾಟಕದ ಕತೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ೧೯೯೯

೨೬.ಬಸವರಾಜ ಕಲ್ಗುಡಿ ; ನಕ್ಷೆ- ನಕ್ಷತ್ರ, ಕನ್ನಡ ಸಂಘ, ಕ್ರೈಸ್ತಕಾಲೇಜು, ಬೆಂಗಳೂರು, ೧೯೯೯

೨೭.ಬಸವರಾಜ ಸಬರದ (ಸಂ) ; ಕನ್ನಡ ವಾರ್ಷಿಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೧

೨೮.ಬಸವರಾಜು ಎಲ್ (ಸಂ) ; ಅಕ್ಕನ ವಚನಗಳು, ಗೀತಾಬುಕ್ ಹೌಸ್, ಮೈಸೂರು, ೧೯೯೦

೨೯.ಬಾಲಸುಬ್ರಹ್ಮಣ್ಯ ನರಹಳ್ಳಿ ; ಸಾಹಿತ್ಯ ಸಂಸ್ಕೃತಿ, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು, ೧೯೯೮

೩೦. ರಮಾಕುಮಾರಿ. ಬಾ. ಹ ; ಮಹಿಳೆಯರ ಸ್ಥಾನಮಾನ ಮತ್ತು ಸಂಘಟನೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೬

೩೧.ರವೀಂದ್ರನಾಥ. ಕೆ ; ಕನ್ನಡ ದಾಖಲು ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೧

೩೨.ರಹಮತ್ ತರೀಕೆರೆ ; ಚಿಂತನೆಯ ಪಾಡು, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು, ೨೦೧೦

೩೩.ರಹಮತ್ ತರೀಕೆರೆ (ಸಂ) ಹೊಸ ತಲೆಮಾರಿನ ತಲ್ಲಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೮

೩೪.ರಾಘವೇಂದ್ರ ರಾವ್ ಎಚ್. ಎಸ್ (ಸಂ) ; ಶತಮಾನದ ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧

೩೫.ಲೀಲಾ ಪಾಟೀಲ್ (ಮೂಲ) ; ಭಾರತೀಯ ಸ್ತ್ರೀ-ಜೀವನ, ಕನ್ನಡಕ್ಕೆ ಡಾ. ವಿಠ್ಠಲರಾವ್ ಟಿ. ಗಾಯಕ್ವಾಡ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯

೩೬.ವಿಜಯಲಕ್ಷ್ಮೀ ಕೆ. ಎಂ ; ಹೊಸಗನ್ನಡದ ೭೫ ಲೇಖಕಿಯರು, ಸುಮುಖ ಪ್ರಕಾಶನ, ಬೆಂಗಳೂರು, ೨೦೦೮

೩೭.ವಿಜಯಶ್ರೀ ಸಬರದ (ಸಂ) ; ಮಹಿಳೆ ಶೋಷಣೆ–ಸವಾಲುಗಳು, ಪ್ರಸಾರಾಂಗ ಗುಲ್ಬಾರ್ಗ ವಿಶ್ವವಿದ್ಯಾಲಯ ಗುಲ್ಬಾರ್ಗ ೨೦೦೫

೩೮.ವಿಜಯಾದಬ್ಬೆ ; ಅನುಪಮಾ ನಿರಂಜನ , ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೮

೩೯.ವಿಜಯಾದಬ್ಬೆ ; ನಾರಿ: ದಾರಿ–ದಿಗಂತ, ರಚನಾ ಪ್ರಕಾಶನ ಮೈಸೂರು, ೧೯೯೭

೪೦. ವೀಣಾ ಶಾಂತೇಶ್ವರ ; ಇಲ್ಲಿಂದ ಮುಂದೆಲ್ಲಿಗೆ? ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ೨೦೦೯

೪೧.ವಿವಿಧ ಲೇಖಕರು ; ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬

೪೨.ವಿವಿಧ ಲೇಖಕರು ; ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬

೪೩.ಶಿವಾನಂದ ಎಸ್ ವಿರಕ್ತಮಠ ; ಮಹಿಳೆ ಮತ್ತು ಧರ್ಮ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೧

೪೪.ಶೇಷಗಿರಿರಾವ್. ಎಸ್. ಎಲ್ (ಸಂ); ಭಾರತೀಯ ಸಾಹಿತ್ಯ ಸಮೀಕ್ಷೆ, ಸಂಪುಟ–೨, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೧

೪೫.ವೆಂಕಟಲಕ್ಷ್ಮೀ. ಬಿ.ಎಸ್ ; ಬದುಕು ಬವಣೆ ಭರವಸೆ, ಎನ್.ಟಿ.ಶ್ಯಾಂ ಪ್ರಕಾಶನ, ಬೆಂಗಳೂರು, ೧೯೯೪

೪೬.ವೆಂಕಟಲಕ್ಷ್ಮೀ ಬಿ ಎಸ್ ; ಕನ್ನಡ ಲೇಖಕಿಯರ ನೆಲೆ –ಬೆಲೆ, ಎನ್. ಟಿ. ಪ್ರಕಾಶನ, ಬೆಂಗಳೂರು, ೧೯೯೧

೪೭.ಶರಣಮ್ಮ. ಅ. ಗೋರೆಬಾಳ ; ಕನ್ನಡ ಸಾಹಿತ್ಯದಲ್ಲಿಆತ್ಮಚರಿತ್ರೆ, ದಲಿತಸಾಹಿತ್ಯ ಪರಿಷತ್ ರಾಜ್ಯ ಘಟಕ ಗದಗ, ೨೦೦೨

೪೮.ಶಾಲಿನಿ ರಂಗನಾಥ ; ಸಮನ್ವಿತ, ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ, ೧೯೯೪

೪೯.ಶಾಸ್ತ್ರೀ. ಪಿ. ವಿ ; ಸಾಹಿತ್ಯದ ಪ್ರಕಾರಗಳು, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೯೧

೫೦. ಶಿವರುದ್ರಪ್ಪ ಜಿ. ಎಸ್ ; ಕನ್ನಡ ಸಾಹಿತ್ಯ ಸಮೀಕ್ಷೆ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ೧೯೭೫

೫೧.ಶೇಷಗಿರಿರಾವ್. ಎಸ್. ಎಲ್ (ಸಂ); ಭಾರತೀಯ ಸಾಹಿತ್ಯ ಸಮೀಕ್ಷೆ, ಸಂಪುಟ–೨, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೧

೫೨.ಶ್ರೀಮತಿ ಎಚ್. ಎಸ್ ; ಹೆಣ್ಣು ಬರೆಹದ ಒಳಬಂಡಾಯ, ಪ್ರಗತಿ ಗ್ರಾಫಿಕ್ಸ್ ಬೆಂಗಳೂರು, ೨೦೧೧

೫೩.ಶ್ರೀಮತಿ ಎಚ್. ಎಸ್, ಶಿವಾನಂದ ವಿರಕ್ತಮಠ. ಎಸ್, ಕೃಷ್ಣ. ಜೆ (ಸಂ) ; ಹೆಣ್ಣು ಮತ್ತು ಭಾಷೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ೨೦೦೭

೫೪.ಶೈಲಜ ಹಿರೇಮಠ, ಎಚ್. ಎಸ್. ಶ್ರೀಮತಿ ಎಚ್. ಎಸ್ (ಸಂ) ; ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೬

೫೫.ಸಬಿಹಾ (ಸಂ) ; ಚಂದ್ರಗಿರಿ, ಸಿರಿವರ ಪ್ರಕಾಶನ, ಬೆಂಗಳೂರು, ೨೦೦೯

೫೬.ಸಬಿಹಾ (ಸಂ) ; ಮಹಿಳಾ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,೨೦೦೬

೫೭.ಸಬಿಹಾ ಭೂಮಿಗೌಡ ; ಅನುಸಂಧಾನ, ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ, ೨೦೧೧

೫೮.ಸಬಿಹಾ ಭೂಮಿಗೌಡ (ಸಂ) ; ಮಹಿಳಾ ಆತ್ಮಕಥೆಗಳು: ಅನುಸಂಧಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೭

೫೯.ಸಬಿಹಾ ಭೂಮಿಗೌಡ ; ಸಾಹಿತ್ಯದ ಸಂಘರ್ಷದ ನೆಲೆಗಳು, ಪ್ರಸಾರಾಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು, ೨೦೧೧

೬೦. ಸಿಮೋನ್ ದಿ ಬೊವಾ (ಮೂಲ) ; ದ ಸೆಕೆಂಡ್ ಸೆಕ್ಸ್– ಒಂದು ಕನ್ನಡ ಓದು, ಅನು: ಎಚ್. ಎಸ್. ಶ್ರೀಮತಿ, ಅಧ್ಯಯನ ಮಂಡಲ, ಬೆಂಗಳೂರು, ೨೦೦೭

೬೧.ಸುಮಿತ್ರಾ ಬಾಯಿ ಬಿ. ಎನ್ ; ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬

೬೨.ಸುಮಿತ್ರಾ ಬಾಯಿ ಬಿ. ಎನ್ ; ಸ್ತ್ರೀವಾದಿ ಪ್ರವೇಶಿಕೆ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೧೯೯೫

೬೩.ಹಳ್ಳಿಕೇರಿ ಎಫ್. ಟಿ, ರವೀಂದ್ರನಾಥ. ಕೆ (ಸಂ) ; ದಶಕದ ಕನ್ನಡ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೬೪.ಹೇಮಲತಾ. ಎಚ್. ಎಂ ; ಮಹಿಳಾ ಅಧ್ಯಯನ–೨, ಡಿ. ವಿ. ಕೆ ಮೂರ್ತಿ ಮೈಸೂರು, ೨೦೦೭

೬೫.Ammulu kutty ; Women's Autobiography and the persona: Towards a poetics of self explanation , English department, Mangalore University, 2007

೬೬.www.shodhaganga.influnet.ac.in (ಅಂತರ್ಜಾಲ ಆಕರ)

೨.೨ ಪತ್ರಿಕೆಯ ಲೇಖನಗಳು

೧. ಕುಮಾರಪ್ಪ. ಜಿ ; ಮನೆಗೆಲಸದವಳ ಆತ್ಮಚರಿತ್ರೆ, ಹೊಸತು, ಜನವರಿ ೨೦೦೭

೨. ಚಂದ್ರಕಾಂತ ಪೋಕಳೆ ; ಮರಾಠಿಯಲ್ಲಿ ಮಹಿಳಾ ಆತ್ಮಕಥೆಗಳು ನಿವೇದನೆಯ ಹೊಸ ಅಲೆ, ಹೊಸತು ಮಾರ್ಚ್ ೨೦೦೧

೩. ಚಂಪಾ ; ಗಂಡು ಹೆಣ್ಣಾದ ಬದುಕಿನ ಕಥನಗಳು, ಸಂವಾದ, ಆಗಸ್ಟ್ ೨೦೧೧

೪. ಡಿಸೋಜ. ನಾ ; ತಮಿಳು ಭಾಷೆಯ ಮೊದಲ ದಲಿತ ಆತ್ಮಕಥೆ ಭಾಮಾ ಅವರ ಕರುಕ್ಕು, ಹೊಸತು ಆಗಸ್ಟ್ ೨೦೦೮

೫. ವನಜ ವೆಂ ; ದಲಿತ ಮಹಿಳೆಯ ಆತ್ಮಕತೆ, ನಮ್ಮ ಮಾನಸ, ೨೦೧೦

೬. ಶಿವರಾಮಯ್ಯ ; ಬದುಕು ನಮ್ಮದು, ದಲಿತ ಭಾರತ ಕಥನ ಪೂರ್ವ ಪೀಠಿಕೆ, ಹೊಸತು, ಏಪ್ರಿಲ್ ೨೦೧೦